ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 15 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 326 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4

ಬಿಜೆಪಿಯಲ್ಲಿ ಬೇಸರ


ರಾಜ್ಯದ ಮೊದಲ ಪಟ್ಟಿಯಲ್ಲಿ ಟಿಕೆಟ್ ವಂಚಿತ ಕರಡಿ ಸಂಗಣ್ಣ, ರೇಣುಕಾಚಾರ್ಯ, ಈಶ್ವರಪ್ಪ, ಮಾಧುಸ್ವಾಮಿ, ಜಗದೀಶ್ ಶೆಟ್ಟರ್, ಸಿ.ಟಿ.ರವಿ ಸಿಡಿಮಿಡಿ; ಬೆಂಬಲಿಗರ ಆಕ್ರೋಶ


ಕರಡಿ ಸಂಗಣ್ಣ


ರೇಣುಕಾಚಾರ್ಯ


ಕೆ.ಎಸ್.ಈಶ್ವರಪ್ಪ


ಮಾಧುಸ್ವಾಮಿ


ಜಗದೀಶ್ ಶೆಟ್ಟರ್


ಸಿ.ಟಿ.ರವಿ

ಮೈಸೂರು, ಮಾ.14–ರಾಜ್ಯದ ಇಪ್ಪತ್ತು ಲೋಕ ಸಭಾ ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳ ಹೆಸರು ಪ್ರಕಟವಾಗುತ್ತಿದ್ದಂತೆಯೇ ಹಲವೆಡೆ ಅಸಮಾಧಾನ ಭುಗಿಲೆದ್ದಿದೆ. ಕೆಲವರು ಬಂಡಾಯವೆದ್ದಿದ್ದಾರೆ. ಕೊಪ್ಪಳ ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರು ದಾಂಧಲೆ ನಡೆಸಿದ್ದಾರೆ.

ಕೊಪ್ಪಳದಲ್ಲಿ ದಾಂಧಲೆ: ಕೊಪ್ಪಳದಲ್ಲಿ ಹಾಲಿ ಸಂಸದ ಕರಡಿ ಸಂಗಣ್ಣ ಅವರಿಗೆ ಟಿಕೆಟ್ ಕೈತಪ್ಪಿದ್ದರಿಂದ ಅವರು ತೀವ್ರ ಅಸಮಾಧಾನಗೊಂಡಿದ್ದಾರೆ. ಅಲ್ಲದೇ ಅವರ ಅಭಿಮಾನಿಗಳು ಇಂದು ಕೊಪ್ಪಳ ಬಿಜೆಪಿ ಕಚೇರಿಗೆ ನುಗ್ಗಿ ಪೀಠೋಪಕರಣಗಳನ್ನು ಧ್ವಂಸ ಮಾಡಿ, ದಾಂಧಲೆ ನಡೆಸಿದ್ದಾರೆ. ಇದೇ ಸಂದರ್ಭದಲ್ಲಿ ಕಚೇರಿಗೆ ಆಗಮಿಸಿದ ಅಧಿಕೃತ ಅಭ್ಯರ್ಥಿ ಬಸವರಾಜು ಅವರಿಗೆ ಮುತ್ತಿಗೆ ಹಾಕಿ ಧಿಕ್ಕಾರದ ಘೋಷಣೆ ಕೂಗಿದ್ದಾರೆ. ಪೊಲೀಸರು ಬಸವರಾಜು ಅವರನ್ನು ಸುರಕ್ಷಿತವಾಗಿ ಕಚೇರಿಯಿಂದ ಹೊರಗೆ ಕರೆದೊಯ್ದಿದ್ದಾರೆ.

ಸಿದ್ದೇಶ್ವರ್ ಸದ್ದಾಂ ಹುಸೇನ್: ದಾವಣಗೆರೆಯಲ್ಲಿ ಹಾಲಿ ಸಂಸದ ಸಿದ್ದೇಶ್ವರ್ ಪತ್ನಿ ಗಾಯಿತ್ರಿ ಸಿದ್ದೇಶ್ವರ್ ಅವರಿಗೆ ಟಿಕೆಟ್ ನೀಡಿರುವುದನ್ನು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ತೀವ್ರವಾಗಿ ವಿರೋಧಿಸಿದ್ದಾರೆ. ಸಿದ್ದೇಶ್ವರ್ ಅವರನ್ನು ಸದ್ದಾಂ ಹುಸೇನ್ ಎಂದು ಜರಿದಿರುವ ಅವರು, ನಾವು ಸಿದ್ದೇಶ್ವರ್ ಹಾಗೂ ಅವರ ಕುಟುಂಬದವರಿಗೆ ಟಿಕೆಟ್ ನೀಡಬಾರದು ಎಂದು ಮನವಿ ಮಾಡಿದ್ದೆವು. ಆದರೂ ಯಾವುದೇ ಅಭಿವೃದ್ಧಿ ಕಾರ್ಯಗಳಾಗಲೀ, ಪಕ್ಷ ಸಂಘಟನೆಯಾಗಲೀ ಮಾಡದೇ ಇರುವ ಸಿದ್ದೇಶ್ವರ್ ಕುಟುಂಬದವರಿಗೆ ಟಿಕೆಟ್ ನೀಡಿರುವುದು ಖಂಡನೀಯ. ತಕ್ಷಣವೇ ಅಭ್ಯರ್ಥಿಯನ್ನು ಬದಲಾಯಿಸಬೇಕು ಎಂದು ಆಗ್ರಹಿಸಿದರು.

ಈಶ್ವರಪ್ಪ ಆಕ್ರೋಶ: ಮಗನಿಗೆ ಹಾವೇರಿ ಟಿಕೆಟ್ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಕೆ.ಎಸ್.ಈಶ್ವರಪ್ಪ, ಈ ಕ್ಷೇತ್ರದ ಟಿಕೆಟ್ ಅನ್ನು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೀಡಿರುವುದರಿಂದ ಕೆರಳಿ ಕೆಂಡವಾಗಿದ್ದಾರೆ. ಬಂಡಾಯವಾಗಿ ಸ್ಪರ್ಧಿಸುವುದಾಗಿ ಪರೋಕ್ಷ ಎಚ್ಚರಿಕೆಯನ್ನೂ ನೀಡಿದ್ದಾರೆ. ಯಡಿಯೂರಪ್ಪ ನಮಗೆ ಅನ್ಯಾಯ ಮಾಡಿದ್ದಾರೆ. ಶೋಭಾ ಕರಂದ್ಲಾಜೆ ಅವರಿಗೆ ಟಿಕೆಟ್ ಪಡೆಯಲು ●9ನೇ ಪುಟಕ್ಕೆ

ರಾಜ್ಯಸಭೆ ಸದಸ್ಯೆಯಾಗಿ ಸುಧಾಮೂರ್ತಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕಾರ



ನವದೆಹಲಿ, ಮಾ.14– ಲೇಖಕಿ, ಸಮಾಜ ಸೇವಕಿ, ಇನ್ಫೋಸಿಸ್ ಫೌಂಡೇಷನ್‌ನ ಸುಧಾಮೂರ್ತಿ ಅವರು ಇಂದು ದೆಹಲಿಯಲ್ಲಿ ರಾಜ್ಯಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಮೂಲತಃ ಇಂಜಿನಿಯರ್ ಆಗಿರುವ ಸುಧಾಮೂರ್ತಿ ಅವರು ತಮ್ಮ ಪತಿ ಎನ್.ಆರ್.ನಾರಾಯಣ ಮೂರ್ತಿ ಅವರ ಸಮ್ಮುಖದಲ್ಲಿ ರಾಜ್ಯಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧಂಖರ್ ಅವರು ಸಂಸತ್ ಭವನದ ತಮ್ಮ ಕಚೇರಿಯಲ್ಲಿ ಪ್ರಮಾಣ ವಚನ ಬೋಧಿಸಿದರು. ಈ ಸಂದರ್ಭದಲ್ಲಿ ಸಭಾ ನಾಯಕ ಪಿಯೂಷ್ ಗೋಯಲ್ ಕೂಡ ಉಪಸ್ಥಿತರಿದ್ದರು.

ಕನ್ನಡದಲ್ಲಿ ಪ್ರಮಾಣವಚನ: 73 ವರ್ಷದ ಸುಧಾ ಮೂರ್ತಿ, ಇನ್ಫೋಸಿಸ್ ಫೌಂಡೇಶನ್‌ನ ಮಾಜಿ ಅಧ್ಯಕ್ಷೆಯಾಗಿದ್ದು ಹಲವು ಪುಸ್ತಕಗಳ ಲೇಖಕಿಯಾಗಿ, ವಿಶೇಷವಾಗಿ ಮಕ್ಕಳ ಪುಸ್ತಕ ಬರೆದು ಜನಪ್ರಿಯರಾಗಿದ್ದಾರೆ. ಇನ್ಫೋಸಿಸ್ ಫೌಂಡೇಶನ್ ಮೂಲಕ ಹಲವಾರು ಸಾಮಾಜಿಕ ಕಾರ್ಯಗಳನ್ನು ಕೈಗೊಂಡು ಸಾಕಷ್ಟು ಜನಪ್ರಿಯರಾಗಿದ್ದಾರೆ.

ಮೂಲತಃ ಹುಬ್ಬಳ್ಳಿ ಮೂಲದ ಸುಧಾಮೂರ್ತಿಯವರಿಗೆ ಕನ್ನಡ ಭಾಷೆಯೆಂದರೆ ವಿಶೇಷ ಒಲವು, ಅಚ್ಚುಮೆಚ್ಚು. ಅದನ್ನು ಪದೇಪದೆ ನಿರೂಪಿಸುತ್ತಿರುತ್ತಾರೆ. ಇಂದು ರಾಜ್ಯಸಭೆ ಸದಸ್ಯರಾಗಿ ಕೂಡ ಅವರು ಕನ್ನಡದಲ್ಲಿಯೇ ಪ್ರಮಾಣವಚನ ಸ್ವೀಕರಿಸಿದರು. ಕಳೆದ ಶುಕ್ರವಾರ ಅಂತಾರಾಷ್ಟ್ರೀಯ ಮಹಿಳಾ ದಿನದಂದು ಕೇಂದ್ರ ಸರ್ಕಾರ ಅವರನ್ನು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿತ್ತು. ಸುಧಾಮೂರ್ತಿಯವರು ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಹೆಸರುವಾಸಿಯಾಗಿ ದ್ದಾರೆ. ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪುರಸ್ಕಾರ, ಪದ್ಮಶ್ರೀ (2006) ಮತ್ತು ಪದ್ಮಭೂಷಣ (2023) ಪುರಸ್ಕೃತರಾಗಿದ್ದಾರೆ. ಟೆಲ್ಕೊದೊಂದಿಗೆ ಕೆಲಸ ಮಾಡಿದ ಮೊದಲ ಮಹಿಳಾ ಇಂಜಿನಿಯರ್ ಆಗಿರುವ ಸುಧಾಮೂರ್ತಿ, ಜಗದ್ವಿಖ್ಯಾತಿ ಪಡೆದಿರುವ ಇನ್ಫೋಸಿಸ್ ಅನ್ನು ಪ್ರಾರಂಭಿಸಲು ತಮ್ಮ ಪತಿ ನಾರಾಯಣ ಮೂರ್ತಿಯವರಿಗೆ 10,000 ರೂಪಾಯಿ ಹಣ ಒದಗಿಸಿದ್ದರು. ಅವರ ಮಗಳು ಅಕ್ಷತಾ ಅವರು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರನ್ನು ವಿವಾಹವಾಗಿದ್ದಾರೆ.

ಸಮಾಜಕ್ಕೆ ದೊಡ್ಡ ಮಟ್ಟದಲ್ಲಿ ಕೊಡುಗೆ ನೀಡಲು ರಾಜಕೀಯಕ್ಕೆ ಬಂದಿದ್ದೇನೆ

● ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಕ್ರಿಯೆ ● ಬಿಜೆಪಿ ಕಚೇರಿಗೆ ಭೇಟಿ ; ಅದ್ದೂರಿ ಸ್ವಾಗತ



ಮೈಸೂರಿನ ಬಿಜೆಪಿ ಕಚೇರಿಗೆ ಗುರುವಾರ ಭೇಟಿ ನೀಡಿದ್ದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಸನ್ಮಾನಿಸಲಾಯಿತು.

> “ ಇಡೀ ದಕ್ಷಿಣ ಭಾರತದಲ್ಲೇ ಮೈಸೂರು ಪ್ರವಾಸೋದ್ಯಮದ ಮುಖ್ಯ ಕೇಂದ್ರವಾಗಿಸಬೇಕೆಂಬುದು ನನ್ನ ಉದ್ದೇಶ. ಜೊತೆಗೆ ಅನೇಕ ಬ್ರ್ಯಾಂಡ್‌ಗಳು ಇಲ್ಲಿದ್ದು, ಅವುಗಳಿಗೆ ಪ್ರೋತ್ಸಾಹ ನೀಡಬೇಕು. ಪಕ್ಷದ ಮುಖಂಡರು ಎಲ್ಲದಕ್ಕೂ ಮಾರ್ಗದರ್ಶನ ಮಾಡಲಿದ್ದಾರೆ. ಅವರ ಸಲಹೆ ಯೊಂದಿಗೆ ಮುಂದುವರೆಯುತ್ತೇನೆ.
> –ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್

ಮೈಸೂರು,ಮಾ.14(ಪಿಎಂ)– ಸಮಾಜಕ್ಕೆ ದೊಡ್ಡ ಮಟ್ಟದಲ್ಲಿ ಕೊಡುಗೆ ನೀಡಲು ರಾಜಕೀಯ ಅಧಿಕಾರ ಅಗತ್ಯ. ಅದಕ್ಕಾಗಿ ನಾನು ರಾಜಕೀಯಕ್ಕೆ ಬರಬೇಕೆಂದು ತೀರ್ಮಾನಿಸಿದೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಗೆ ಗುರುವಾರ ಸಂಜೆ ಭೇಟಿ ನೀಡಿದ ಅವರು, ಇದೇ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಎಲ್ಲಾ ಆಕಾಂಕ್ಷಿಗಳು ಮೌನವಾಗಿರಬೇಕೆಂಬ ಸೂಚನೆ ಇತ್ತು. ಹಾಗಾಗಿ ತಾಳ್ಮೆಯಿಂದ ಇದ್ದೆ. ವರ್ಷದಿಂದ ನನ್ನ ಮನಸ್ಸು ರಾಜಕಾರಣದ ಕಡೆಗೆ ತುಡಿಯುತ್ತಿತ್ತು ಎಂದು ಹೇಳಿದರು. ಕಳೆದ 9 ವರ್ಷಗಳಿಂದ ತಾವೆಲ್ಲರೂ ನನ್ನನ್ನು ನೋಡಿದ್ದೀರಿ. ವೈಯಕ್ತಿಕವಾಗಿ ಸಾರ್ವಜನಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೆ. ಒಂದು ಹಂತದವರೆಗೆ ಸಾರ್ವಜನಿಕ ಸೇವಾ ಕಾರ್ಯಗಳನ್ನು ಮಾಡಬಹುದು. ಆದರೆ ಪರಿಣಾಮಕಾರಿಯಾಗಿ ದೊಡ್ಡ ಮಟ್ಟದಲ್ಲಿ ಮಾಡಬೇಕೆಂದರೆ ಅಧಿಕಾರ ಇರಬೇಕು. ಅದಕ್ಕಾಗಿ ರಾಜಕೀಯ ಕ್ಷೇತ್ರಕ್ಕೆ ಬರಬೇಕೆಂದು ತೀರ್ಮಾನ ●9ನೇ ಪುಟಕ್ಕೆ

ಮೈಸೂರು ಮಿತ್ರ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯಕ್ಕೆ ಪ್ರೌಢಶಾಲಾ ಶಿಕ್ಷಕರ ನಿಯೋಜನೆ

ಸರ್ಕಾರಕ್ಕೆ ಎಂಎಲ್‌ಸಿ ಮರಿತಿಬ್ಬೇಗೌಡ ಧನ್ಯವಾದ



ಮೈಸೂರು,ಮಾ.14(ಪಿಎಂ)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯಗಳಿಗೆ ಪ್ರೌಢಶಾಲಾ ಶಿಕ್ಷಕರನ್ನೇ ಎಂದಿನಂತೆ ನೇಮಿಸಿರುವುದಕ್ಕೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಧನ್ಯವಾದ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯಗಳಿಗೆ ಪ್ರೌಢಶಾಲಾ ಶಿಕ್ಷಕರನ್ನು ಹೊರತುಪಡಿಸಿ, ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳಲು ಹೊರಡಿಸಿದ್ದ ಅವೈಜ್ಞಾನಿಕ ಸುತ್ತೋಲೆಯಿಂದ ಪ್ರೌಢಶಾಲಾ ಶಿಕ್ಷಕರನ್ನು ಸಾರ್ವಜನಿಕವಾಗಿ ಅವಮಾನಿಸಿದಂತಾಗುತ್ತದೆ. ಆದ ಕಾರಣ ಸದರಿ ಸುತ್ತೋಲೆ ಹಿಂಪಡೆಯಬೇಕೆಂದು ವಿಧಾನಮಂಡಲದ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದೆ.

ತದನಂತರ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರನ್ನು ಖುದ್ದು ಭೇಟಿಯಾಗಿ ಸಮಸ್ಯೆಯ ಗಂಭೀರತೆಯನ್ನು ಮನವರಿಕೆ ಮಾಡಿಕೊಟ್ಟಿದ್ದೆ. ಮಾ.13ರ ಮಂಗಳವಾರ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ವಹಣಾ ಮಂಡಳಿಯು ಸುತ್ತೋಲೆ ಹೊರಡಿಸಿ, ಕಳೆದ ಸಾಲಿನಂತೆ ಪ್ರೌಢಶಾಲೆಯ ಮುಖ್ಯಶಿಕ್ಷಕರು ಮತ್ತು ಸಹ ಶಿಕ್ಷಕರನ್ನೇ ನಿಯೋಜಿಸಿಕೊಳ್ಳಲು ಅನುಮತಿ ನೀಡಿ ಆದೇಶಿಸಿದೆ. ಇದಕ್ಕಾಗಿ ಸರ್ಕಾರಕ್ಕೆ ಧನ್ಯವಾದ ಅರ್ಪಿಸುವುದಾಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಎಸ್‌ಟಿ ಮೋರ್ಚಾ ಪೂರ್ವಭಾವಿ ಸಭೆ



ಮೈಸೂರು,ಮಾ.14–ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾದ ಸಮಾವೇಶವು ಮೈಸೂರಿನಲ್ಲಿ ನಡೆಯಲಿದ್ದು, ಈ ಸಂಬಂಧ ಮೈಸೂರು ನಗರ–ಗ್ರಾಮಾಂತರ ಎಸ್‌ಟಿ ಮೋರ್ಚಾದ ಪಕ್ಷದ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಯಿತು.

ಈ ವೇಳೆ ರಾಜ್ಯ ಉಪಾಧ್ಯಕ್ಷ ಮಹಾಂತೇಶ್ ನಾಯಕ ಮಾತನಾಡಿ, ಬಿಜೆಪಿ ಪಕ್ಷವು ಅಧಿಕಾರದಲ್ಲಿದ್ದಾಗ ವಾಲ್ಮೀಕಿ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮ ಮಾಡಿತು. ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ವಾಲ್ಮೀಕಿ ಸಮುದಾಯ ಭವನ ನಿರ್ಮಾಣ, 7.5 ಮೀಸಲಾತಿ ಕಲ್ಪಿಸಲಾಯಿತು. ಅಲ್ಲದೆ ಪರಿಶಿಷ್ಟ ಪಂಗಡಕ್ಕೆ ರಾಜಕೀಯ ಅಧಿಕಾರ ನೀಡಿದ ಕೀರ್ತಿ ಬಿಜೆಪಿಗೆ ಸಲ್ಲುತ್ತದೆ. ಮೈಸೂರಿನಲ್ಲಿ ನಡೆಯುವ ಸಮಾವೇಶಕ್ಕೆ ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶದ 16 ಮಂಡಲಗಳಿಂದ 2 ಸಾವಿರಕ್ಕೂ ಹೆಚ್ಚು ಜನ ಸೇರಿಸಿ ಸಮಾವೇಶ ಯಶಸ್ವಿಯಾಗಲು ಪ್ರತಿಯೊಬ್ಬರೂ ಶ್ರಮಿಸುವಂತೆ ತಿಳಿಸಿದರು.

ಮಾಜಿ ಮೇಯರ್ ಶಿವಕುಮಾರ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಎಂ.ಮಹೇಶ್, ನಗರಾಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಗ್ರಾಮಾಂತರ ಅಧ್ಯಕ್ಷ ಮುದ್ದುಕೃಷ್ಣ, ನಾರಾಯಣ, ಕೃಷ್ಣ ನಾಯಕ, ಲಕ್ಷ್ಮಣ್, ವೀರನಗೆರೆ ಶ್ರೀನಿವಾಸ್, ನಂದೀಶ್, ವಿಜಯ ನಾಯಕ, ಎಂ.ಶಿವಪ್ರಕಾಶ್, ನಾರಾಯಣ ಸ್ವಾಮಿ, ಪ್ರಕಾಶ್, ಮರಿಸ್ವಾಮಿ ನಾಯಕ, ನಾಗ, ರಂಗಸ್ವಾಮಿನಾಯಕ, ಜಯಸಿಂಹ, ಮದಕರಿ, ಜೋಗಿ ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

ಗಂಡು ಮಕ್ಕಳಿಗೆ ಸರಿಸಮನಾಗಿ ಹೆಣ್ಣು ಮಕ್ಕಳ ಪರಿಗಣಿಸಿ

ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜಿ.ದಿನೇಶ್ ಸಲಹೆ

ಮೈಸೂರು,ಮಾ.14(ಎಂಟಿವೈ)–ಹೆಣ್ಣು ಮಕ್ಕಳಿಗೆ ಮನೆ ಹಾಗೂ ಸಮಾಜದಲ್ಲಿ ವಿಶೇಷ ಸ್ಥಾನಮಾನ ನೀಡುವುದಕ್ಕಿಂತ ಗಂಡು ಮಕ್ಕಳಿಗೆ ಸರಿಸಮಾನರಾಗಿ ಕಾಣುವುದು ಮುಖ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಸಲಹೆ ನೀಡಿದ್ದಾರೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ(ಆರ್‌ಎಲ್‌ಹೆಚ್‌ಪಿ) ಹಾಗೂ ಧ್ವನಿ ಮಹಿಳಾ ಒಕ್ಕೂಟದ ವತಿಯಿಂದ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದ ಆವರಣದಲ್ಲಿ ವಿಶ್ವ ಮಹಿಳಾ ದಿನದ ಅಂಗವಾಗಿ ಗುರುವಾರ ಆಯೋಜಿಸಿದ್ದ 'ಮಹಿಳೆಯರ ಮೇಲಿನ ದೌರ್ಜನ್ಯ ವಿರೋಧಿಸಿ ಜಾಗೃತಿ ಜಾಥಾ'ಗೆ ಚಾಲನೆ ನೀಡಿ ಮಾತನಾಡಿದ ಅವರು, ಹೆಣ್ಣು ಮಕ್ಕಳಿಗೆ ವಿಶೇಷ ಸ್ಥಾನಮಾನ ನೀಡಬಾರದು. ಯಾಕೆಂದರೆ ಚಿಕ್ಕಂದಿನಿಂದಲೇ ವಿಶೇಷವಾಗಿ ಸವಲತ್ತು ನೀಡುತ್ತಿದ್ದರೆ, ಅವರ ಮನಸ್ಸಿನಲ್ಲಿ ತಾರತಮ್ಯದ ಭಾವನೆ ಕಾಡಲಾರಂಭಿಸುತ್ತದೆ. ಈ ಹಿನ್ನೆಲೆಯಲ್ಲಿ ವಿಶೇಷ ಸ್ಥಾನಮಾನಕ್ಕಿಂತ ಸಮಾನ ಅವಕಾಶ ನೀಡಬೇಕು. ಮನೆಯಲ್ಲಿಯೇ ಗಂಡು–ಹೆಣ್ಣು ಎಂಬ ಭೇದ ಭಾವ ಮಾಡಬಾರದು. ಇಬ್ಬರೂ ಸಮಾನರು ಎಂದು ಮನವರಿಕೆ ಮಾಡಿಕೊಡಬೇಕು ಎಂದು ತಿಳಿಸಿದರು.



ವಿಶ್ವ ಮಹಿಳಾ ದಿನದ ಅಂಗವಾಗಿ ಮೈಸೂರಲ್ಲಿ ಆಯೋಜಿಸಿದ್ದ ಮಹಿಳಾ ದೌರ್ಜನ್ಯ ವಿರೋಧಿ ಜಾಗೃತಿ ಜಾಥಾಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಚಾಲನೆ ನೀಡಿದರು.

ಮಹಿಳೆಯರ ರಕ್ಷಣೆ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿವೆ. ಮಹಿಳೆಯರಿಗೆ ವಿಶೇಷ ಕಾನೂನುಗಳು ಜಾರಿಯಲ್ಲಿವೆ. ಮಹಿಳೆ ಎಂಬ ಕಾರಣಕ್ಕೆ ತಾರತಮ್ಯ ಆಗಬಾರದು ಎಂದು ಸಂವಿಧಾನದಲ್ಲಿ ನಿಯಮ ರೂಪಿಸಲಾಗಿದೆ. ಪುರುಷರಿಗೆ ಸರಿಸಮಾನವಾಗಿ ಅವಕಾಶ ನೀಡಬೇಕೆಂಬುದು ಸಂವಿಧಾನದ ಆಶಯ. ಅದಕ್ಕೆ ಅನುಗುಣವಾಗಿ ಮಹಿಳೆಯರ ರಕ್ಷಣೆಗಾಗಿ ಹಲವು ಕಾನೂನುಗಳಿವೆ. ಆಸ್ತಿ ಹಕ್ಕು, ಮಹಿಳಾ ದೌರ್ಜನ್ಯ ತಡೆ ಕಾಯ್ದೆ, ಕಲಂ 122ರ ಅಡಿಯಲ್ಲಿ ಜೀವನಾಂಶ ಹಕ್ಕು ಸೇರಿದಂತೆ ಇನ್ನಿತರ ಕಾನೂನು ಜಾರಿಯಲ್ಲಿದೆ. ಮಹಿಳೆಯರ ಉನ್ನತೀಕರಣಕ್ಕಾಗಿ ಸರ್ಕಾರಗಳು ವಿವಿಧ ಕಾರ್ಯಕ್ರಮ ಜಾರಿಗೊಳಿಸುತ್ತಾ ಬಂದಿದೆ. ಅವುಗಳ ಸೌಲಭ್ಯ ಪಡೆದುಕೊಂಡು ಮಹಿಳೆಯರು ಸಬಲೀಕರಣವಾಗಬೇಕು. ಆರ್ಥಿಕವಾಗಿ ಸಬಲರಾಗಬೇಕು. ಅದಕ್ಕಾಗಿ ಶಿಕ್ಷಣ ಪಡೆಯುವುದು ಅಗತ್ಯ. ಈ ಹಿಂದೆ ಹೆಣ್ಣು ಮಕ್ಕಳ ಶಿಕ್ಷಣ ಪ್ರಮಾಣ ಕಡಿಮೆ ಇತ್ತು. ಈಗ ಸುಧಾರಿಸಿದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ತಮ್ಮ ಹೆಣ್ಣು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಬೇಕು. ಬಾಲ್ಯ ವಿವಾಹ ಮಾಡಬಾರದು ಎಂದು ಸಲಹೆ ನೀಡಿದರು.

ಇದೇ ವೇಳೆ ಆರ್‌ಎಲ್‌ಹೆಚ್‌ಪಿ ನಿರ್ದೇಶಕಿ ಸರಸ್ವತಿ ಮಾತನಾಡಿ, ಆರ್‌ಎಲ್‌ಹೆಚ್‌ಪಿ ಸಂಸ್ಥೆ ಈ ಹಿಂದಿನಿಂದಲೂ ಮಹಿಳೆಯರು ಹಾಗೂ ಮಕ್ಕಳ ಹಿತ ಕಾಯುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ, ಕೊಳಚೆ ಪ್ರದೇಶದಲ್ಲಿರುವ ಮಕ್ಕಳಿಗೆ ಶಿಕ್ಷಣ ಕೊಡಿಸುವುದಕ್ಕೂ ಶ್ರಮಿಸುತ್ತಿದೆ ಎಂದರು.

> ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಮುನ್ನುಗ್ಗುತ್ತಿದ್ದಾರೆ. ಯಾವುದೇ ಒಂದು ಕ್ಷೇತ್ರದಲ್ಲೂ ಮಹಿಳೆಯರು ಇಲ್ಲ ಎನ್ನುವ ಹಾಗಿಲ್ಲ. ಪುರುಷರಷ್ಟೇ ಸಮಾನರಾಗಿ ಕೆಲಸ ಮಾಡುತ್ತಿದ್ದಾರೆ. ಉದ್ಯೋಗ ಕ್ಷೇತ್ರದಲ್ಲೂ ಬೇಧ–ಬಾವ, ತಾರತಮ್ಯ ಇರಬಾರದು. ಸರ್ಕಾರದ ಎಲ್ಲಾ ಯೋಜನೆಗಳನ್ನು ಬಳಸಿಕೊಂಡು ಮಹಿಳೆಯರು ಏಳಿಗೆ ಸಾಧಿಸಬೇಕು. –ಬಿ.ಜಿ.ದಿನೇಶ್

ಸಭಾ ಕಾರ್ಯಕ್ರಮ: ಮಧ್ಯಾಹ್ನ 12 ಗಂಟೆಗೆ ಪುರಭವನದಲ್ಲಿ ಮಹಿಳಾ ದಿನಾಚರಣೆ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮವನ್ನು ಆರ್‌ಎಲ್‌ಹೆಚ್‌ಪಿ ಕಾರ್ಯದರ್ಶಿ ಪ್ರೊ.ವಿ.ಕೆ.ಜೋಸ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ರಂಗಕರ್ಮಿ ರಾಮೇಶ್ವರಿ ವರ್ಮ 'ಮಹಿಳಾ ಸಬಲೀಕರಣ' ಕುರಿತು ವಿಚಾರ ಮಂಡಿಸಿದರು. ಧ್ವನಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ವಸಂತ ಅಧ್ಯಕ್ಷತೆ ವಹಿಸಿದರು. ಆರ್‌ಎಲ್ ಹೆಚ್‌ಪಿ ನಿರ್ದೇಶಕಿ ಸರಸ್ವತಿ, ಕೊಳಚೆ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ದಾಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಉದ್ಯೋಗಾಕಾಂಕ್ಷಿಗಳ ಟೂಲ್‌ಕಿಟ್ ಬಿಡುಗಡೆ

ಮೈಸೂರು,ಮಾ.14–ಉದ್ಯೋಗದಾತರು ಹಾಗೂ ಉದ್ಯೋಗಾಕಾಂಕ್ಷಿಗಳ ನಡುವಣ ಸೇತುವೆಯಂತೆ ಕಾರ್ಯನಿರ್ವಹಿಸುವ ಸಲುವಾಗಿ ಬೆಂಗಳೂರು ಗ್ರೂಪ್ 'ಜಾಬ್ ಸೀಕರ್ಸ್ ಟೂಲ್‌ಕಿಟ್'ನ್ನು ಅನಾವರಣಗೊಳಿಸಿದೆ. ನಗರದ ಪ್ರಮುಖ ಮಲ್ಟಿ ನ್ಯಾಷನಲ್ ಕಂಪನಿಗಳ ಮಾನವ ಸಂಪನ್ಮೂಲ ವಿಭಾಗಗಳ ಜೊತೆಗೂಡಿ ವ್ಯಾಪಕ ಸಂಶೋಧನೆ ನಡೆಸಿದ ವೃತ್ತಿಪರರು ಈ ಸಮಗ್ರ ಮಾರ್ಗದರ್ಶಿಯನ್ನು ರೂಪಿಸಿದ್ದಾರೆ. ಕೌಶಲ್ಯತೆ ಹೊಂದಿದ್ದರೂ ಪೂರ್ವಸಿದ್ಧತೆ ಕೊರತೆಯಿಂದಾಗಿ ಉದ್ಯೋಗ ಸಮಸ್ಯೆ ಎದುರಿಸುವವರಿಗೆ ಈ ಮಾರ್ಗದರ್ಶಿ ನೆರವಾಗಲಿದೆ. ಈ ಟೂಲ್‌ಕಿಟ್ ಸಮರ್ಪಕ ರೆಸ್ಯೂಮ್ ತಯಾರಿಸಿಕೊಳ್ಳುವುದರಿಂದ ಹಿಡಿದು ಕವರ್ ಲೆಟರ್, ಸಂದರ್ಶನ ಪೂರ್ವಸಿದ್ಧತೆ, ನೆಟ್‌ವರ್ಕಿಂಗ್, ವೇತನ ಮಾತುಕತೆವರೆಗೆ ತರಬೇತಿ ನೀಡಲಿದೆ. ಟೂಲ್‌ಕಿಟ್‌ನ್ನು www.jobseeker.net.inನಿಂದ ಪಡೆಯಬಹುದು.

ಚುನಾವಣೆಯಲ್ಲಿ ವೀಕ್, ಸ್ಟ್ರಾಂಗ್ ಎಂದು ಅಳೆಯಲು ಆಗಲ್ಲ



ಮೈಸೂರು, ಮಾ.14(ಬಿಎಲ್‌ಯು)– ಚುನಾವಣೆಯಲ್ಲಿ ಇವರು ವೀಕ್, ಅವರು ಸ್ಟ್ರಾಂಗ್ ಎಂದು ಅಳತೆ ಮಾಡಲು ಸಾಧ್ಯವಿಲ್ಲ ಎಂದು ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಚುನಾವಣೆಯಲ್ಲಿ ಇವರು ಬಲಾಢ್ಯರು, ಅವರು ದುರ್ಬಲರು ಎಂದು ಭ್ರಮೆಯಲ್ಲಿದ್ದರೆ ಆ ರೀತಿಯ ಚಿಂತನೆ ಅವರಿಗೆ ಮುಳುವಾಗುತ್ತದೆ ಎಂದರು. ಬಿಜೆಪಿ ಅಭ್ಯರ್ಥಿಯಾಗಿ ಯದುವೀರ್ ಒಡೆಯರ್ ಆಯ್ಕೆಯಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಹರೀಶ್‌ಗೌಡ, ನಮ್ಮ ವಿರುದ್ಧ ಸ್ಪರ್ಧೆ ಮಾಡಿರುವ ಅಭ್ಯರ್ಥಿ ಯಾರೆಂಬುದು ಮುಖ್ಯವಲ್ಲ. ನಮ್ಮ ಅಭ್ಯರ್ಥಿ ಗೆಲ್ಲಿಸುವುದು ನಮಗೆ ಮುಖ್ಯ. ಈ ಹಿನ್ನೆಲೆಯಲ್ಲಿ ಶಕ್ತಿ ಮೀರಿ ಹೋರಾಟ ಮಾಡಿ ನಮ್ಮ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುತ್ತೇವೆ ಎಂದರು.

ಚುನಾವಣೆಯಲ್ಲಿ ಗೆಲ್ಲಲು ಏನು ಬೇಕೊ, ಅದನ್ನು ನಮ್ಮ ನಾಯಕರು ಮಾಡುತ್ತಾರೆ. ಈ ಮೂಲಕ ನಮ್ಮ ಕಾಂಗ್ರೆಸ್ ಅಭ್ಯರ್ಥಿ ಗೆದ್ದೆ ಗೆಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮೈಸೂರು ಕೊಡಗು ಲೋಕಸಭಾ ಅಭ್ಯರ್ಥಿ ಕುರಿತಂತೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಮ್ಮ ಅಭಿಪ್ರಾಯ ಕೇಳಿದ್ದು, ನಾವು ನಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದೇವೆ. ಆದರೆ ಮುಂದಿನ ತೀರ್ಮಾನ ಹೈಕಮಾಂಡ್‌ಗೆ ಬಿಟ್ಟಿದ್ದು ಎಂದು ಹರೀಶ್‌ಗೌಡ ಸ್ಪಷ್ಟಪಡಿಸಿದರು.

ಮೈಸೂರು ಸರ್ಕಾರಿ ಉಪಕರಣಾಗಾರ, ತರಬೇತಿ ಕೇಂದ್ರದಲ್ಲಿ ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್, ಕಮ್ಯೂನಿಕೇಷನ್ ಕೋರ್ಸ್ ಆರಂಭ

ಎಸ್‌ಎಸ್‌ಎಲ್‌ಸಿ, ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಅನುಕೂಲ

ಮೈಸೂರು, ಮಾ.14(ಜಿಎ)–ಮೈಸೂರಿನ ಕೆಆರ್‌ಎಸ್ ರಸ್ತೆಯ ಬೆಳಗೊಳ ಕೈಗಾರಿಕಾ ಪ್ರದೇಶದಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಎಐಸಿಟಿಇ ಅನುಮೋದಿತ ದೀರ್ಘಾವಧಿ ಕೋರ್ಸ್‌ಗಳು ನಡೆಯುತ್ತಿದ್ದು, ಈ ವರ್ಷ ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್ ಮತ್ತು ಕಮ್ಯೂನಿಕೇಷನ್ ಕೋರ್ಸ್ ಅನ್ನು ಪ್ರಾರಂಭಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಇದರ ಪ್ರಯೋಜನ ಪಡೆಯಬೇಕು ಎಂದು ಕೇಂದ್ರದ ಮುಖ್ಯಸ್ಥ ಓಬಯ್ಯ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಪ್ಲೊಮಾ ಇನ್ ಟೂಲ್ ಮತ್ತು ಡೈ ಮೇಕಿಂಗ್, ಡಿಪ್ಲೊಮಾ ಇನ್ ಪ್ರಿಸಿಷನ್ ಮ್ಯಾನ್ಯುಫ್ಯಾಕ್ಚರಿಂಗ್ ಕೋರ್ಸ್‌ಗಳು ಈಗಾಗಲೇ ಪ್ರಾರಂಭವಾಗಿದೆ. ಈ ವರ್ಷ ಡಿಪ್ಲೊಮಾ ಇನ್ ಎಲೆಕ್ಟ್ರಾನಿಕ್ ಮತ್ತು ಕಮ್ಯೂನಿಕೇಷನ್ ಕೋರ್ಸ್ ಅನ್ನು ಪ್ರಾರಂಭಿಸಲಾಗಿದ್ದು, ಇದು 3 ವರ್ಷದ ಕೋರ್ಸ್. ಜತೆಗೆ 1 ವರ್ಷ ಕಡ್ಡಾಯವಾಗಿ ಕೈಗಾರಿಕಾ ತರಬೇತಿ, ಕೋರ್ಸ್ ಮುಗಿದ ಬಳಿಕ ಉದ್ಯೋಗದ ನೆರವು ನೀಡಲಾಗುವುದು. ಪುರುಷ ಅಭ್ಯರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯ, ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರದ ವಿದ್ಯಾರ್ಥಿ ವೇತನದ ಸೌಲಭ್ಯವಿರುತ್ತದೆ ಎಂದರು.

ಸಿಎಂಕೆಕೆವೈ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಡಿ ಉಚಿತವಾಗಿ ವಿವಿಧ ಅಲ್ಪಾವಧಿ ಕೋರ್ಸ್‌ಗಳು ನಡೆಯುತ್ತಿವೆ. ಐಟಿಐ, ಡಿಪ್ಲೊಮಾ, ಬಿಇ, ಎಂ.ಟೆಕ್ ವಿದ್ಯಾರ್ಹತೆಯುಳ್ಳವರಿಗಾಗಿ ಸೆಂಟರ್ ಆಫ್ ಎಕ್ಸಲೆನ್ಸ್ ಕೋರ್ಸ್, ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೊಮಾ, ಬಿಇ ಮತ್ತು ಎಂ.ಟೆಕ್ ವಿದ್ಯಾರ್ಹತೆಯುಳ್ಳವರಿಗಾಗಿ ಸಿಎನ್‌ಸಿ, ಕ್ರಿಯೋ, ಕ್ಯಾಡ್–ಕ್ಯಾಮ್, ಕ್ಯಾಟಿಯಾ, ಸಾಲಿಡ್ ವರ್ಕ್ ಮೊದಲಾದ ಕೋರ್ಸ್‌ಗಳಿವೆ ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೊಮಾ, ಬಿಇ ಡಿಪ್ಲೊಮಾ ವಿದ್ಯಾಭ್ಯಾಸ ಮಾಡಿರುವವರಿಗೆ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ವಿವಿಧ ಕೋರ್ಸ್‌ಗಳಿವೆ. ಅಲ್ಲದೆ, ಎಂಟರ್‌ಪ್ರೈಸಸ್ ಸಂಪನ್ಮೂಲ ಯೋಜನೆಯಡಿ ಎಸ್‌ಎಪಿ, ಹಣಕಾಸು, ಮಾರಾಟ ಮತ್ತು ವಿತರಣೆ, ಉತ್ಪಾದನೆ ಮತ್ತು ಯೋಜನೆ ಮೊದಲಾದ ರೀತಿಯ ಕೋರ್ಸ್‌ಗಳಿವೆ. ಹೀಗಾಗಿ ಅರ್ಹರು ಪ್ರಯೋಜನ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ–77606 82629, 86185 06373 ಸಂಪರ್ಕಿಸಬಹುದಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕೇಂದ್ರದ ಪ್ರಾಂಶುಪಾಲ ಎಸ್.ಎನ್.ಜಗದೀಶ್ ಕುಮಾರ್, ಸಿಒಇ ವಿಭಾಗದ ಪ್ರಭಾರ ಅಧಿಕಾರಿ ಶ್ರೀನಿವಾಸ್ ಭಟ್, ಸಿಒಇ ರಾಜ್ಯ ಸಂಯೋಜಕ ಎಸ್.ವಿನಯ್ ಉಪಸ್ಥಿತರಿದ್ದರು.

ಒಂದು ದಿನದ ಉಚಿತ ಕಾರ್ಯಾಗಾರ

ಮೈಸೂರು,ಮಾ.14–ಕರ್ನಾಟಕ ಲೋಕ ಸೇವಾ ಆಯೋಗ ಸುಮಾರು 384 ಗೆಜೆಟೆಡ್ ಪ್ರೊಫೆಷನಲ್ ಗ್ರೂಪ್ ಎ ಮತ್ತು ಗ್ರೂಪ್ ಬಿ ಹುದ್ದೆಗಳನ್ನು ಭರ್ತಿ ಮಾಡಲು ಆಸಕ್ತ ಅರ್ಹರಿಂದ ಅರ್ಜಿಯನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಏ.3 ಕೊನೆಯ ದಿನಾಂಕವಾಗಿರುತ್ತದೆ. ಆಸಕ್ತ ಅರ್ಹ ಪದವೀಧರರು ಅರ್ಜಿಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸಲು ಕೋರಲಾಗಿದೆ.

ಈ ಸಂಬಂಧ ಅರ್ಜಿ ಸಲ್ಲಿಸುವ, ಪರೀಕ್ಷೆಯೂ ಸೇರಿದಂತೆ ಇತರೆ ಮಾಹಿತಿಗಳನ್ನು ನೀಡುವ ಕುರಿತು ಒಂದು ದಿನದ ಉಚಿತ ಕಾರ್ಯಾಗಾರವನ್ನು ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿರುವ ಕಚೇರಿಯಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9731139407, 9483453005, 9900629393 ಸಂಪರ್ಕಿಸಬಹುದು.

ನಾಳೆ ಮೈಸೂರಲ್ಲಿ ವಿಭಾಗ ಮಟ್ಟದ ರೋವರ್, ರೇಂಜರ್ ಮಕ್ಕಳ ಸಮಾವೇಶ

ಮೈಸೂರು, ಮಾ.14(ಜಿಎ)–ಮೈಸೂರಿನ ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಹಯೋಗದಲ್ಲಿ ಮಾ.16ರಂದು ಗೋಕುಲಂನಲ್ಲಿರುವ ಕೆ.ಪುಟ್ಟಸ್ವಾಮಿ ಕಾಲೇಜು ಆವರಣದಲ್ಲಿ ಒಂದು ದಿನದ ಮೈಸೂರು ವಿಭಾಗ ಮಟ್ಟದ ರೋವರ್ ಮತ್ತು ರೇಂಜರ್ ಮಕ್ಕಳ ಸಮಾವೇಶ ಆಯೋಜಿಸಲಾಗಿದೆ ಎಂದು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಕಾರ್ಯದರ್ಶಿ ಅಬ್ದುಲ್ ಜಮೀಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಆಯುಕ್ತ ಪಿ.ಜಿ.ಆರ್.ಸಿಂಧ್ಯಾ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಪ್ರೊ.ವಿಜಯಲಕ್ಷ್ಮಿ, ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಆಯುಕ್ತ ಪಿ.ವಿಶ್ವನಾಥ್ ಅತಿಥಿಗಳಾಗಿ ಆಗಮಿಸಲಿದ್ದಾರೆ. ವಿದ್ಯಾವರ್ಧಕ ಸಂಘದ ಗೌರವ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸುವರು. ಸಮಾವೇಶದಲ್ಲಿ 60ಕ್ಕೂ ಹೆಚ್ಚು ಕಾಲೇಜುಗಳಿಂದ ಸುಮಾರು 1500 ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 10.30ರಿಂದ ಸಂಪನ್ಮೂಲ ವ್ಯಕ್ತಿಗಳು ವಿವಿಧ ವಿಷಯಗಳ ಕುರಿತು ಗೋಷ್ಠಿ ನಡೆಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಾಚಾರ್ಯ ಶಿವಲಿಂಗೇಗೌಡ, ಚಂದ್ರು, ಲಾವಣ್ಯ ಉಪಸ್ಥಿತರಿದ್ದರು.

ನಟನ ರಂಗಶಾಲೆಯಲ್ಲಿ ಉಷಾಹರಣ ಪ್ರದರ್ಶನ



ಮೈಸೂರು,ಮಾ.14–ಮೈಸೂರಿನ ರಾಮಕೃಷ್ಣನಗರದ ನಟನ ರಂಗಶಾಲೆಯು ತನ್ನ ಚಟುವಟಿಕೆಯ ಭಾಗವಾಗಿ, ಮಾರ್ಚ್ 17 ರಂದು ಸಂಜೆ 6.30ಕ್ಕೆ ನಟನ ರಂಗಶಾಲೆಯಲ್ಲಿ ನಟನದ ರೆಪರ್ಟರಿ ಕಲಾವಿದರಿಂದ ಶಾಂತಕವಿ (ಸಕ್ಕರಿ ಬಾಳಾಚಾರ್ಯ) ಅವರು ರಚಿಸಿರುವ, ಕನ್ನಡದ ಮೊದಲ ಸ್ವತಂತ್ರ ನಾಟಕ 'ಉಷಾಹರಣ' ಪ್ರಯೋಗವನ್ನು ಕಾಣಲಿದೆ. ಸಂಗೀತ, ವಿನ್ಯಾಸ ಮತ್ತು ನಿರ್ದೇಶನ ಕನ್ನಡದ ಹೆಸರಾಂತ ನಿರ್ದೇಶಕ ಡಾ.ಶ್ರೀಪಾದ ಭಟ್ ಅವರದ್ದು. ಮಾಹಿತಿಗಾಗಿ 9945555570, 9480468327, 7259537777 ಸಂಪರ್ಕಿಸಬಹುದು.




ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷ ಅರುಣ್ ಕುಮಾರ್ ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಜಿಲ್ಲಾಧ್ಯಕ್ಷ ಹೇಮಂತ್‌ಕುಮಾರ್ ಗೌಡ, ನಗರ ಪ್ರಧಾನ ಕಾರ್ಯದರ್ಶಿಗಳಾದ ಗಿರಿಧರ್, ಬಿ.ಎಂ. ರಘು, ಮಹೇಶ್ ಮಡವಾಡಿ, ಮುಖಂಡರಾದ ನಂದೀಶ್ ಬೆಳ್ಳಯ್ಯ, ಡಾ. ರವಿ, ಸಮೀರ್ ಇತರರು ಅಭಿನಂದಿಸಿದರು.



ಮೈಸೂರು ತಾಲೂಕು ಇಲವಾಲ ಹೋಬಳಿ, ಹನುಮಂತಪುರ ಗ್ರಾಮದಲ್ಲಿ ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ ಅವರು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಯನ್ನು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಅರುಣ್ ಕುಮಾರ್, ನಾಗವಾಲ ಮಹೇಶ್, ಗ್ರಾಮದ ಯಜಮಾನರು, ಡಾ.ಬಿ.ಆರ್. ಅಂಬೇಡ್ಕರ್ ಸಂಘದ ಪದಾಧಿಕಾರಿಗಳು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.3.2024 ಶುಕ್ರವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಯುವರಾಜ ಕಾಲೇಜು :** ಜ್ಞಾನವಾಹಿನಿಯ ಸಾಂಸ್ಕೃತಿಕ, ಶೈಕ್ಷಣಿಕ, ಕ್ರೀಡೆ, ಎನ್‌ಸಿಸಿ, ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಕನ್ನಡ ನುಡಿಹಬ್ಬ ಆಚರಣೆ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಕೆ. ಮಹೇಶ್, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಪ್ರೊ. ಕೆ.ಎಂ. ಮಹದೇವನ್, ಮುಖ್ಯ ಭಾಷಣಕಾರರು : ಸಹಾಯಕ ಪ್ರಾಧ್ಯಾಪಕ ಡಾ. ಭೀಮರಾಜು ಈರೇಗೌಡ, ಮುಖ್ಯ ಅತಿಥಿಗಳು : ಡಾ. ಎಂ.ಬಿ. ಸುರೇಶ್, ಆರ್. ವಿನಯ್, ಜಿ. ಕೃಷ್ಣಮೂರ್ತಿ, ಪ್ರೊ.ಬಿ.ಎಂ. ವೆಂಕಟೇಶ್, ಪ್ರೊ. ಕೆ. ಅಜಯ್ ಕುಮಾರ್, ಸ್ಥಳ: ಅಮೃತ ಮಹೋತ್ಸವ ಸಭಾಂಗಣ, ಯುವರಾಜ ಕಾಲೇಜು, ಬೆಳಗ್ಗೆ 11ಕ್ಕೆ

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ನೂತನ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಮೈಸೂರು ವಿವಿ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ. ಜಿ. ಶೀಲಾ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಮುಖ್ಯ ಅತಿಥಿಗಳು : ಸಿಂಡಿಕೇಟ್ ಸದಸ್ಯ ನಾಗರಾಜು, ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ವಿವಿಧ ಸರ್ಕಾರಿ ಇಲಾಖೆಗಳು :** ಸರ್ಕಾರದ ಗ್ಯಾರಂಟಿ ಫಲಾನುಭವಿಗಳ ಸಮಾವೇಶ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಸಚಿವರು, ಶಾಸಕರು ಭಾಗವಹಿಸುವರು. ಸ್ಥಳ: ಮಹಾರಾಜ ಕಾಲೇಜು ಮೈದಾನ, ಮಧ್ಯಾಹ್ನ 2 ಗಂಟೆಗೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಶ್ರೀರಾಘವೇಂದ್ರಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಬೆಳಗ್ಗೆ 6.30ರಿಂದ ಶ್ರೀ ಮದನಗೋಪಾಲಕೃಷ್ಣ ಮಹಾಯಾಗ ಹಾಗೂ ಶ್ರೀ ಸೂಕ್ತ ಹೋಮ, ಸುದರ್ಶನ ಹೋಮ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನ, ಜಯಲಕ್ಷ್ಮಿಪುರಂ.

■ **ಶ್ರೀ ದಂಡಿನ ಮಾರಮ್ಮನವರ ಪೂಜಾ ಮಹೋತ್ಸವ ಸಮಿತಿ:** ಶ್ರೀ ಮನೆಮಂಚಮ್ಮ ಶ್ರೀ ದಂಡಿನ ಮಾರಮ್ಮ, ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ದಂಡಿನಮಾರಮ್ಮ ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಿಶ್ವ ಗ್ರಾಹಕರ ಹಕ್ಕು ದಿನಾಚರಣೆ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಖಜಾಂಚಿ ಶ್ರೀಶೈಲ ರಾಮಣ್ಣವರ್, ಉದ್ಘಾಟನೆ: ಇಸ್ರೋ ನಿವೃತ್ತ ಪರಿಸರ ಇಂಜಿನಿಯರ್ ಪ್ರೊ.ವಿ.ಜಗನ್ನಾಥ್, ಮುಖ್ಯ ಅತಿಥಿಗಳು: ಡಾ.ಪಾಂಡುರಂಗಮೂರ್ತಿ, ಕಾಲೇಜು ಪ್ರಿನ್ಸಿಪಾಲ್ ಡಾ.ಎಸ್.ಮರಿಗೌಡ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಮಧ್ಯಾಹ್ನ 1.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 189ನೇ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಸಂಜೆ 5.30 ರಿಂದ ಸಂಧ್ಯಾರತಿ, ಸಂಜೆ 5.45 ರಿಂದ ದಾವಣಗೆರೆ ಶ್ರೀ ರಾಮಕೃಷ್ಣ ಮಿಷನ್ ಕಾರ್ಯದರ್ಶಿ ಸ್ವಾಮಿ ತ್ಯಾಗೀಶ್ವರಾನಂದಜಿ ಅವರಿಂದ ವಾತ್ಸಲ್ಯಮಯಿ ಶ್ರೀಮಾತೆ ಶಾರದಾದೇವಿ ಕುರಿತು ಕನ್ನಡದಲ್ಲಿ ಪ್ರವಚನ, ಸಂಜೆ 6.45 ರಿಂದ ಶ್ರೀಮತಿ ಸುಮನ ಮತ್ತು ಶಿವರಾಮ ಅವರಿಂದ ಕೊಳಲು ಮತ್ತು ಮ್ಯಾಂಡೋಲಿನ್ ವಾದನ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಮೈಸೂರು ಸಂತ ಜೋಸೆಫರ ಶಿಕ್ಷಣ ಮಹಾವಿದ್ಯಾಲಯ:** ಉನ್ನತ ಶಿಕ್ಷಣದ ಪುನಶ್ಚೇತನ :ತಂತ್ರಗಳು ಮತ್ತು ಆವಿಷ್ಕಾರಗಳು ಕುರಿತು ವಿಚಾರ ಸಂಕಿರಣ, ಉಪಸ್ಥಿತರು: ಎಂಡಿಇಎಸ್‌ನ ಕಾರ್ಯದರ್ಶಿ ವಿಜಯ್ ಕುಮಾರ್ ಮತ್ತು ಆಡಳಿತ ನಿರ್ವಾಹಕ ಅವಿನಾಶ್, ಉದ್ಘಾಟನೆ: ಆರ್‌ಐಇ ಪ್ರಾಂಶುಪಾಲ ಪ್ರೊ.ಯಜ್ಞಮೂರ್ತಿ ಶ್ರೀಕಾಂತ್, ಸಂಪನ್ಮೂಲ ವ್ಯಕ್ತಿಗಳು: ಡಾ.ಲಾನ್ಸಿ ಡಿಸೋಜಾ, ರೆ. ಫಾ.ಅವಿನಾಶ್, ಡಾ.ಎಸ್.ಪ್ರಭುಶಂಕರ್, ಡಾ.ಪ್ರಿಯಾ ಮ್ಯಾಥ್ಯೂ, ಡಾ.ಆಶಾ ಪತ್ರೋಶ್, ವಿದ್ಯಾಲಯ ಆವರಣ, ಬೆಳಗ್ಗೆ 10 ಗಂಟೆಗೆ

■ **ಕದಂಬ ರಂಗ ವೇದಿಕೆ :** ಶೈಲಜಾ, ಗೆಜ್ಜೆಹೆಜ್ಜೆ ಉದಯಕುಮಾರ್ ಅವರಿಗೆ ರೋಟರಿ ಕದಂಬ ರಂಗಪ್ರಶಸ್ತಿ ಪ್ರದಾನ ಸಮಾರಂಭ, ಬೆಂಗಳೂರಿನ ಪಯಣ ರಂಗ ತಂಡದಿಂದ 'ನಮ್ಗೇನ್ ಬೆಲೆನೇ ಇಲ್ವಾ' ಹಾಸ್ಯಮಯ ನಾಟಕ ಪ್ರದರ್ಶನ, ಸ್ಥಳ: ಕಲಾಮಂದಿರದ ಕಿರು ರಂಗಮಂದಿರ, 6.30ಕ್ಕೆ

ಹಾರೋಹಳ್ಳಿ ಗ್ರಾಮ (ಮೈಸೂರು ತಾಲೂಕು)

■ **ಮೈಸೂರು ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ : ಗ್ರಾಮದ ಮುಖಂಡ ರವಿ, ಬೆಳಗ್ಗೆ 8.30ಕ್ಕೆ ಶ್ರಮದಾನ, ಸಹ ಪ್ರಾಧ್ಯಾಪಕ ಡಾ. ಬಿ.ಎಸ್. ಶ್ರೀಹರ್ಷ ಅವರಿಂದ ಪರಿಸರ ಸಂರಕ್ಷಣೆಯಲ್ಲಿ ಯುವ ಜನತೆಯ ಪಾತ್ರ ಕುರಿತು ಉಪನ್ಯಾಸ, ಅಧ್ಯಕ್ಷತೆ : ಗ್ರಾಪಂ ಸದಸ್ಯ ಹೆಚ್.ಎಂ. ಮೂರ್ತಿ, ಮುಖ್ಯ ಅತಿಥಿಗಳು : ಗ್ರಾಮದ ಮುಖಂಡರಾದ ಕೃಷ್ಣಶೆಟ್ಟಿ, ನಿಂಗೇಗೌಡ, ಮುದ್ದು ಮಹದೇವಯ್ಯ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾರೋಹಳ್ಳಿ ಗ್ರಾಮ, ಮೈಸೂರು ತಾಲೂಕು, ಸಂಜೆ 4.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು –ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ.ಭಾಗವಹಿಸುತ್ತಾರೆ. ಡಾ.ಶರಣಪ್ಪ ವಿ ಹಲಸೆ, ಕುಲಪತಿಗಳು. ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABI- ಕರ್ನಾಟಕ ಮೆದುಳು ಆರೋಗ್ಯ–NIMHANs ಪ್ರಾಯೋಜಿತ ಕಾರ್ಯಕ್ರಮ, 9.00 ಆರೋಗ್ಯ ಕಾರ್ಯಕ್ರಮ, 10.00 ವಾದ್ಯವೃಂದ, ನಿರ್ದೇಶನ– ತುಮಕೂರು ಬಿ.ರವಿಶಂಕರ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರನಾಮ–ವಿದ್ಯಾಭೂಷಣ, ಅನಂತ ಕುಲಕರ್ಣಿ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ–ಅಜಯ್ ಜಿ.ಪ್ರಸಾದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಹೈದರಾಬಾದ್ ಸಹೋದರಿಯರು–ಹಾಡುಗಾರಿಕೆ, 4.00 ಮಹಿಳಾ ರಂಗ–ಸಖೀಸಂವಾದ–ನೇರ ಫೋನ್ ಇನ್ ಕಾರ್ಯಕ್ರಮ, 4.30 ವೃತ್ತಿ ಮಾರ್ಗದರ್ಶನ –ಅನ್ವಯಿಕ ಭೌತಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿಉತಿ ಡಾ.ಕುರುಪಾದ್ ಎಸ್.ಮೂರ್ತಿ ಅವರೊಂದಿಗೆ ಮಾತುಕತೆ, 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ–ನಾಟಕ 'ಮಹಿಶಪುರದಲ್ಲಿ ಒಂದು ದಿನ', ರಚನೆ–ಡಾ.ಸಿದ್ದಲಿಂಗಸ್ವಾಮಿ ಹಿರೇಮಠ, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ, 8.00 ರಸಮಂಜರಿ, 9.30 ಎನ್.ರವಿಕಿರಣ್–ಚಿತ್ರ ವೀಣಾವಾದನ, 10.00 ಹಳ್ಳಿ ಹಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

೯೯ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



ಎನ್.ಎಸ್.ಮಲ್ಲೇಗೌಡರು
ಜನನ: 15.03.1925

ಶುಭಕೋರುವವರು:
ಎಚ್.ವಿ.ಗಣೇಶ್
ಪಾರ್ವತಿ
ಡಾ|| ರವಿಕಿರಣ್ ಡಾ||
ಪೃಥ್ವಿ
ಎನ್.ಎಂ.ಜಯಮ್ಮ
ಚಲುವೇಗೌಡ
ಮಕ್ಕಳು,
ಸೊಸೆಯಂದಿರು,
ಮೊಮ್ಮಕ್ಕಳು ಹಾಗೂ
ಬಂಧುಗಳು


KUSHAL FOODS INDIA
#440-L, KIADB Hebbal
Industrial Area, Mysore- 570016
WANTED
SENIOR ACCOUNTANT
Must have knowledge
of ESI and PF, Salary,
Taxation and Accounts
9513386133/ 9513361533

3ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ 3 ವರ್ಷ ಉರುಳಿದರೂ ನಿಮ್ಮ ನೆನಪು ನಮ್ಮಲ್ಲಿ ಅಜರಾಮರವಾಗಿದೆ.
ನಿಮ್ಮ ನೆನಪಿನಲ್ಲಿರುವ:
ಪತಿ: ಎಸ್.ನಾಗರಾಜು,
ಎಳನೀರು ವ್ಯಾಪಾರಿಗಳು
ಮಕ್ಕಳು, ಅಳಿಯಂದಿರು
ಬಂಧು ಮಿತ್ರರು,
ಗಣೇಶ್‌ನಗರ, ಮೈಸೂರು
ಶ್ರೀಮತಿ ಶಾಂತಮ್ಮ
ನಿಧನ: 15.03.2021

NOW HIRING
A reputed tour company headquartered in Bangalore is hiring for their Proposed Branches in Bengaluru, Hubballi & Mysuru
BRANCH MANAGERS
Graduates with minimum 3 Years Sales Experience and excellent communication skills
SALES MANAGERS
Graduates with minimum 1 Year Sales Experience and excellent communication skills
Send resume to: atmanand@chariotworldtours.com
CHARIOT
3446/40, 1st F Cross, Next to Bunts Sangha, Vijayanagar,
Bengaluru 560040 Call: 9945775555
www.chariotworldtours.com



ಮೃದಂಗ ವಿದ್ವಾನ್ ವಿ.ನಾಗಭೂಷಣಾಚಾರ್
ನಿವೃತ್ತ–ಪ್ರಾಧ್ಯಾಪಕರು, ಲಲಿತಕಲಾ ಕಾಲೇಜು,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ಸ್ಮರಿಸುತ್ತಿರುವ
ತಮ್ಮ ಶಿಷ್ಯ : ಎಂ.ಆರ್.ಉದಯ್‌ಕುಮಾರ್, ನಿವೃತ್ತ
ಕರ್ನಾಟಕ ಪೊಲೀಸ್ ಬ್ಯಾಂಡ್ ಮ್ಯೂಸಿಷಿಯನ್, ಮೈಸೂರು

3 MONTHS CHEF TRAINING
AVS Academy based in Madikeri Coorg, is offering a 3 month South Indian Commis Chef Training-Specializing in delicacies from Kerala, Tamil Nadu, Andra, Telangana and Karnataka.
Certificate from THSC (Tourism and Hospitality Skill Council) under NCVET(National Council for Vocational Education and Training), Skill India.
Placements in 5 star hotels across India.
SPOT ADMISSIONS ON Date : 16th March 2024, Saturday, Time: 1PM to 5 PM
at Hotel Royal Orchid Metropole, JLB Road Mysore.
CALL 9353530686/ 9353530458
to book your appointment
Trained and placed 400 candidates in 5 Star hotels since 2018.
Batches starting April 2024
Course Specialities:
HOSTEL FACILITY, SPOKEN ENGLISH, SOFT SKILLS



WALK-IN-INTERVIEW
& IMMEDIATE APPOINTMENT
(Time between 10.00am & 1.30pm)
TEACHERS for English Medium School
SAVITHRI CONVENT,
Ashoka Road Cross, Mysuru
- M.Sc., / B.Sc., B.Ed., (PCM & CBZ)
- M.A. / B.A., B.Ed., (HGP / HEP)
- M.A. / B.Ed., (English Major)
- M.A. / B.A., B.Ed., (Hindi)
- M.A. / B.A. C.P.Ed., / B.P.Ed., (Physical Education)

Please Mail your resume to :
learning_5960@yahoo.com on or before 18.03.2024
Ph : 0821-2444627 / 81520 08811

KPR ATHER ATHER
ಲೋನ್ ಮತ್ತು ಎಕ್ಸ್‌ಚೇಂಜ್ ಮೇಳ
ದಿನಾಂಕ: 15ನೇ ಮತ್ತು16ನೇ ಮಾರ್ಚ್ 2024
ಸಮಯ : ಬೆಳಿಗ್ಗೆ 10ರಿಂದ ಸಂಜೆ 8ರ ವರೆಗೆ
Up to ₹22485
FAME-II ಸಬ್ಸಿಡಿ ಪಡೆಯಿರಿ
March 28th 2024 ಕ್ಕೆ ಕೊನೆಗೊಳ್ಳುತ್ತದೆ
450X
ಕೇವಲ ₹ 2 839 EMI /ತಿಂಗಳು
ಇಂಡಸ್ಟ್ರೀಸ್ ಬೆಸ್ಟ್
5 ವರ್ಷಗಳ ಬ್ಯಾಟರಿ ವಾರಂಟಿ



ಸ್ಥಳ : IOB ಬ್ಯಾಂಕ್ ಎದುರು, ಅಭಿಷೇಕ್ ಸರ್ಕಲ್ ಹತ್ತಿರ
ವಿಜಯನಗರ 2ನೇ ಹಂತ, ಮೈಸೂರು.
ಸೇಲ್ಸ್ : 8050701555
ಸರ್ವಿಸ್ : 8050701555

Neo Elegance WELLNESS PVT. LTD
No. 203, 1st Floor,
Mythri Arcade,
Saraswathipuram,
Mysore - 9
6000ಕ್ಕೂ ಅಧಿಕ ಸಂತೃಪ್ತ ಗ್ರಾಹಕರು
9 ವರ್ಷಗಳಿಂದ ಗ್ರಾಹಕರ ಸೇವೆಯಲ್ಲಿರುವ ನಂಬಿಕಾರ್ಹ ಸಂಸ್ಥೆ



ಕೂದಲು ಕಸಿ ಮಾಡುವುದು
ಉಚಿತವಾಗಿ
8 ಪಿ.ಆರ್.ಪಿ ಪಡೆಯಿರಿ
ಫಲಿತಾಂಶ ಖಚಿತ, ಇಲ್ಲವಾದಲ್ಲಿ ಹಣ ಮರುಪಾವತಿಸಲಾಗುವುದು
ಪಿ.ಆರ್.ಪಿ
Platelet Rich Plasma
ಸಿಲಿಕಾನ್ ಪ್ಯಾಚ್
Before After
ರೂ. 11,999/- ದಿಂದ ಪ್ರಾರಂಭ
GFC
Advanced Hair Treatment
ಉಚಿತ ಸಮಾಲೋಚನೆ
*Conditions Apply
ಸುಲಭ ಕಂತುಗಳಲ್ಲಿ ಪಾವತಿಸಿ | ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್ ಸೌಲಭ್ಯವಿದೆ
Ph : 89710 13355 / 97401 26105

ESS & ESS INFRASTRUCTURE PVT.LTD.
ESS & ESS INFRASTRUCTURE PVT.LTD. 100+ Projects
RERA No: PRM/KA/RERA/1268/378/PR/181012/002070
ಕುಬೇರಾನಂದಸಾಗರ ಲೇಔಟ್
ಇಲವಾಲ ಬಸ್ ನಿಲ್ದಾಣದ
ಹಿಂಭಾಗ, ಮೈದನಹಳ್ಳಿ, ಮೈಸೂರು
NEW RELEASED PLOTS FOR SALE
DTCP APPROVED
RERA REGISTRED
ಈ ಮಾರ್ಚ್ ನಲ್ಲಿ ಅತ್ಯುತ್ತಮ
DEAL ನಿಮ್ಮದಾಗಿಸಿ
HURRY UP!! OWN YOUR DREAM PLOT NOW 30 X 50, 40 X 60 & Bigger Dimensions
essandess.in
Up to 80% Bank loan Available
FOR FREE SITE VISIT CALL:
99011 64444

Garden VARELI



ಸೀರೆಯಲ್ಲಿ
ಅತ್ಯುತ್ತಮವಾದುದನ್ನು
ಕಳೆದುಕೊಳ್ಳಬೇಡಿ
40%ರ ತನಕ ಡಿಸ್ಕೌಂಟ್ ಸೆಕೆಂಡ್ ಸೇಲ್
ಮಾರಾಟವು 18-03-2024 ರಂದು ಕೊನೆಗೊಳ್ಳುತ್ತದೆ
ಸಮಯ- ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 8.00 (ರವಿವಾರವೂ ತೆರೆದಿರುತ್ತದೆ)
ಸೀರೆಗಳು ₹395 ರಿಂದ ಆರಂಭ | ಡ್ರೆಸ್ ಮೆಟೀರಿಯಲ್ ₹74/ಮೀ.ನಿಂದ ಆರಂಭ | ಸಲ್ವಾರ್ ಸೆಟ್ ಪೀಸ್‌ಗಳ ವಿಶೇಷ ಶ್ರೇಣಿ
ಹೋಟೆಲ್ ಅಭಿಷೇಕ್, 2930/A, (ಆನಂದ್ ವಿಹಾರ್ ಕಲ್ಯಾಣ ಭವನ ಕಾಂಪೌಂಡು),
ಕಲ್ಯಾಣ್ ಜ್ಯುವೆಲರ್ಸ್ ಪಕ್ಕದಲ್ಲಿ, ಬಿ. ಎಸ್. ರಸ್ತೆ, ಮೈಸೂರು- 570001.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

SITE FOR SALE
30x40 Site @ Rs 16 Lac
DTCP Approved Layout
Ready to Registration Bank
Loan Available Next to
Marashettihalli Behind
Chamundi hill
9538583377

ಸ್ಥಾಪನೆ : 1916
ದಿ–ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.
ಶ್ರೀ ಹರ್ಷ ರಸ್ತೆ, ಮೈಸೂರು – 570001, ದೂ.: 2520026

ಹರಾಜು ಮಾರಾಟ

2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಮತ್ತು 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅನ್ವಯ ಬ್ಯಾಂಕಿಗೆ ಆಧಾರ ಮಾಡಿರುವ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಮಾರಾಟ.


ಕ್ರ.ಸಂ.	ಸಾಲಗಾರರ ಹೆಸರು	ಬಾಕಿ ಇರುವ ಮೊಬಲಗು + ಅಸಲು+ಬಡ್ಡಿ+ಇತರೆ	ಮೀಸಲು ಬೆಲೆ ಲಕ್ಷ ರೂ.ಗಳಲ್ಲಿ	ಹರಾಜಿನ ದಿನಾಂಕ ಮತ್ತು ಸಮಯ	ಬ್ಯಾಂಕಿಗೆ ಆಧಾರವಾಗಿರುವ ಸ್ಥಿರಾಸ್ತಿಯ ಸ್ವತ್ತಿನ ವಿವರಗಳು
1	ಸುಚಿತ್ರ ಗಿರೀಶ್ ಮತ್ತು ಆರ್. ಗಿರೀಶ್ ಅಕೌಂಟ್ ನಂ: 632961	38,00,000	1,10,00,000	30.3.2024 ಬೆಳಿಗ್ಗೆ 11 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಟಿ.ಕೆ.ಬಡಾವಣೆ 12ನೇ ಮೇನ್ ನಂ. 757 ಅಳತೆ 40x60 ಅಡಿಗಳು ಪೂರ್ವಕ್ಕೆ – ಸ್ವತ್ತಿನ ಸಂಖ್ಯೆ 758, ಪಶ್ಚಿಮಕ್ಕೆ – ಸ್ವತ್ತಿನ ಸಂಖ್ಯೆ 756, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ– ಸ್ವತ್ತಿನ ಸಂಖ್ಯೆ 774.
2	ಶಿವರಾಂ ಮತ್ತು ಎಂ.ಎಸ್ ಮಾದವ್ ಅಕೌಂಟ್ ನಂ: 632978	14,50,000	72,00,000	30.3.2024 ಮಧ್ಯಾಹ್ನ 12 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ದೇವರಾಜ ಮೊಹಲ್ಲಾ ಹೆಬ್ಬಾಳು 2ನೇ ಹಂತ, ನಂ.497, ಅಳತೆ 9x6 ಮೀ, ಪೂರ್ವಕ್ಕೆ –ರಸ್ತೆ, ಪಶ್ಚಿಮಕ್ಕೆ– ಮೂಡಾ ಆಸ್ತಿ, ಉತ್ತರಕ್ಕೆ–ನಿವೇಶನ ಸಂಖ್ಯೆ 496, ಸ್ವತ್ತಿನ ಬಳಿ, ದಕ್ಷಿಣಕ್ಕೆ – ನಿವೇಶನ ಸಂಖ್ಯೆ 498
3	ಎನ್.ಸರಸ್ವತಿ ಎಂ.ಎ ಶುಭ ಎಂ.ಎ. ಶ್ರೀದತ್ತ ಅಕೌಂಟ್ ನಂ: 6321101	32,00,000	86,00,000	30.3.2024 ಮಧ್ಯಾಹ್ನ 2 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ,ಚಾಮರಾಜ ಮೊಹಲ್ಲಾ ಚಟಿಕೆ 2ನೇ ಹಂತ, ಕುವೆಂಪು ನಗರ 2ನೇ ಹಂತ, ಮನೆ ನಂ. 166 ಎಲ್‌ಐಜಿ ಅಳತೆ 30x45 ಪೂರ್ವಕ್ಕೆ–ಮನೆ ನಂ.167, ಪಶ್ಚಿಮಕ್ಕೆ–ಮನೆ ನಂ. 165, ಉತ್ತರಕ್ಕೆ–ರಸ್ತೆ, ದಕ್ಷಿಣಕ್ಕೆ – ಮನೆ ನಂ. 175.
4	ಕೆ.ಬಿ.ಶಿವರಾಜು ಬಿನ್. ಬಸವಯ್ಯ ಅಕೌಂಟ್ ನಂ: 632919	16,00,000	42,00,000	30.3.2024 ಮಧ್ಯಾಹ್ನ 3 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ 3ನೇ ಹಂತ, ಮನೆ ನಂ.86, ಅಳತೆ 9*6 ಮೀ, ಬಿಟ್ ಆಫ್ ಲ್ಯಾಂಡ್ 9*1 ಮೀ, ಪೂರ್ವಕ್ಕೆ– ರಸ್ತೆ, ಪಶ್ಚಿಮಕ್ಕೆ–ನಿವೇಶನ ಸಂಖ್ಯೆ 85, ಉತ್ತರಕ್ಕೆ– ರಸ್ತೆ, ದಕ್ಷಿಣಕ್ಕೆ – ನಿವೇಶನ ಸಂಖ್ಯೆ 87.
5	ಪಿ. ನಟರಾಜನ್ ಮತ್ತು ಎನ್.ನಂದಕುಮಾರ್ ಅಕೌಂಟ್ ನಂ: 6321070	16,00,000	56,00,000	30.3.2024 ಮಧ್ಯಾಹ್ನ 4 ಗಂಟೆಗೆ ಸ್ವತ್ತಿನ ಬಳಿ	ಮೈಸೂರು ನಗರ ನಜರಬಾದ್ ಮೊಹಲ್ಲಾ ಬಜಾರ್ ರಸ್ತೆ, 2ನೇ ಕ್ರಾಸ್ ಮನೆ ನಂ.239/2ಬಿ, ಅಳತೆ 50x14 ಅಡಿ, ಪೂರ್ವಕ್ಕೆ– ಖಾಸಗಿ ಸ್ವತ್ತು ಪಶ್ಚಿಮಕ್ಕೆ –ಮುಖ್ಯರಸ್ತೆ, ಉತ್ತರಕ್ಕೆ–ಎಂ. ನಂಜುಂಡಯ್ಯರವರ ಮನೆ, ದಕ್ಷಿಣಕ್ಕೆ–ಖಾಸಗಿ ಸ್ವತ್ತು

ಹರಾಜಿನ ನಿಯಮ ಮತ್ತು ನಿಬಂಧನೆಗಳು

1. ಹರಾಜಿನಲ್ಲಿ ಭಾಗವಹಿಸುವವರು ರೂ. 25000 ಗಳನ್ನು ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು ಇವರ ಪರವಾಗಿ ಪಡೆದ ಡಿ.ಡಿ. ಅಥವಾ ನಗದು ರೂಪದಲ್ಲಿ ಠೇವಣಿಯಾಗಿ ಇಡಬೇಕು. ಹರಾಜಿನ ನಂತರ ಈ ಹಣವನ್ನು ಸ್ಥಳದಲ್ಲಿಯೇ ವಾಪಸ್ಸು ಪಡೆಯಬಹುದು.
2. ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಅದೇ ದಿನ ಬಿಡ್ ಮೊಬಲಗಿನ ಶೇ. 25 ರಷ್ಟು ಹಣವನ್ನು ನಗದು ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ. ಮೂಲಕ ಪಾವತಿಸಬೇಕು ಮತ್ತು ಉಳಿದ ಶೇ. 25 ರಷ್ಟು ಹಣವನ್ನು 15 ದಿನಗಳೊಳಗೆ ಸಂದಾಯ ಮಾಡಬೇಕಾಗಿರುತ್ತದೆ.
3. ಯಶಸ್ವಿಯಾದ ಬಿಡ್‌ದಾರರು ಕಾನೂನು / ಪ್ರಸಂಗಿಕ ಖರ್ಚು – ವೆಚ್ಚಗಳಾದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ, ನೀರು, ವಿದ್ಯುತ್ ಇತ್ಯಾದಿ ಎಲ್ಲವನ್ನೂ ತಾವೇ ಭರಿಸಬೇಕಾಗಿರುತ್ತದೆ.
4. ಸದರಿ ಹರಾಜು ಸ್ವತ್ತು ಹೇಗಿದೆಯೋ ಹಾಗೆಯೇ ಹರಾಜು ಮಾಡಲಾಗುತ್ತದೆ.
5. ಬ್ಯಾಂಕಿನ ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೇ ಬಿಡ್‌ಅನ್ನು ಮುಂದೂಡುವ ಅಥವಾ ರದ್ದು ಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
6. ಸ್ವತ್ತಿನ ಪರಿಶೀಲನೆ ಮತ್ತು ಹೆಚ್ಚಿನ ವಿವರಗಳಿಗಾಗಿ ಆಸಕ್ತ ಬಿಡ್‌ದಾರರು ಕೆಲಸದ ಯಾವುದೇ ದಿನದಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಸಾಯಂಕಾಲ 4.30 ಗಂಟೆಯಿಂದ 6.30 ಗಂಟೆಯವರೆಗೆ ಕಛೇರಿ ವೇಳೆಯಲ್ಲಿ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ದೂರವಾಣಿ : 2520026 / 2420829
ದಿನಾಂಕ: 14/3/2024, ಸ್ಥಳ : ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಸಿಟಿ ಕೋ – ಆಪರೇಟಿವ್ ಬ್ಯಾಂಕ್ ಲಿ., ಮೈಸೂರು



ಹಬ್ಬದ ಕೊಡುಗೆ
5 ರಿಂದ 50%* ಕಡಿತ
ದಿನಾಂಕ 15.03.2024 ರಿಂದ 15.04.2024
ರೇಷ್ಮೆ ಸೀರೆಗಳು | ಕಾಟನ್ ಸೀರೆಗಳು | ಫ್ಯಾನ್ಸಿ ಸೀರೆಗಳು | ಸಲ್ವಾರ್ ಮೆಟೀರಿಯಲ್ಸ್
ಮೈಸೂರು : ಕಾಂತರಾಜ ಅರಸ್ ರಸ್ತೆ, 1ನೇ ಮುಖ್ಯ ರಸ್ತೆ, ಸರಸ್ವತಿಪುರಮ್, ಫೋನ್ : 91500 16570
ಮಂಗಳೂರು | ಶಿವಮೊಗ್ಗ | ತಮಿಳುನಾಡು | ಪಾಂಡಿಚೇರಿ
Shop online at www.psrsilks.com /psrsilks Toll free 1800 425 7500 75400 05884

ನಕ್ಕರೆ ಅದೇ ಸ್ವರ್ಗ

ಮಾವ : (ಅಳಿಯನಾಗುವವನಿಗೆ) ತಾವು ಡ್ರಿಂಕ್ಸ್ ತಗೊಳ್ಳೋ ಅಭ್ಯಾಸ ಇದೆಯೇ?

ಭಾವಿ ಅಳಿಯ : ಮೊದಲು ಇದನ್ನು ಹೇಳಿ. ನೀವು ಹಾಕ್ತಿರೋದು ಪ್ರಶ್ನೇನೋ ಅಥವಾ ಕುಡಿಯೋಕೆ ಆಹ್ವಾನವೋ?

ಮೈಸೂರು ಮಿತ್ರ

ಶುಕ್ರವಾರ, 15 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ತನ್ನ ಗಂಡನ ಕೀರ್ತಿಗೆ ಕಳಂಕ ಬಾರದಂತೆ ಕಾಪಾಡುವುದು ಹೆಂಡತಿಯ ಧರ್ಮ. ಅದಕ್ಕಾಗಿ ಅವಳು ಸುಳ್ಳು ಹೇಳುವುದರಲ್ಲಿ ತಪ್ಪಿಲ್ಲ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಜನಕ್ಕಂಜದಿದ್ದರೂ ಮನಕ್ಕಂಜು

ನಿಮ್ಮ ಪತ್ರಗಳು

ಸಂವಿಧಾನ ಓದದ ಹೊರತಾಗಿ ಮಹತ್ವ ತಿಳಿಯದು

ಮಾನ್ಯರೆ,

ಡಾ. ಬಿ.ಆರ್.ಅಂಬೇಡ್ಕರ್ ಅವರು ಯಾವುದೇ ಜಾತಿ ಧರ್ಮಕ್ಕೆ ಸೀಮಿತವಾಗದೆ, ಎಲ್ಲಾ ಜಾತಿ ಧರ್ಮಗಳಿಗೂ ಸಲ್ಲುವಂತೆ ಸಂವಿಧಾನವನ್ನು ರಚಿಸಿ ದೇಶಕ್ಕೆ ನೀಡಿದ್ದಾರೆ.

ನನ್ನ ಸಂವಿದಾನದ ಬಗ್ಗೆ ನಿಮಗೆ ಏನಾದರೂ ಅನುಮಾನವಿದ್ದರೆ ತಪ್ಪದೇ ಸಂವಿಧಾನವನ್ನು ಓದಿ ಎಂಬುದು ಅಂಬೇಡ್ಕರ್ ಅವರ ಮಾತು. ಆದರೆ ಇಂದಿಗೂ ಬಹಳಷ್ಟು ಮಂದಿ ಸಂವಿಧಾನವನ್ನು ಓದದೆ ಅದನ್ನು ಟೀಕಿಸುತ್ತಿರುವುದು ಬೇಸರದ ಸಂಗತಿ. ದೇಶ ಎಲ್ಲಾ ಕ್ಷೇತ್ರದಲ್ಲಿಯೂ ಅಭಿವೃದ್ಧಿ ಹೊಂದಲು ಬಲಿಷ್ಟ ಅಡಿಪಾಯವನ್ನು ಸಂವಿಧಾನ ಹಾಕಿಕೊಟ್ಟಿದೆ. ಚಹಾ ಮಾರುತ್ತಿದ್ದ ವ್ಯಕ್ತಿ ಪ್ರಧಾನಿಯಾಗಲು, ಆದಿವಾಸಿ ಸಮುದಾಯದ ಮಹಿಳೆ ರಾಷ್ಟ್ರಪತಿಯಾಗಲು ನಮ್ಮ ಸಂವಿಧಾನದಿಂದ ಸಾಧ್ಯವಾಗಿದೆ.

ಸಂವಿಧಾನದ ಮಹತ್ವ ಗೊತ್ತಿದ್ದರೂ ಕೆಲವರು ಸಂವಿಧಾನದ ಬಗ್ಗೆ ಹಗುರವಾಗಿ ಮಾತನಾಡುವುದರ ಜೊತೆಗೆ ಅದನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತಿರುವುದು ದೇಶದ್ರೋಹದ ಕೆಲಸವಲ್ಲದೆ ಮತ್ತೇನು? ಅದರಲ್ಲಿಯೂ ಜನಪ್ರತಿನಿಧಿಗಳು ಸಂವಿಧಾನದ ಬದಲಾವಣೆ ಬಗ್ಗೆ ಮಾತನಾಡುತ್ತಿರುವುದು ಆಘಾತಕಾರಿ ಸಂಗತಿ. ಯಾರೇ ಆದರೂ ಸಂವಿಧಾನವನ್ನು ಜಾತಿ ಕಣ್ಣಿಂದ ನೋಡದೆ ಅದು ಪ್ರತಿಯೊಬ್ಬ ನಾಗರಿಕನಿಗೂ ಸಲ್ಲುವ ಗ್ರಂಥ ಎಂದು ಕಾಣಬೇಕು. ಪ್ರತಿಯೊಬ್ಬರು ಸಂವಿಧಾನವನ್ನು ಓದಬೇಕು. ಆಗ ಮಾತ್ರ ಸಂವಿಧಾನದ ಮಹತ್ವ ತಿಳಿಯಲು ಸಾಧ್ಯ. ಸಂವಿಧಾನವನ್ನು ಓದದೆ, ಅರ್ಥೈಸಿಕೊಳ್ಳದೆ ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆ ಎನ್ನುವವರು ಮೂರ್ಖರು.

–ಕೆ.ಎಸ್.ಸುರೇಶ್, ಶಿಕ್ಷಕರು, ಕೆ.ಜಿ. ಹಳ್ಳಿ, ಹೆಚ್.ಡಿ.ಕೋಟೆ.

ಅವಶ್ಯವಿದ್ದಾಗ ಸಿಗ್ನಲ್ ಲೈಟ್ ಕಾರ್ಯನಿರ್ವಹಿಸಲಿ



ಮಾನ್ಯರೆ,

ಮೈಸೂರಿನ ಕುವೆಂಪುನಗರದ ಆದಿ ಚುಂಚನಗಿರಿ ರಸ್ತೆಯ ಅಗರವಾಲ್ ಕಣ್ಣಿನ ಆಸ್ಪತ್ರೆಯ ವೃತ್ತಕ್ಕೆ ಕಳೆದ ವಾರ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಇಲ್ಲಿ ಸಾಮಾನ್ಯವಾಗಿ ಬೆಳಗ್ಗೆ ಮತ್ತು ಸಂಜೆ ವೇಳೆಯಲ್ಲಿ ಮಾತ್ರ ಹೆಚ್ಚಿನ ವಾಹನ ಸಂಚಾರವಿರುತ್ತದೆ. ಆದರೆ ಈಗ ಸಿಗ್ನಲ್ ಲೈಟ್ ಅಳವಡಿಸಿದ ನಂತರ ಬೆಳಗ್ಗೆ 8 ಗಂಟೆಯಿಂದ ರಾತ್ರಿ 9 ಗಂಟೆವರೆಗೂ ಈ ಸಿಗ್ನಲ್ ಲೈಟ್ ಆನ್ ಆಗಿರುತ್ತದೆ. ಇದರಿಂದಾಗಿ ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ ಓಡಾಡುವ ವಾಹನ ಸವಾರರು ಬಹಳಷ್ಟು ಹೊತ್ತು ಬಿಸಿಲಿನಲ್ಲಿ ನಿಲ್ಲಬೇಕಾದ ಅನಿವಾರ್ಯತೆ ಇದೆ. ಇದೇ ಪರಿಸ್ಥಿತಿ ಮೈಸೂರಿನ ಅನೇಕ ಕಡೆಗಳಲ್ಲಿ ಇದೆ. ವಾಹನ ಸಂಚಾರ ದಟ್ಟಣೆ ಕಡಿಮೆ ಇರುವ ಕಡೆಗಳಲ್ಲಿ ಬೆಳಿಗ್ಗೆ ಎರಡು ಗಂಟೆಗಳ ಕಾಲ ಮತ್ತು ಸಂಜೆ ಎರಡು ಗಂಟೆಗಳ ಕಾಲ ಮಾತ್ರ ಸಿಗ್ನಲ್ ಲೈಟ್ ಆನ್ ಆಗಿದ್ದರೆ ಸಾಕು. ಇದರಿಂದ ವಾಹನ ಸವಾರರಿಗೆ ಪೆಟ್ರೋಲ್ ಮತ್ತು ಸಮಯ ಎರಡನ್ನೂ ಉಳಿತಾಯ ಮಾಡಿದಂತಾಗುತ್ತದೆ. **–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು**

ಮಕ್ಕಳೊಂದಿಗೆ ಆಟವಾಡುತ್ತಿದೆಯೇ ಶಿಕ್ಷಣ ವ್ಯವಸ್ಥೆ?

ಮಾನ್ಯರೆ,


ನಮಗೆಲ್ಲಾ ತಿಳಿದ ಹಾಗೆ 5,8 ಮತ್ತು 9ನೇ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ಎಂದು ಶಿಕ್ಷಣ ಸಂಯೋಜಕರು ತಿಳಿಸಿದ ಹಾಗೆ ಎಲ್ಲಾ ಖಾಸಗಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಪರೀಕ್ಷೆಗೆಂದೆ ಸಕಲ ತಯಾರಿ ಮಾಡಿಕೊಳ್ಳಲಾಯಿತು. ಇಲಾಖೆಯ ಮಾದರಿ ಪ್ರಶ್ನೆ ಪತ್ರಿಕೆಯಂತೆ ಮಕ್ಕಳು ಪರೀಕ್ಷೆಗೆ ತಯಾರಾಗುತ್ತಿದ್ದಾರೆ. ಆದರೆ ಇದೀಗ ಪಬ್ಲಿಕ್ ಪರೀಕ್ಷೆ ರದ್ದು ಎಂಬ ಕೋರ್ಟಿನ ತೀರ್ಪು ಕೇಳಿದ ಮಕ್ಕಳಲ್ಲಿ ಪರೀಕ್ಷೆ ಬರೆಯುವ ಉತ್ಸಾಹ ಠುಸ್ ಎಂದು ಬಿಟ್ಟಿದೆ. ಪರೀಕ್ಷೆ ಸಮೀಪಿಸುತ್ತಿದ್ದಂತೆ ಈ ತೀರ್ಮಾನ ಹೊರ ಹಾಕಿರುವುದು ಸಮ್ಮತವೇ? ಹಿರಿಯರು, ನುರಿತರು ಈ ವಿಷಯವಾಗಿ ತರ್ಕಿಸಬೇಕಾಗಿ ಕೋರಿಕೆ. ಈ ರೀತಿಯಲ್ಲಿ ಇದ್ದಕ್ಕಿದ್ದ ಹಾಗೆ ವ್ಯವಸ್ಥೆ ಬದಲಾಗುತ್ತಾ ಹೋದರೆ ಮುಂದೆ ಮಕ್ಕಳ ಮಾನಸಿಕ ಸ್ಥಿತಿಯ ಮೇಲೆ ದೊಡ್ಡ ಹೊಡೆತ ಬೀಳುವುದಂತು ಅಕ್ಷರಶಃ ಸತ್ಯ!.

ಈ ರೀತಿಯಲ್ಲಿ ಮಕ್ಕಳ ಶಿಕ್ಷಣದೊಂದಿಗೆ ಶಿಕ್ಷಣ ವ್ಯವಸ್ಥೆ ಆಟವಾಡುತ್ತಿದ್ದರೆ ಅವರಿಗೆ ಓದಿನಲ್ಲಿ ಋಣಾತ್ಮಕ ಭಾವನೆ ಉಂಟಾಗಬಹುದು. ಅವರ ಆಸಕ್ತಿ ಕುಂದು ಹೋಗಬಹುದು. ಪರೀಕ್ಷೆ ಎಂಬ ಹೆಸರು ಕೇಳಿದರೆ ಅವರಿಗೆ ತಾತ್ಸಾರ ಉಂಟಾಗಬಹುದು. ಈ ರೀತಿಯ ಮಕ್ಕಳ ಚಿಂತನೆಗೆ ನಾವೇ ಅನುವು ಮಾಡಿಕೊಟ್ಟ ಹಾಗೆ ಆಗುತ್ತದೆ. ಈ ರೀತಿಯಾಗಿ ಮಕ್ಕಳ ಭವಿಷ್ಯದ ಜೊತೆ ಆಟವಾಡದೆ ನಿರ್ಧಾರ ವೇನೆ ತೆಗೆದುಕೊಡರೆ ಸ್ಪಷ್ಟ ನಿಲುವಿನೊಂದಿಗೆ ಆರಂಭದಲ್ಲೇ ತೆಗೆದುಕೊಂಡು ಮಕ್ಕಳ ಭವಿಷ್ಯ ಉಜ್ವಲಗೊಳ್ಳುವಂತೆ ಮಾಡುವಲ್ಲಿ ಇಲಾಖೆಯ ಜೊತೆ ಎಲ್ಲರೂ ಕೈ ಜೊಡಿಸೋಣ. ಮುಂದೆಂದು ಹೀಗಾಗದಿರಬಾರದೆಂದು ವಿದ್ಯಾರ್ಥಿಗಳ ಪರವಾಗಿ ನನ್ನ ಕೋರಿಕೆ?! **–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು**

ಮೈಸೂರಿಗೂ ನೂತನ ಸಾರಿಗೆ ಬಸ್‌ಗಳ ಭಾಗ್ಯ ನೀಡಿ

ಮಾನ್ಯರೆ,

ಮೈಸೂರು ನಗರದಲ್ಲಿ ರಾಜ್ಯ ಸರ್ಕಾರದ ಶಕ್ತಿ ಯೋಜನೆ ಮಹಿಳೆಯರ ಉಚಿತ ಪ್ರಯಾಣದಿಂದ ನಗರ ಸಾರಿಗೆ ಬಸ್‌ಗಳು ಕಿಕ್ಕಿರಿದು ತುಂಬಿರುತ್ತವೆ. ಬಹುತೇಕ ಸಾರಿಗೆ ಬಸ್‌ಗಳ ಆಯುಷ್ಯ ಮುಗಿದಿದ್ದು, ಗುಜರಿಗೆ ತಳ್ಳುವ ಹಂತಕ್ಕೆ ತಲುಪಿವೆ. ಸಾಲದ್ದಕ್ಕೆ ಹಳೆಯ ದುಸ್ಥಿತಿಯಲ್ಲಿರುವ ಬಿಎಂಟಿಸಿ ಬಸ್‌ಗಳನ್ನು ಮೈಸೂರು ನಗರದಲ್ಲಿ ಸಂಚರಿಸಲು ಬಿಟ್ಟಿರುತ್ತಾರೆ. ಇವುಗಳು ಸಂಚಾರಕ್ಕೆ ಯೋಗ್ಯವಲ್ಲ. ಅನೇಕ ಬಾರಿ ನಿಂತಲ್ಲಿಯೇ ಕೆಟ್ಟು ನಿಲ್ಲುತ್ತವೆ. ಈ ಬಸ್‌ಗಳನ್ನು ಚಾಲನೆ ಮಾಡುವ ಚಾಲಕರ ಪಾಡಂತೂ ಹೇಳತೀರದು. ಹೊಸ ಸಾರಿಗೆ ಬಸ್‌ಗಳನ್ನು ಸಂಚಾರಕ್ಕೆ ಅನುಕೂಲ ಮಾಡಿಕೊಡಿ. **–ನೊಂದ ನಾಗರೀಕರು.**



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ


ಪ್ರಸಂಗ ಮೂರಾದರೂ ಸಂದೇಶ ಒಂದೇ...!

ಜೀವನವೆಲ್ಲವೂ ನಾವು ಅಂದುಕೊಂಡಂತೆಯೇ ನಡೆಯುವುದಿಲ್ಲ. ಕೆಲವೊಮ್ಮೆ ಪರಿಸ್ಥಿತಿಗಳು ನಮ್ಮನ್ನು ಬದಲಿಸಿಬಿಡುತ್ತವೆ. ನಾವು ಬದಲಾವಣೆಗೆ ಮನಸ್ಸು ಮಾಡದಿದ್ದರೆ ಜೀವನದಲ್ಲಿ ಸೋಲು ಅನುಭವಿಸಬೇಕಾಗುತ್ತದೆ. ಬದಲಾವಣೆ ಜಗದ ನಿಯಮ ಎಂದು ಹೇಳಲಾಗುತ್ತದೆ. ಇದರ ಅರ್ಥ ನಾವು ಎಲ್ಲವನ್ನು ಬದಲಾಯಿಸಬೇಕು ಎಂದಲ್ಲ. ಆದರೆ ಅಂತಹ ಬದಲಾವಣೆಯಿಂದ ನಮಗೆ ಹಾಗೂ ಸಮಾಜಕ್ಕೆ ಒಳಿತಾಗುತ್ತದೆ ಎಂದಾದರೆ ಅದನ್ನು ಒಪ್ಪಿಕೊಳ್ಳಬೇಕು.

ಇತ್ತೀಚೆಗೆ ಓದಿದ ಒಂದೆರಡು ಕಥೆ ಅಥವಾ ಘಟನೆಯನ್ನು ಹಂಚಿಕೊಳ್ಳಬೇಕೆನಿಸಿತು. ಆಸೆ ಒಳ್ಳೆಯದೇ, ಆದರೆ ದುರಾಸೆ ಎಂದಿಗೂ ಕೆಟ್ಟದ್ದೇ ಎಂಬುದು ನಮಗೆಲ್ಲಾ ತಿಳಿದಿರುವಂತಹುದೇ. ಆದರೂ ನಾವು ದುರಾಸೆ ಪಡುವುದನ್ನು ಬಿಡುವುದಿಲ್ಲ. ಆದು ಆರಂಭದಲ್ಲಿ ಚೆನ್ನಾಗಿದೆ ಎನಿಸಿದರೂ ಅಂತಿಮವಾಗಿ ಅದರಿಂದ ತೊಂದರೆ ತಪ್ಪಿದ್ದಲ್ಲ.

ಒಂದು ಒಬ್ಬ ವ್ಯಾಪಾರಿ ಕಥೆ. ಒಂದು ಊರಿನ ಒಬ್ಬ ಶ್ರೀಮಂತನಿಗೆ ಹಣದ ಹುಚ್ಚು ಹೆಚ್ಚು. ತನ್ನ ಹಣವನ್ನು ಹೆಚ್ಚಿಸಬೇಕೆಂದು ಯಾವಾಗಲೂ ಆಲೋಚಿಸುತ್ತಿದ್ದನು. ಅವನು ಹಣವನ್ನು ಬಡ್ಡಿಗೂ ನೀಡುತ್ತಿದ್ದನು. ತನ್ನಿಂದ ಹಣ ಪಡೆದವರು ಸಕಾಲದಲ್ಲಿ ಮರುಪಾವತಿಸದಿದ್ದರೆ ಅವರನ್ನು ಕಡಿಮೆ ಕೂಲಿಗೆ ತನ್ನ ಮನೆಯ ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿದ್ದನು. ಆ ರೀತಿ ಹಲವು ನೌಕರರು ಅವನ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಕಡಿಮೆ ವೇತನವಾದ್ದರಿಂದ ಅವನಿಗೆ ಹೆಚ್ಚಿನ ಹಣ ಉಳಿಯುತ್ತಿತ್ತು. ಹಣ ಸೇರಿದಷ್ಟೂ ಅವನ ದುರಾಸೆಯೂ ಹೆಚ್ಚುತ್ತಿತ್ತು. ಒಮ್ಮೆ ಅವನ 50 ಚಿನ್ನದ ನಾಣ್ಯವಿರುವ ಚೀಲವೊಂದು ನಾಪತ್ತೆಯಾಯಿತು. ಎಲ್ಲರಿಂದಲೂ ಹುಡುಕಾಟ ನಡೆಯಿತು. ಸಿಗಲಿಲ್ಲ. ಒಂದು ದಿನ ಅವನ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ವಯಸ್ಸಾದ ವ್ಯಕ್ತಿಯ ಮೊಮ್ಮಗಳಿಗೆ ಆ ಹಣದ ಚೀಲ ದೊರಕಿತು. ಆಕೆ ಅದನ್ನು ತಂದು ತಾತನಿಗೆ ಕೊಡುತ್ತಾಳೆ. ತಾತ ಅದನ್ನು ಎಣಿಸಿದಾಗ ಅದರಲ್ಲಿ 50 ಚಿನ್ನದ ನಾಣ್ಯವಿರುತ್ತದೆ. ಅವನಿಗೆ ಇದು ತನ್ನ ಯಜಮಾನನದ್ದೇ ಎಂದು ಗೊತ್ತಾಗಿ, ಅದನ್ನು ತಂದು ಯಜಮಾನನಿಗೆ ಕೊಡುತ್ತಾನೆ. ಹಣದ ಚೀಲ ಸಿಕ್ಕಿದ್ದು ಶ್ರೀಮಂತನಿಗೆ ಸಂತೋಷವಾದರೂ ಇದರಿಂದ ತಾನು ಏನಾದರೂ ಲಾಭ ಪಡೆಯಬೇಕೆಂದು ಯೋಚಿಸಿ, ಆ ವಯೋವೃದ್ಧನಿಗೆ ನನ್ನ ಈ ಚೀಲದಲ್ಲಿ 75 ನಾಣ್ಯಗಳಿತ್ತು, ಈಗ 50 ನಾಣ್ಯ ಹಿಂದಿರುಗಿಸಿ ಉಳಿದಿದ್ದನ್ನು ನನಗೆ ವಂಚಿಸಿರುವೆ ಎಂದ. ಈ ವೃದ್ಧ ಇಲ್ಲ, ಅದರಲ್ಲಿ ಇದ್ದುದ್ದೇ ಇಷ್ಟು ಎಂದರೂ ಕೇಳದೆ ಅವನು ನ್ಯಾಯಾಧೀಶರ ಬಳಿಗೆ ದೂರು ಕೊಂಡೊಯ್ಯುತ್ತಾನೆ. ನ್ಯಾಯಾಧೀಶರು ವಿಚಾರಣೆ ನಡೆಸಿದಾಗ ಶ್ರೀಮಂತ ಆ ಚೀಲದಲ್ಲಿ 75 ನಾಣ್ಯಗಳಿತ್ತು ಎಂದೇ ವಾದಿಸುತ್ತಾನೆ. ವೃದ್ಧ ಇಲ್ಲ, ನಮಗೆ ಸಿಕ್ಕಿದ್ದನ್ನು ಪ್ರಾಮಾಣಿಕವಾಗಿ ವಾಪಸ್ಸು ನೀಡಿದ್ದೇನೆ ಎನ್ನುತ್ತಾನೆ. ನ್ಯಾಯಾಧೀಶರಿಗೆ ತಕ್ಷಣ ನ್ಯಾಯ ತೀರ್ಮಾನ ಮಾಡಲಾಗುವುದಿಲ್ಲ. ಕೊನೆಗೆ ಶ್ರೀಮಂತ, ವೃದ್ಧ ಹಾಗೂ ಆತನ ಮೊಮ್ಮಗಳನ್ನು ಪ್ರತ್ಯೇಕವಾಗಿ ಕರೆದು ವಿಚಾರಣೆ ಮಾಡುತ್ತಾರೆ. ಆಗ ಅವರೆಲ್ಲಾ ತಾವು ಮೊದಲು ಏನು ಹೇಳಿದ್ದರೋ ಅದನ್ನೇ ಹೇಳುತ್ತಾರೆ. ಕೊನೆಗೆ ನ್ಯಾಯಾಧೀಶರಿಗೆ ವೃದ್ಧ ಹಾಗೂ ಆತನ ಮೊಮ್ಮಗಳು ಹೇಳುತ್ತಿರುವುದು ಸರಿ ಎಂದು ಅರಿವಾಗುತ್ತದೆ. ಆದರೆ ತೀರ್ಪು ಏನೆಂದು ನೀಡುವುದು? ಯೋಚಿಸಿ, ಒಂದು ತೀರ್ಮಾನಕ್ಕೆ ಬಂದು ತೀರ್ಪು ನೀಡುತ್ತಾರೆ. ಅವರು ತೀರ್ಪಿನಲ್ಲಿ ಹೇಳಿದ್ದೇನೆಂದರೆ ಶ್ರೀಮಂತ ತನ್ನ ಚೀಲದಲ್ಲಿ 75 ನಾಣ್ಯವಿತ್ತು ಎಂದಿದ್ದಾನೆ. ಈ ವೃದ್ಧರಿಗೆ ಸಿಕ್ಕಿರುವುದು 50 ನಾಣ್ಯಗಳಿರುವ ಚೀಲ. ಆದ್ದರಿಂದ ಈ ಚೀಲ ಶ್ರೀಮಂತನದ್ದಲ್ಲ. ಈವರೆವಿಗೆ ಯಾರೂ 50 ನಾಣ್ಯದ ಚೀಲದ ಬಗ್ಗೆ ದೂರು ನೀಡಿಲ್ಲ. ಆದ್ದರಿಂದ ಈ ಚೀಲ ವೃದ್ಧನಿಗೆ ಸೇರಬೇಕು. ಆತನೇ ಇದರ ಒಡೆಯ ಎಂದು ತೀರ್ಪು ನೀಡುತ್ತಾರೆ. ಶ್ರೀಮಂತ ತನ್ನ ದುರಾಸೆಯಿಂದಾಗಿ ನ್ಯಾಯವಾದ ತನ್ನ ಹಣ ಕಳೆದುಕೊಳ್ಳುತ್ತಾನೆ. ದುರಾಸೆಗೆ ಇದೇ ಗತಿ ಎಂದು ಈ ಕಥೆ ಕೇಳಿದಾಗ/ಓದಿದಾಗ ಅನಿಸುತ್ತದೆ.

ಇದಕ್ಕೆ ವ್ಯತಿರಿಕ್ತವಾದ ಒಂದು ನೈಜ ಘಟನೆಯೂ ಇದೆ. ಇದು ತಮಿಳುನಾಡಿನಲ್ಲಿ ಒಂದೆರಡು ವರ್ಷಗಳ ಹಿಂದೆ ನಡೆದಂತಹ ಸಂಗತಿ. ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಕಥೆಯಿದು. ಆತ ಕಲ್ಯಾಣ ಸುಂದರಂ. ಆತ ಹುಟ್ಟಿದ್ದು ಒಂದು ಸಭ್ಯಸ್ಥ ಕುಟುಂಬದಲ್ಲಿ. ಹುಟ್ಟಿ ಒಂದು ವರ್ಷವಾಗುವುದರೊಳಗೆ ಅವನ ತಂದೆ ಮೃತರಾದರು. ಇವನ ಪಾಲನೆಯ ಹೊಣೆ ತಾಯಿಯದ್ದಾಯಿತು. ಎಂದಿನಂತೆ ನೆಂಟರಿಷ್ಟರು ಯಾವುದೇ ಸಹಾಯ ಮಾಡದೆ ಹುಡುಗ ಹುಟ್ಟಿದ ಒಂದು ವರ್ಷದಲ್ಲಿ ತಂದೆಯನ್ನು ತಿಂದುಕೊಂಡ, ಅವನು ಜನಿಸಿದ ನಕ್ಷತ್ರವೇ ಚೆನ್ನಾಗಿಲ್ಲ ಎಂದು ಹೇಳಿ ಕೈಚೆಲ್ಲಿದರು. ಕಲ್ಯಾಣಸುಂದರಂ ಬುದ್ಧಿವಂತ. ಆದರೆ ಅವನಲ್ಲಿ ಒಂದು ಕೊರತೆ ಇತ್ತು. ಅವನ ಧ್ವನಿ ಬಹಳ ಕೀರಲಾಗಿತ್ತು. ತನ್ನ ಧ್ವನಿ ಇತರರಂತಿಲ್ಲ ಎಂಬುದು ಅವನಲ್ಲಿ ಕೀಳರಿಮೆ ಮೂಡಿಸಿತ್ತು. ಅವನಿಗೆ ಹತ್ತು ಹನ್ನೆರಡು ವಯಸ್ಸಾದರೂ ಈ ಸಮಸ್ಯೆ ನಿವಾರಣೆಯಾಗಲಿಲ್ಲ. ದಿನದಿಂದ ದಿನಕ್ಕೆ ಆ ಕೀರಲು ಧ್ವನಿ ಮತ್ತಷ್ಟು ಪೀಡಲಾರಂಭಿಸಿತು. ಇದರಿಂದ ಬೇಸತ್ತ ಆತ ಜೀವನವನ್ನೇ ಮುಕ್ತಾಯಗೊಳಿಸಿಕೊಳ್ಳಲು ಬಯಸಿದ. ಆ ಕ್ಷಣದಲ್ಲಿ ಅವನಿಗೆ ತಾಯಿಯ ನೆನಪಾಯಿತು. ಅವಳ ಬಳಿ ಬಂದು ಸಮಾಧಾನವಾಗುವ ತನಕ ಕಣ್ಣೀರಿಟ್ಟ, ಸಮಸ್ಯೆಯನ್ನು ಅರಿತ ತಾಯಿ ಅವನನ್ನು ಸಮಾಧಾನಪಡಿಸಿ ಮೂರು ಮಾತುಗಳನ್ನು ಹೇಳಿದಳು. ಅದೇಂದರೆ; ಆಸೆ ಪಡಬೇಡ, ದುಡಿದಿದ್ದರಲ್ಲಿ ಶೇ.10 ಸಮಾಜಕ್ಕೆ ಕೊಡು ಹಾಗೂ ಪ್ರತಿದಿನವೂ ಒಬ್ಬರಿಗಾದರೂ ಸಹಾಯ ಮಾಡು. ತಾಯಿಯ ಮಾತು ಅವನಿಗೆ ವೇದವಾಕ್ಯವಾಯಿತು. ಅಂದಿನಿಂದ ತನಗೆ ಸಿಗುತ್ತಿದ್ದ ಸ್ವಲ್ಪ ಹಣದಲ್ಲೇ ವಯಸ್ಸಾದವರಿಗೆ, ಭಿಕ್ಷುಕರಿಗೆ ಸಹಾಯ ಮಾಡತೊಡಗಿದ. ಇದರಿಂದ ಅವನ ಕೀಳರಿಮೆ ಕಡಿಮೆಯಾಗತೊಡಗಿತು. ಜೊತೆಗೆ ಸಮಾಜ ಸೇವೆಯ ಹುಚ್ಚು ಮೆಲ್ಲನೆ ಏರತೊಡಗಿತು. ಅಂದಿನ ಪ್ರಧಾನಿ ನೆಹರು ಚೈನಾದ ಜೊತೆ ಯುದ್ಧ ಆರಂಭವಾದಾಗ ದೇಶದ ರಕ್ಷಣಾ ನಿಧಿಗೆ ಹಣ ನೀಡುವಂತೆ ದೇಶದ ಜನರಿಗೆ ಕರೆ ನೀಡಿದ್ದರು. ಅದನ್ನು ಗಮನಿಸಿದ ಕಲ್ಯಾಣ ಸುಂದರಂ ತನ್ನಲ್ಲಿದ್ದ ಏಕೈಕ ಚಿನ್ನದ ಸರವನ್ನು ತಮಿಳುನಾಡಿನ ಅಂದಿನ ಮುಖ್ಯಮಂತ್ರಿ ಕಾಮರಾಜ್ ಅವರನ್ನು ಭೇಟಿ ಮಾಡಿ ನೀಡಿಬಿಟ್ಟ, ಆಗಿನ್ನೂ ಆತ ಹತ್ತನೇ ತರಗತಿಯ ವಿದ್ಯಾರ್ಥಿ.



ಕಲ್ಯಾಣ ಸುಂದರಂ

> ಅಲ್ಪಸ್ವಲ್ಪ ಹಣವನ್ನು ನೀಡಿದವರು, ತಾವು ಹಣ ನೀಡಿದ್ದು ಇತರರಿಗೆ ಗೊತ್ತಾಗಲಿ ಎಂದು ಪ್ರಚಾರ ಬಯಸುವ ಸಂದರ್ಭದಲ್ಲಿ ಕಲ್ಯಾಣ ಸುಂದರಂ ಅಂತಹವರು ತೆರೆಯ ಮರೆಯಲ್ಲೇ ಉಳಿದುಬಿಡುತ್ತಾರೆ. ಅವರಿಗೆ ಯಾವ ಪ್ರಚಾರದ ಹಂಬಲವೂ ಇಲ್ಲ. ಸಮಾಜ ಸೇವೆಯನ್ನು ಅವರು ಕರ್ತವ್ಯ ಎಂದೇ ಭಾವಿಸುತ್ತಾರೆ. ಅಂತಹವರ ಬಗ್ಗೆ ಸಮಾಜವೂ ಗೌರವಿಸುತ್ತದೆ.

ಪಿಯುಸಿ ಮುಗಿಸಿದ ಆತ ಗ್ರಂಥಾಲಯ ವಿಷಯವನ್ನು ತೆಗೆದುಕೊಂಡು ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆ ಬರೆದು, ಚಿನ್ನದ ಪದಕ ಗಳಿಸಿದ. ಸರ್ಕಾರದ ಗ್ರಂಥಾಲಯ ಇಲಾಖೆಯಲ್ಲಿ ಅವನಿಗೆ ಕೆಲಸವೂ ದೊರೆಯಿತು. ಆತ ತನ್ನ ಸಂಬಳದ ಹಣ ಬಂದ ಕೂಡಲೇ ಅದನ್ನು ಅವಶ್ಯಕತೆ ಇರುವವರನ್ನು ಹುಡುಕಿ ದಾನ ಮಾಡಿಬಿಡುತ್ತಿದ್ದ. ತನ್ನ ಈ ಕಾಯಕಕ್ಕೆ ಮದುವೆ ಅಡ್ಡಿಯಾಗಬಹುದೆಂಬ ಕಾರಣಕ್ಕೆ ಮದುವೆಯಾಗದೇ ಇರಲು ತೀರ್ಮಾನಿಸಿದ. ಬರುವ ಅಷ್ಟೂ ಹಣ ಸಮಾಜಕ್ಕೆ ಅರ್ಪಿಸುತ್ತಿದ್ದ. ತನ್ನ ಊಟ, ತಿಂಡಿಗಾಗಿ ಕೆಲಸದ ನಂತರ ಒಂದು ಹೋಟೆಲ್‌ನಲ್ಲಿ ಪಾರ್ಟ್‌ಟೈಮ್ ಕೆಲಸಕ್ಕೆ ಸೇರಿದ. ಅಲ್ಲಿ ಪಾತ್ರೆ ತೊಳೆಯುವುದೂ ಸೇರಿದಂತೆ ಹಲವು ಕೆಲಸ ಮಾಡಿದ. ಒಬ್ಬ ಚಿನ್ನದ ಪದಕ ವಿಜೇತ ತಾನು ಎಂಬುದನ್ನೂ ಮರೆತು ನಿರಂತರವಾಗಿ ದುಡಿದ. ನಂತರ ದಾನಿಗಳು ಮತ್ತು ನಿರ್ಗತಿಕರ ನಡುವೆ ಕೆಲಸ ಮಾಡುವುದಕ್ಕಾಗಿಯೇ 'ಪಾಲಂ' ಎಂಬ ಸಂಸ್ಥೆ ಸ್ಥಾಪಿಸಿದ. ಪಾಲಂ ಎಂದರೆ ಸೇತುವೆ ಎಂದರ್ಥ. ಅದು ಈಗಲೂ ಕೆಲಸ ನಿರ್ವಹಿಸುತ್ತಿದೆ ಎಂಬುದು ಗಮನಾರ್ಹ ವಿಚಾರ. ಅವರಿಗೆ 60 ವರ್ಷ ವಯಸ್ಸಾದ ನಂತರ ನಿವೃತ್ತಿಯಾದರು. ತನಗೆ ನಿವೃತ್ತಿಯಿಂದ ಬಂದ ಪೂರ್ಣ ಹಣವನ್ನು ಬಡ ಮಕ್ಕಳ ಶಿಕ್ಷಣಕ್ಕೆ ಎಂದು ದಾನ ಮಾಡಿಬಿಟ್ಟರು. ಇಂದಿಗೂ ತನಗೆ ಬರುವ ನಿವೃತ್ತಿ ವೇತನವನ್ನು ಬಡಮಕ್ಕಳ ಶಿಕ್ಷಣಕ್ಕಾಗಿಯೇ ವಿನಿಯೋಗಿಸುತ್ತಿದ್ದಾರೆ.

ಇವರ ಬಗ್ಗೆ ತಿಳಿದ ಭಾರತ ಸರ್ಕಾರ ಇವರಿಗೆ 'ಅತ್ಯುತ್ತಮ ಗ್ರಂಥಪಾಲಕ' ಪ್ರಶಸ್ತಿ ನೀಡಿ, ಪುರಸ್ಕರಿಸಿತು. ಅಮೆರಿಕಾ ಸಂಯುಕ್ತ ಸಂಸ್ಥಾನ ಇವರನ್ನು 'ಭಾರತದ ಅತ್ಯುತ್ತಮ ಗ್ರಂಥಪಾಲಕ' ಎಂದು ಗೌರವಿಸಿತು. ಇದಲ್ಲದೆ ರೋಟರಿ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಪ್ರಶಸ್ತಿಯ ಜೊತೆಗೆ ನಗದನ್ನೂ ನೀಡಿದವು. ಒಂದು ಲೆಕ್ಕದ ಪ್ರಕಾರ ಹೀಗೆ ಸಂಗ್ರಹವಾದ ಮೊತ್ತ ಮೂವತ್ತು ಕೋಟಿ ರೂಪಾಯಿ. ಇದೆಲ್ಲವನ್ನೂ ತನ್ನ 'ಪಾಲಂ' ಸಂಸ್ಥೆಯ ಮೂಲಕ ಅವಶ್ಯಕತೆ ಇದ್ದವರಿಗೆ, ಶಾಲಾ ಶಿಕ್ಷಣಕ್ಕೆ ಎಂದು ನೀಡಿದ. ಇದನ್ನೆಲ್ಲಾ ಗಮನಿಸಿದ ಸೂಪರ್ ಸ್ಟಾರ್ ರಜನೀಕಾಂತ್ ಅವರನ್ನು ತಂದೆಯ ರೂಪದಲ್ಲಿ ದತ್ತು ಪಡೆದಿದ್ದಾರೆ ಎಂಬುದು ವಿಶೇಷ ಸಂಗತಿ.

ಇಂತಹವರು ಇಂದಿಗೂ ನಮ್ಮ ಸಮಾಜದಲ್ಲಿ ಇದ್ದಾರೆ ಎಂಬುದೇ ನಮಗೆ ಹೆಮ್ಮೆಯ ಸಂಗತಿ. ಅಲ್ಪಸ್ವಲ್ಪ ಹಣವನ್ನು ನೀಡಿದವರು, ತಾವು ಹಣ ನೀಡಿದ್ದು ಇತರರಿಗೆ ಗೊತ್ತಾಗಲಿ ಎಂದು ಪ್ರಚಾರ ಬಯಸುವ ಸಂದರ್ಭದಲ್ಲಿ ಕಲ್ಯಾಣಸುಂದರಂ ಅಂತಹವರು ತೆರೆಯ ಮರೆಯಲ್ಲೇ ಉಳಿದುಬಿಡುತ್ತಾರೆ. ಅವರಿಗೆ ಯಾವ ಪ್ರಚಾರದ ಹಂಬಲವೂ ಇಲ್ಲ. ಸಮಾಜ ಸೇವೆಯನ್ನು ಅವರು ಕರ್ತವ್ಯ ಎಂದೇ ಭಾವಿಸುತ್ತಾರೆ. ಅಂತಹವರ ಬಗ್ಗೆ ಸಮಾಜವೂ ಗೌರವಿಸುತ್ತದೆ.

ಈ ಹಿಂದೆ ವಿನೋಬಾ ಭಾವೆ ಅವರು ಭೂದಾನ ಚಳವಳಿ ನಡೆಸಿದ್ದು ನಮ್ಮಲ್ಲಿ ಅನೇಕರಿಗೆ ತಿಳಿದಿದೆ. ಅವರು ದೇಶಾದ್ಯಂತ ಸಂಚರಿಸಿ ಶ್ರೀಮಂತ ಜಮೀನುದಾರರು ತಮ್ಮಲ್ಲಿರುವ ಹೆಚ್ಚುವರಿ ಜಮೀನನ್ನು ಬಡವರಿಗೆ ದಾನ ಮಾಡಬೇಕು ಎಂದು ಕರೆ ನೀಡಿದ್ದರು. ಅವರ ಮಾತುಗಳಿಗೆ ಸ್ಪಂದಿಸಿದ ಹಲವೂ ಜಮೀನುದಾರರು ತಮ್ಮಲ್ಲಿನ ನೂರಾರು ಎಕರೆ ಭೂಮಿಯನ್ನು ದಾನ ಮಾಡಿದರು. ಅದನ್ನು ಬಡವರಿಗೆ ಹಂಚಲಾಗುತ್ತಿತ್ತು. ಇದಕ್ಕಾಗಿ ವಿನೋಬಾಭಾವೆ ದೇಶಾದ್ಯಂತ ಪಾದಯಾತ್ರೆ ಮಾಡಿದರು. 1982ರಲ್ಲಿ ಅವರು ತೀವ್ರ ಅನಾರೋಗ್ಯಕ್ಕೆ ತುತ್ತಾದರೂ ಯಾವುದೇ ರೀತಿಯ ಆಹಾರ, ಔಷಧೋಪಚಾರ ಸ್ವೀಕರಿಸದೇ ಒಂದು ವಿಧದಲ್ಲಿ ಇಚ್ಛಾಮರಣಿಯಾದರು. ಅವರ ಈ ಭೂದಾನ ಯಜ್ಞವು ಈ ದೇಶ ಕಂಡ ಅಪರೂಪದ ಅಭಿಯಾನವಾಗಿದೆ. ಅವರು ಈ ಕಾರ್ಯಕ್ಕಾಗಿ ಇಡೀ ದೇಶದಲ್ಲಿ ಪಾದಯಾತ್ರೆ ನಡೆಸಿದ್ದರು. ಒಂದು ಅಂದಾಜಿನ ಪ್ರಕಾರ ಅವರು ಪಾದಯಾತ್ರೆ ಮಾಡಿದ್ದು ಸುಮಾರು ನಲವತ್ತು ಸಾವಿರ ಮೈಲಿ. ಗಳಿಸಿದ್ದು ಲಕ್ಷಾಂತರ ಎಕರೆ ಭೂಮಿ. ಅದಷ್ಟನ್ನೂ ಅಗತ್ಯವಿದ್ದವರಿಗೆ ದಾನವಾಗಿ ನೀಡಿದರು. ಗಾಂಧೀಜಿಯವರನ್ನು ಇಷ್ಟಪಡುತ್ತಿದ್ದ ವಿನೋಬಾಭಾವೆ, ಗಾಂಧಿಜಿಯವರಂತೆಯೇ ತಮ್ಮನ್ನು ದೇಶ ಸೇವೆಗೆ ಸಮರ್ಪಿಸಿಕೊಂಡವರು. ಇವರನ್ನು ಗಾಂಧೀಜಿ 'ಇದೊಂದು ಅಮೂಲ್ಯ ರತ್ನ. ಇವನು ಇಲ್ಲಿಂದ ಏನಾದರೂ ಪಡೆದುಕೊಂಡು ಹೋಗಲು ಬಂದವನಲ್ಲ. ಇಲ್ಲಿಗೇ ಏನಾದರೂ ಕೊಡಲು ಬಂದವನು' ಎಂದು ಹೇಳಿದ್ದರು. ವಿನೋಬಾಭಾವೆ ಅವರು ಹೆಚ್ಚುವರಿ ಭೂಮಿಯನ್ನು ನೀಡಿ ಎಂದು ಕೋರಿದಾಗ, ಜನರು ಮುಕ್ತ ಮನಸ್ಸಿನಿಂದ ಅವರಿಗೆ ಜಮೀನು ಅರ್ಪಿಸಿದ್ದರು. ಇಂತಹ ಮಹಾತ್ಮರೂ ಈ ದೇಶದಲ್ಲಿ ಆಗಿಹೋಗಿದ್ದಾರೆ ಹಾಗೂ ಇಂದಿಗೂ ಇಂತಹವರು ಅಲ್ಲಲ್ಲಿ ಕಂಡುಬರುತ್ತಾರೆ.

ಹಣದ ವ್ಯಾಮೋಹ ಕೊನೆಗೆ ದುಃಖವನ್ನೇ ತರುವುದು, ಆದರೆ ಇಂತಹ ಧೀಮಂತ ಕಾರ್ಯಗಳು ಜನರಲ್ಲಿ ಸಮಾಜದ ಬಗ್ಗೆ ನಂಬಿಕೆ ಹುಟ್ಟಿಸುತ್ತವೆ.

ವರ್ಷದೊಳಗೆ ವಸತಿ ರಹಿತರಿಗೆ 2.23 ಲಕ್ಷ ಮನೆ ನಿರ್ಮಾಣ ಗುರಿ

● ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಘೋಷಣೆ ● ಲಲಿತಾದ್ರಿಪುರ ಮೈದಾನದಲ್ಲಿ ಗುಂಪು ಮನೆ ನಿರ್ಮಾಣಕ್ಕೆ ಶಂಕುಸ್ಥಾಪನೆ

ಮೈಸೂರು, ಮಾ.14(ಎಂಕೆ)– ವಿವಿಧ ವಸತಿ ಯೋಜನೆಗಳಡಿ ಮುಂದಿನ ವರ್ಷದೊಳಗೆ ರಾಜ್ಯದಲ್ಲಿನ ವಸತಿ ರಹಿತರಿಗೆ 2.23 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆ ಎಂದು ವಸತಿ ಸಚಿವ ಬಿ.ಝಡ್. ಜಮೀರ್ ಅಹಮ್ಮದ್ ಖಾನ್ ಹೇಳಿದರು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರ ಮೈದಾನದಲ್ಲಿ ಗುರುವಾರ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಜಿಲ್ಲಾಡಳಿತ ಹಾಗೂ ಮೈಸೂರು ನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಪ್ರಧಾನ ಮಂತ್ರಿ ಅವಾಸ್ ಯೋಜನೆ(ನಗರ)ಯಡಿ ಕೃಷ್ಣರಾಜ ಮತ್ತು ವರುಣ ಕ್ಷೇತ್ರದ ವಸತಿ ರಹಿತ ಫಲಾನುಭವಿಗಳಿಗೆ ಗುಂಪು ಮನೆ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ 1.8 ಲಕ್ಷ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದಿಂದ 53 ಸಾವಿರ ಮನೆಗಳನ್ನು ನಿರ್ಮಿಸಲಾಗುವುದು. ಈಗಾಗಲೇ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ 36 ಸಾವಿರ ಮನೆಗಳನ್ನು ನಿರ್ಮಿಸಿ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. ಲೋಕಸಭಾ ಚುನಾವಣೆ ಬಳಿಕ ಮತ್ತೆ 48 ಸಾವಿರ ಮನೆಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಯ ಅನುಷ್ಠಾನದೊಂದಿಗೆ ಆರನೇಯದಾಗಿ ವಸತಿ ರಹಿತರಿಗೆ ಶಾಶ್ವತ ಸೂರು ಕಲ್ಪಿಸಲಾಗುತ್ತಿದೆ. ಅದಕ್ಕಾಗಿ ಫಲಾನುಭವಿಗಳ ವಂತಿಕೆಯನ್ನು ರಾಜ್ಯ ಸರಕಾರದಿಂದಲ್ಲೇ ಪಾವತಿ ಮಾಡುವ ಧೃಢ ನಿರ್ಧಾರವನ್ನು ಮುಖ್ಯಮಂತ್ರಿಗಳು ಕೈಗೊಂಡಿದ್ದಾರೆ. ಇದರಿಂದ ಫಲಾನುಭವಿಗಳಿಗೆ ಹೊರೆ ಕಡಿಮೆಯಾಗಲಿದೆ ಎಂದು ತಿಳಿಸಿದರಲ್ಲದೆ ಕಳೆದ 10 ವರ್ಷದಲ್ಲಿ ಬಿಜೆಪಿ ಮತ್ತು ಸಮ್ಮಿಶ್ರ ಸರಕಾರದಿಂದ ನಿರಾಶ್ರಿತರಿಗೆ ಒಂದೇ ಒಂದು ನಿವೇಶನವೂ ಹಂಚಿಕೆಯಾಗಲಿಲ್ಲ ಎಂದು ದೂರಿದರು.

ಮುಖ್ಯಮಂತ್ರಿಗಳ ವಿಶೇಷ ಕಾಳಜಿ: ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಹಲವು ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ಕೆ.ಆರ್.ಕ್ಷೇತ್ರದ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ವಿಚಾರವನ್ನು ಮುಖ್ಯಮಂತ್ರಿಗಳು ವಿಶೇಷ ಕಾಳಜಿ ವಹಿಸಿ ಬಗೆಹರಿಸಿದ್ದಾರೆ. ಜೊತೆಗೆ ವರುಣ ಕ್ಷೇತ್ರದ ವಸತಿ ರಹಿತರಿಗೂ ನಿವೇಶನ ನೀಡುತ್ತಿರುವುದು ಸಂತಸದ ವಿಚಾರವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ರಾಜೀವ್ ಗಾಂಧಿ ವಸತಿ ನಿಗಮದ ಎಂಡಿ ಎನ್.ಸುಶೀಲಮ್ಮ, ನಗರ ಪಾಲಿಕೆ ಆಯುಕ್ತೆ ಡಾ.ಎನ್. ಎನ್.ಮಧು ಮತ್ತಿತರರಿದ್ದರು.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿಪುರ ಮೈದಾನದಲ್ಲಿ ಗುಂಪು ಮನೆ ನಿರ್ಮಾಣಕ್ಕೆ ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಗುರುವಾರ ಶಂಕು ಸ್ಥಾಪನೆ ನೆರವೇರಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಮುಡಾ ಅಧ್ಯಕ್ಷ ಕೆ.ಮರೀಗೌಡ ಮತ್ತಿತರರಿದ್ದರು.

1440 ಗುಂಪು ಮನೆ ನಿರ್ಮಾಣ...

ಮೈಸೂರಿನ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಲಲಿತಾದ್ರಿಪುರದ 13.5 ಎಕರೆ ಪ್ರದೇಶದಲ್ಲಿ ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ ಎಸ್–9 ಮಾದರಿಯಲ್ಲಿ 1440 ಮನೆಗಳನ್ನು ನಿರ್ಮಾಣವಾಗಲಿದ್ದು, ಅದರಲ್ಲಿ ಕೃಷ್ಣರಾಜ ಕ್ಷೇತ್ರದ ಫಲಾನುಭವಿಗಳಿಗೆ 940 ಮತ್ತು ವರುಣ ಕ್ಷೇತ್ರದ ಫಲಾನುಭವಿಗಳಿಗೆ 500 ಮನೆಗಳು ಹಂಚಿಕೆಯಾಗಲಿದೆ.

5 ಲಕ್ಷ ರೂ. ಹೆಚ್ಚುವರಿ ಅನುದಾನ...!

ಲಲಿತಾದ್ರಿಪುರದಲ್ಲಿ ರಾಜೀವ್ ಗಾಂಧಿ ವಸತಿ ನಿಗಮದಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ನಿರ್ಮಾಣವಾಗುತ್ತಿರುವ ಮನೆಗಳಿಗೆ ಫಲಾನುಭವಿಗಳ ವಂತಿಕೆಯಲ್ಲಿನ 5 ಲಕ್ಷ ರೂ.ಗಳನ್ನು ರಾಜ್ಯ ಸರಕಾರವೇ ಹೆಚ್ಚುವರಿಯಾಗಿ ನೀಡಲಿದೆ ಎಂದು ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಹೇಳಿದರು.

ಪ್ರತಿ ಮನೆಗೂ 13.44 ಲಕ್ಷ ರೂ. ವೆಚ್ಚವಾಗಲಿದ್ದು, ಕೇಂದ್ರ ಮತ್ತು ರಾಜ್ಯ ಸರಕಾರದಿಂದ 2.7 ಲಕ್ಷ ರೂ.ಗಳಿಂದ 3.5 ಲಕ್ಷ ರೂ. ಅನುದಾನ ಸಿಗಲಿದೆ. ಉಳಿದ 9.94 ಲಕ್ಷ ರೂ.ನಿಂದ 10.74 ಲಕ್ಷ ರೂ.ವರೆಗೆ(ವಿವಿಧ ವರ್ಗದ ಫಲಾನುಭವಿಗಳು) ವಂತಿಕೆ ಹಣವನ್ನು ಫಲಾನುಭವಿಗಳು ಪಾವತಿಸಬೇಕಿದ್ದು, ಅದರಲ್ಲಿ ಪ್ರತಿಯೊಬ್ಬರಿಗೂ ತಲಾ 5 ಲಕ್ಷ ರೂ.ಹೆಚ್ಚುವರಿ ಅನುದಾನವನ್ನು ರಾಜ್ಯ ಸರಕಾರವೇ ಭರಿಸಲಿದೆ. ಅದಕ್ಕಾಗಿ ಸಿಎಂ ಸಿದ್ದರಾಮಯ್ಯ ಅವರು, 8500 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದಾರೆ ಎಂದು ತಿಳಿಸಿದರು.

'ಮೈಂಡ್ ಫೆಸ್ಟ್' ಅಂತರ ಕಾಲೇಜು ರಸ ಪ್ರಶ್ನೆ ಕಾರ್ಯಕ್ರಮ

ಮೈಸೂರು, ಮಾ.14(ಎಂಕೆ)– ಮೈಸೂರು ಬುಕ್ ಕ್ಲಬ್ ವತಿಯಿಂದ ಮಾ.16 ರಂದು 'ಮೈಂಡ್ ಫೆಸ್ಟ್' ಅಂತರ ಕಾಲೇಜು ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆಯಿಂದ ಕಾರ್ಯಕ್ರಮ ನಡೆಯಲಿದ್ದು, ಒಂದು ತಂಡದಲ್ಲಿ 1 ರಿಂದ 3 ಮಂದಿ ಭಾಗವಹಿಸಬಹುದಾಗಿದೆ. ಆಸಕ್ತರು https://shorturl.at/fnrsV ಲಿಂಕ್ ಮೂಲಕ ಹೆಸರು ನೊಂದಾಯಿಸಿ ಕೊಳ್ಳಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ನಂ.9980250114 ಸಂಪರ್ಕಿಸುವಂತೆ ಮೈಸೂರು ಬುಕ್ ಕ್ಲಬ್ ಅಧ್ಯಕ್ಷೆ ಶುಭ ಸಂಜಯ್ ಅರಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ವೈಕುಂಠ ಸಮಾರಾಧನೆಯನ್ನು ದಿನಾಂಕ: 17.03.2024ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ನಂ.26 ಕಂದಾಯನಗರ 3ನೇ ಹಂತ, ಶ್ರೀರಾಂಪುರ, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ

ಶ್ರೀ ಎನ್ ವೆಂಕಟಾಚಲಪ್ಪ ನಿ.,ತಹಸೀಲ್ದಾರ್

ದುಃಖತಪ್ತರು: ಶ್ರೀಮತಿ ನಾಗಮಣಿ ಮತ್ತು ಕುಟುಂಬವರ್ಗ 8147248802

IN THE COURT OF THE ASSISTANCE COMMISSIONER AT MYSURU

R.A No: 14/2023

APPELLANT:

J. Radhakrishna S/o Late Govind Nayar, aged about 59 years R/at Udaya Narayana puram, Pandan Keri Road. Edatho Village, Tottanada Taluk, Albuja District, Kerala State. R/by his G.P.A. Holder Ummar bava Teeky.

V/S

RESPONDENT:

1. Smt. Nagarathna Aged about 48 years
2. Sanjay S/o Padmanabha Aged about 38 Years
3. Sunanda Aged about 36 Years All are R/at 115, New Kumbarakoppalu, Mysuru.
4. Venkatappa, S/o Late Chikkacheluvaiah Aged about 48 Years R/at Form House, Nagunalli Village, Old Kesare, Mysuru.
5. Padmanabha, S/o Venkatappa Aged about 53 Years R/at Form House, Nagunalli Village, Old Kesare, Mysuru.

PUBLIC NOTICE

That the appellant has filed the above appeal against the Respondent U/s 136(2), Karnataka Land Revenue Act. The hearing above case has been fixed 18-03-24 Hence you are hereby called upon to appear before the Court in person or through your Counsel otherwise will be proceed in accordance with law, by placing exparte.

Given under my hand & seal on this
By Order of the Court
Sd/- Tahasildar
A.C. Court, at Mysuru

Place: Mysuru.
Date: 7-3-2024

PUBLIC NOTICE

It is hereby notified that, One Shri. Vishnu murthy Shushrutha hedna S/o Vishnamurthy hedna Chinnappa gowda aged about 50 years Residing at 205, 9th Cross, Near Doctors Corner, 3rd Stage, Gokulam, Mysore-570002 Sanmarga Siddartha Nagar 2nd stage Mysuru and being the absolute owner of the schedule property having purchased the same through a registered sale deed dated 23-10-2020 from Abdul Haleem khan vide registered sale deed bearing NO MYS-1-04784 /2020-21 in cd no MYSD797 of book no 1 has approached HDFC bank seeking for loan as against the schedule property and during the course of vetting of records it is been observed that all the previous records / property connected vendor deeds/ documents which were in a separate file having been lost at Nazarbad Mysuru and the same is not traceable by the said person and in this regard he has also preferred a police complainant before the Nazarbad police station and the entire file comprises of Allotment letter, possession certificate copy of the lease cum sale deed rectification deed and registered title deed and also few revenue documents like khatha and old tax paid receipts. So If Any person/s or family members or any Banks, Financial institutes or others hold/s any rights, title, interest, claim whatsoever & intends to file objection on any legal grounds from purchasing and also getting housing finance from my client banker as against the property towards purchase /housing loan / mortgage of the same and if they have any objections from purchase of the property by my and creation of First Charge over the property by my client bankers over the property, they are hereby notified to submit their objections in written format along with set of self-attested supporting documents to the undersigned within 07 days of this public notification. Failing which my client shall go ahead in purchasing the property and shall also hold right to create appropriate mortgage /charge over the property as per sanction of her bankers and create appropriate mode of Mortgage over the schedule property and thereon any claim placed will not be binding on my client or their bankers right over the Schedule property.

SCHEDULE

All the Piece and parcel of the Vacant Residential Site Property bearing No. 4004/P. Measuring East to West 15.00 Meters and North to South 24.00 Meters in all measuring 360.00 Sq. Meters Situated at Vijayanagara Layout, 4th Stage, 2nd Phase, Devaraja Mohalla, Mysore. Bounded on:

East: Site bearing no 4004/Q, West: Site bearing no 4004/O, North: Site bearing no 4004/K, South: Road

S. SURESH B.B.M LL.,B
ADVOCATE
No, 974, 7th Main, 3rd Stage,
Gokulam, Mysore - 570 002

Place: Mysore
Date: 13.03.2024

ಮೊದಲನೇ ವರ್ಷದ ಪುಣ್ಯಸ್ಮರಣೆ



ಡಿ.ಬಿ. ಮರಿಸ್ವಾಮಿ

ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್, ರೈಲ್ವೆ ಇಲಾಖೆ

ಬೆನ್ನ ಹಿಂದಿನ ಬೆಳಕು
ಕಣ್ಣ ಮುಂದಿನ ಬೆರಗು
ಹರಿದಂತೆ ದಾರಿ ಅರಿತಂತೆ ತೋರುವ
ಅರ್ಥದಾಚೆಯ ಭಾವ 'ಅಪ್ಪ'

ನಿಮ್ಮ ನೆನಪಿನಲ್ಲಿ ಸದಾ – ಪತ್ನಿ, ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2473923/ 2473933 ಫ್ಯಾಕ್ಸ್ ನಂ.0821–2473933,
ಇ–ಮೇಲ್ : mymulengg@gmail.com

ಐ.ಎಫ್.ಟಿ ಸಂಖ್ಯೆ: 32ಇ/ಸಿವಿಲ್/2024 ದಿನಾಂಕ: 14.03.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಹೆಚ್.ಡಿ.ಕೋಟೆ ಐ.ಎಂ.ಸಿ.ಯು ಆವರಣದ ಪಕ್ಕದಲ್ಲಿನ ನಿವೇಶನದ ಸುತ್ತಲೂ ತಂತಿಬೇಲಿ ಅಳವಡಿಸುವ ಕೆಲಸ ಮತ್ತು ಮುಂಭಾಗದಲ್ಲಿ ಮಳೆನೀರು ಚರಂಡಿ ನಿರ್ಮಿಸುವ ಕೆಲಸದ ಸಂಬಂಧ e-procurement ಮೂಲಕ ತಾಂತ್ರಿಕ ಭಾಗ–1 ಮತ್ತು ವಾಣಿಜ್ಯ ಭಾಗ–2 ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ನಿರ್ದಿಷ್ಟ ಅರ್ಹತೆ ಹಾಗೂ ಅನುಭವವನ್ನು ಹೊಂದಿರಬೇಕು ಹಾಗೂ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://kppp.karnataka.gov.in ಮೂಲಕ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಕಾಮಗಾರಿಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	ಐ.ಎಫ್.ಟಿ ಸಂಖ್ಯೆ: 32ಇ/ಸಿವಿಲ್/2024 ದಿನಾಂಕ: 14.03.2024	ಹೆಚ್.ಡಿ.ಕೋಟೆ ಐ.ಎಂ.ಸಿ.ಯು ಆವರಣದ ಪಕ್ಕದಲ್ಲಿನ ನಿವೇಶನದ ಸುತ್ತಲೂ ತಂತಿಬೇಲಿ ಅಳವಡಿಸುವ ಕೆಲಸ ಮತ್ತು ಮುಂಭಾಗದಲ್ಲಿ ಮಳೆನೀರು ಚರಂಡಿ ನಿರ್ಮಿಸುವ ಕೆಲಸ.	ದಿನಾಂಕ: 12.04.2024 ಸಂಜೆ 5.00 ಗಂಟೆಯೊಳಗೆ

ಹೆಚ್ಚಿನ ಮಾಹಿತಿಗಾಗಿ ಸಹಾಯಕ ವ್ಯವಸ್ಥಾಪಕರು(ಇಂಜಿ) (6366430812) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ ರಸ್ತೆ, ಮೈಸೂರು – 570005,
ದೂರವಾಣಿ/ಫ್ಯಾಕ್ಸ್: 0821–2420624

ಸಂಖ್ಯೆ: ಮೈನಪ್ರಾ/ಅಅ/ಪಿಬಿ/ಟಿಎನ್/16/2023–24 ದಿನಾಂಕ: 12.03.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ರೂ.25.00 ರಿಂದ 900.00 ಲಕ್ಷಗಳ ಅಂದಾಜು ಮೊತ್ತದ ಒಟ್ಟು 07 ಸಂಖ್ಯೆ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ 01 ರಿಂದ 07 ರವರೆಗಿನ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 12.03.2024 ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ದಿನಾಂಕ: 20.03.2024 ರ ಸಂಜೆ 4.00 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಬಿಡ್‌ನ್ನು ಕ್ರಮವಾಗಿ ದಿನಾಂಕ: 21.03.2024 ರ ಸಂಜೆ 4.30 ರ ನಂತರ ತೆರೆಯಲಾಗುವುದು. ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರು ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ 0821–2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.mudamysore.gov.in ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

ಟಿಪ್ಪಣಿ: ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೆ ಪರಿಗಣಿಸುವುದು. ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಅಧೀಕ್ಷಕ ಅಭಿಯಂತರರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.



ಲೋಕಸಭೆ ಚುನಾವಣೆಗೂ ಮುನ್ನ ಮೋದಿ ಸರ್ಕಾರದ ಗಿಫ್ಟ್: ಪೆಟ್ರೋಲ್, ಡೀಸೆಲ್ ದರ ಪ್ರತಿ ಲೀಟರ್ ಗೆ 2 ರೂ. ಇಳಿಕೆ!

ನವದೆಹಲಿ, ಮಾ.14– ಲೋಕಸಭೆ ಚುನಾವಣೆಗೂ ಮುನ್ನ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ದರ ಪ್ರತಿ ಲೀಟರ್‌ಗೆ 2 ರೂಪಾಯಿ ಕಡಿತಗೊಳಿಸಿದೆ.



ಈ ಪರಿಷ್ಕೃತ ದರ ನಾಳೆ ಬೆಳಗ್ಗೆ 6 ಗಂಟೆಯಿಂದ ಜಾರಿಗೆ ಬರಲಿದೆ. ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಮತ್ತು ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ) ಬೆಲೆಗಳಲ್ಲಿ ಇತ್ತೀಚಿಗೆ ಕಡಿತ ಮಾಡಲಾಗಿತ್ತು. ಇನ್ನು ಮುಂಬರುವ ಲೋಕಸಭೆ ಚುನಾವಣೆಯ ದೃಷ್ಟಿಯಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಇಳಿಕೆಯಾಗಬಹುದು ಎಂಬ ಊಹಾಪೋಹಗಳು ವ್ಯಾಪಕವಾಗಿತ್ತು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಪ್ರಧಾನಿ ನರೇಂದ್ರ ಮೋದಿ ಅವರು ಅಡುಗೆ ಅನಿಲದ ಬೆಲೆಯಲ್ಲಿ ಪ್ರತಿ ಸಿಲಿಂಡರ್‌ಗೆ 100 ರೂಪಾಯಿ ಕಡಿತಗೊಳಿಸುವುದಾಗಿ ಘೋಷಿಸಿದ್ದರು. ಬೆಲೆ ಇಳಿಕೆಯು, ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು (ಎಲ್‌ಪಿಜಿ) ಅಡುಗೆ ಇಂಧನವಾಗಿ ಬಳಸುವ ಸುಮಾರು 33 ಕೋಟಿ ಕುಟುಂಬಗಳಿಗೆ ಪ್ರಯೋಜನವಾಗಲಿದೆ.

ಸಿದ್ದರಾಮಯ್ಯನವರು ನನ್ನ ಮನೆ ದೇವರು: ಕೆ.ಮರೀಗೌಡ



ಮೈಸೂರು, ಮಾ.14– ಕಾಂಗ್ರೆಸ್ ಪಕ್ಷದ ಹಲವು ಮುಖಂಡರ ವಿರೋಧದ ನಡುವೆಯು ನನ್ನ ಮೇಲೆ ವಿಶ್ವಾಸವಿಟ್ಟು ಮುಡಾ ಅಧ್ಯಕ್ಷನನ್ನಾಗಿ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನನ್ನ ಮನೆ ದೇವರು ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ಹೇಳಿದರು.

ರಾಮಕೃಷ್ಣನಗರದ ಪುನಿತ್ ಕನ್ವೆಂಷನ್ ಹಾಲ್‌ನಲ್ಲಿ ವಾರ್ಡ್ ನಂ. 44, 45, 46 ಹಾಗೂ 58ನೇ ವಾರ್ಡ್‌ನ ಕಾರ್ಯಕರ್ತರು ಮತ್ತು ಮುಖಂಡರು, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬಿ. ರವಿ ನೇತೃತ್ವದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು ನಾನು ಈ ಮಟ್ಟಕ್ಕೆ ಬೆಳೆಯಲು ಕಾರಣರಾದ ಚಾಮುಂಡೇಶ್ವರಿ ಕ್ಷೇತ್ರದ ಜನತೆಗೆ ಮುಡಾ ಅಧ್ಯಕ್ಷ ಸ್ಥಾನವನ್ನು ಸಮರ್ಪಣೆ ಮಾಡುತ್ತೇನೆ.


ಕಳೆದ 10 ವರ್ಷಗಳಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ಶ್ರಮವಹಿಸಿದ ಕಾಂಗ್ರೆಸ್ ಕಾರ್ಯಕರ್ತರೇ ಪಕ್ಷದ ಬೆನ್ನೆಲುಬಾಗಿದ್ದಾರೆ. ಜನರು ನನ್ನ ಮೇಲೆ ದೊಡ್ಡ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಅವರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಾಗದಿದ್ದರೂ ದ್ರೋಹವನ್ನು ಮಾಡುವುದಿಲ್ಲ.

ಹಲವು ಮಹನೀಯರು ಮುಡಾ ಅಧ್ಯಕ್ಷರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಅವರಂತೆ ನಾನು ಸಹ ಬಡವರಿಗೆ, ಕೂಲಿ ಕಾರ್ಮಿಕರಿಗೆ, ನಿರಾಶ್ರಿತರಿಗೆ ಅನುಕೂಲವಾಗುವಂತೆ ಕೆಲಸ ಮಾಡುತ್ತೇನೆ. ಈಗಾಗಲೇ ಗುಂಪು ಮನೆ ಕಟ್ಟಲು 29 ಎಕರೆ ಜಾಗವನ್ನು ಮುಖ್ಯಮಂತ್ರಿಗಳಿಂದ ಮಂಜೂರು ಮಾಡಿಸಿದ್ದೇನೆ. ಹದಗೆಟ್ಟು ಹೋಗಿರುವ ಮುಡಾ ಆಡಳಿತ ವ್ಯವಸ್ಥೆಯನ್ನು ಬದಲಾವಣೆ ಮಾಡಿ, ಎಷ್ಟೇ ಕಷ್ಟ ಬಂದರೂ ಮುಡಾ ಆಸ್ತಿಯನ್ನು ರಕ್ಷಣೆ ಮಾಡುತ್ತೇನೆ. ಮೈಸೂರು ತಾಲೂಕಿನ ಗ್ರಾಮಗಳ ಅಭಿವೃದ್ಧಿಗೆ ಶ್ರಮವಹಿಸುತ್ತೇನೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಪಕ್ಷವನ್ನು ಕಟ್ಟೋಣ, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಎಲ್ಲರೂ ಬೆಂಬಲಿಸಬೇಕು. ಗ್ಯಾರಂಟಿ ಯೋಜನೆಗಳನ್ನು ಮನೆ ಮನೆಗೆ ತಲುಪಿಸಬೇಕು. ಶುಕ್ರವಾರ ನಡೆಯುವ ಗ್ಯಾರಂಟಿ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಬರಬೇಕು ಎಂದರು.

ಸಭೆಯಲ್ಲಿ ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಜಿ.ಕೆ. ಬಸವಣ್ಣ, ಹರೀಶ್ ಮೊಗ್ಣ್ಣ, ಮಹಾ ದೇವ್, ಮಲ್ಲೇಶ್, ಕೃಷ್ಣಪ್ಪ, ಬಿಎಸ್ ಎನ್‌ಎಲ್ ಮಾದೇಗೌಡ, ಬಿ.ರವಿ, ಬಸವೇ ಗೌಡ, ವಿಶ್ವಾಸು, ಸ್ವಾಮಿ, ಪ್ರಕಾಶ್, ಸುಶೀಲ ನಂಜಪ್ಪ, ಕೃಷ್ಣಮೂರ್ತಿ, ರಾಜೇಗೌಡ ಹಾಜರಿದ್ದರು.

ಲೋಕಸಭಾ ಚುನಾವಣಾ ಕಣಕ್ಕಿಳಿಸಲು ಕಾಂಗ್ರೆಸ್‌ಗೆ ಅಭ್ಯರ್ಥಿಗಳೇ ಸಿಗುತ್ತಿಲ್ಲ

● ಮಾಜಿ ಸಿಎಂ, ಹಾವೇರಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ವ್ಯಂಗ್ಯ ● ಬಿಜೆಪಿಯ ಬಂಡಾಯರು ನನ್ನ ಸಂಪರ್ಕದಲ್ಲಿದ್ದಾರೆಂಬ ಡಿಕೆಶಿ ಹೇಳಿಕೆಗೆ ತಿರುಗೇಟು: ಇದು ಹಳೇ ಚಾಳಿ



ಬೆಂಗಳೂರು, ಮಾ.14(ಕೆಎಂಶಿ)– ಸೋಲುವ ಭೀತಿಯಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಸಚಿವರೂ ಹಿಂದೇಟು ಹಾಕುತ್ತಿದ್ದು, ಕಾಂಗ್ರೆಸ್‌ಗೆ ಅಭ್ಯರ್ಥಿಗಳೇ ಸಿಗುತ್ತಿಲ್ಲ ಎಂದು ಹಾವೇರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, ಬಿಜೆಪಿಯಲ್ಲಿ ಟಿಕೆಟ್ ಸಿಗದ ಸಂಸದರು ನಮ್ಮ ಸಂಪರ್ಕದಲ್ಲಿದ್ದಾರೆ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿಕೆ ಹಳೇ ಚಾಳಿಯಾಗಿದೆ. ಆ ಪಕ್ಷಕ್ಕೆ ಅಭ್ಯರ್ಥಿಗಳೇ ಸಿಗುತ್ತಿಲ್ಲ ಎಂದರು.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷದ ವರಿಷ್ಠರು ನಿನ್ನೆ ತಮ್ಮ ಹೆಸರನ್ನು ಪ್ರಕಟಿಸಿದ್ದಾರೆ. ತಮಗೆ ಸದಾ ರಾಜಕೀಯ ಆಶೀರ್ವಾದ ಮಾಡಿ ಹರಸಿದ ಯಡಿಯೂರಪ್ಪ ಅವರು ತಮ್ಮ ಪರ ಪ್ರಚಾರಕ್ಕೂ ಬರುವುದಾಗಿ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿರುವ ಡಾ.ಸಿ.ಎನ್.ಮಂಜುನಾಥ್, ಲಕ್ಷಾಂತರ ಜನರ ಆರೋಗ್ಯ ಕಾಪಾಡಿದ್ದಾರೆ. ಉತ್ತಮ ಕೆಲಸ ಮಾಡುವವರನ್ನು ಪಕ್ಷ ಪುರಸ್ಕರಿಸುತ್ತದೆ ಎಂಬುದಕ್ಕೆ ಇದು ಉದಾಹರಣೆಯಾಗಿದೆ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ್ ಒಡೆಯರ್ ಅವರಿಗೆ ಟಿಕೆಟ್ ನೀಡಿರುವುದು ದಕ್ಷಿಣ ಕರ್ನಾಟಕಕ್ಕೆ ಒಳ್ಳೆ ಸಂದೇಶ ನೀಡಿದಂತಾಗಿದೆ. ದಕ್ಷಿಣ ಭಾರತದಲ್ಲಿನ ಅಭಿವೃದ್ಧಿಗೆ ಒಡೆಯರ್ ರಾಜಮನೆತನ ಕಾರಣ, ಅವರು ಹಿಂದುಳಿದ ವರ್ಗದವರ ಅಭಿವೃದ್ಧಿ ಮಾಡಿದ್ದಾರೆ ಎಂದರು.

ಶ್ರೀಲಂಕಾ ತಮಿಳರ ಹೊರಗಿಟ್ಟು ಸಿಎಎ ಜಾರಿಗೆ ರಾಜ್ಯ ಸರ್ಕಾರ ವಿರೋಧ

● ಸಂಪುಟ ಸಭೆಯಲ್ಲಿ ಈ ಸಂಬಂಧ ಚರ್ಚೆ ● ವಿಧಾನಸೌಧದ ಮುಂದೆ ಭುವನೇಶ್ವರಿ ಪುತ್ಥಳಿ ಸ್ಥಾಪನೆ ● ಕೃಷಿಯಲ್ಲಿ ಅತ್ಯಾಧುನಿಕ ಯಂತ್ರ ಬಳಕೆ





ಬೆಂಗಳೂರು, ಮಾ.14(ಕೆಎಂಶಿ)– ಶ್ರೀಲಂಕಾ ತಮಿಳರನ್ನು ಹೊರಗಿಟ್ಟು ಪೌರತ್ವ ತಿದ್ದುಪಡಿ ಕಾಯಿದೆ (ಸಿಎಎ) ಜಾರಿಗೆ ರಾಜ್ಯ ಸರ್ಕಾರ ವಿರೋಧ ವ್ಯಕ್ತಪಡಿಸಿದೆ.

ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, ಸಿಎಎ ಹಾಗೂ ಜಾತಿ ಗಣತಿ ಬಗ್ಗೆ ಇಂದಿನ ಸಭೆಯಲ್ಲಿ ಯಾವುದೇ ಚರ್ಚೆ ಆಗಿಲ್ಲ, ಆದರೆ ನಮ್ಮ ಅಭಿಪ್ರಾಯ ಶ್ರೀಲಂಕಾ ತಮಿಳರನ್ನು ಹೊರಗಿಟ್ಟಿರುವುದು ಏಕೆ ಎಂದು ಪ್ರಶ್ನಿಸಿದರು.

ಎಲ್‌ಟಿಟಿಇಯನ್ನು ನೀವು ಏನು ಬೇಕಾದರೂ ಮಾಡಿ, ತಪ್ಪು ಮಾಡಿದ್ದರೆ ಒದ್ದು ಒಳಗೆ ಹಾಕಿ. ಆದರೆ, ಕರ್ನಾಟಕ, ತಮಿಳುನಾಡಿನಲ್ಲಿ ಶ್ರೀಲಂಕಾ ತಮಿಳರಿದ್ದು ಅವರಿಗೆ ಏಕೆ ರಕ್ಷಣೆ ಕೊಡುತ್ತಿಲ್ಲ ಎಂದರು.

ಶ್ರೀಲಂಕಾ ಬಿಟ್ಟು ಅವರು ಭಾರತಕ್ಕೆ ಬಂದಿದ್ದಾರೆ, ಅವರಿಗೆ ರಕ್ಷಣೆ ಕೊಡಬೇಕಾದುದು ನಮ್ಮ ಕರ್ತವ್ಯ. ಎಲ್‌ಟಿಟಿಇ ಮತ್ತು ಶ್ರೀಲಂಕಾ ನಡುವಿನ ಘರ್ಷಣೆಯಿಂದ ಅನೇಕರು ಬಲಿಯಾಗಿದ್ದಾರೆ.

ಜಾಗ ಕಳೆದುಕೊಂಡು ಭಾರತಕ್ಕೆ ಬಂದಿದ್ದಾರೆ. ಅವರನ್ನು ಏಕೆ ಸಿಎಎ ಅಡಿ ತಂದಿಲ್ಲ ಎಂದು ಕೇಂದ್ರವನ್ನು ಪ್ರಶ್ನಿಸಿದರು.

ವಿಧಾನಸೌಧದ ಮುಂದೆ ಭುವನೇಶ್ವರಿ: ಕರ್ನಾಟಕ ಏಕೀಕರಣವಾಗಿ 50 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಭುವನೇಶ್ವರಿ ತಾಯಿ ಪುತ್ಥಳಿ ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲು ತೀರ್ಮಾನ ಕೈಗೊಳ್ಳಲಾಗಿದೆ. ಭಾಷೆ, ಸಂಸ್ಕೃತಿ, ಇತಿಹಾಸದ ಭಾವನೆಗಳ ಪ್ರತೀಕ ಈ ಪುತ್ಥಳಿಯಾಗಿರುತ್ತದೆ, ಇದನ್ನು 23 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ. ಕೃಷಿ ಉತ್ಪನ್ನಗಳ ಹೆಚ್ಚಳ ಹಾಗೂ ರೈತರಿಗೆ ಲಾಭ ತರುವ ಉದ್ದೇಶದಿಂದ 67 ಕೋಟಿ ರೂ. ವೆಚ್ಚದಲ್ಲಿ ಅಗ್ರಿ ಇನ್ನೋವೇಶನ್ ಕೇಂದ್ರ ಸ್ಥಾಪನೆಗೆ ಸಭೆ ಒಪ್ಪಿಗೆ ನೀಡಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೃಷಿಯಲ್ಲಿ ಅತ್ಯಾಧುನಿಕಯಂತ್ರ ಬಳಕೆ: ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಮಾದರಿಯಲ್ಲೇ ಕೃಷಿ ಉದ್ದಿಮೆಯಲ್ಲೂ ಅತ್ಯಾಧುನಿಕ ಯಂತ್ರ ಗಳನ್ನು ಬಳಸಲು ಉತ್ತೇಜಿಸುವ ಉದ್ದೇಶ ಇದಾಗಿದೆ. ಈ ಯಂತ್ರಗಳ ತಯಾರಿಕೆಗೆ ನವೋದ್ಯಮ ಸ್ಥಾಪಿಸಲಾಗುವುದು, ಅದರ ಮೂಲಕ ಹೊಸ ಹೊಸ ಪರಿಕರಗಳನ್ನು ತಯಾರಿಸಿ ಕಡಿಮೆ ದರದಲ್ಲಿ ರೈತರಿಗೆ ನೀಡುವುದರಿಂದ ಕೃಷಿ ಉತ್ಪಾದನೆಗೆ ಸಹಕಾರಿಯಾಗಲಿದೆ. ಪಿಎಸ್‌ಐ ನೇಮಕಾತಿ ಹಗರಣವನ್ನು ಎಸ್‌ಐಟಿ ತನಿಖೆಗೆ ವಹಿಸಲು ಸಂಪುಟ ಸಮ್ಮತಿಸಿದೆ. ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ಸಮಿತಿ ನೀಡಿರುವ ಶಿಫಾರಸ್ಸಿನಂತೆ, ಹಿಂದಿನ ತನಿಖೆಯಲ್ಲಿ ಕೆಲವು ತಪ್ಪುಗಳಾಗಿದ್ದು, ಕೆಲವರಿಗೆ ಸಮನ್ಸ್ ನೀಡಿದರೂ ಹಾಜರಾಗಿಲ್ಲ. ಈ ಎಲ್ಲಾ ವಿಷಯ ಸೇರಿದಂತೆ ತನಿಖೆ ನಡೆಸುವಂತೆ ಶಿಫಾರಸು ನೀಡಿರುವ ಹಿನ್ನೆಲೆಯಲ್ಲಿ ಎಸ್‌ಐಟಿ ತನಿಖೆಗೆ ನೀಡುವ ತೀರ್ಮಾನಕ್ಕೆ ಬರಲಾಗಿದೆ ಎಂದರು. ಬೆಂಗಳೂರು ವಾಹನ ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ಮೆಟ್ರೊ ಮೂರನೇ ಹಂತದ ನಿರ್ಮಾಣವನ್ನು 15,611 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಸಭೆ ತೀರ್ಮಾನಿಸಿದೆ.

ಹೆಬ್ಬಾಳದಿಂದ ಜೆ.ಪಿ.ನಗರದವರೆಗೆ 32.15 ಕಿಲೋ ಮೀಟರ್ ಉದ್ದದ ಮೆಟ್ರೊ ನಿರ್ಮಾಣ ತುಮಕೂರು–ಮೈಸೂರು ರಸ್ತೆ ಸಂಪರ್ಕಿಸುವುದಲ್ಲದೆ, ಮುಂದೆ ಬನ್ನೇರುಘಟ್ಟ ರಸ್ತೆಯನ್ನು ಕೂಡುತ್ತದೆ. ಈ ಯೋಜನೆ 2028ಕ್ಕೆ ಪೂರ್ಣಗೊಳಿಸುವುದಾಗಿ ಸಂಪುಟಕ್ಕೆ ಬಿಎಂಆರ್‌ಸಿಎಲ್ ಮಾಹಿತಿ ನೀಡಿದೆ ಎಂದರು. ಎನ್‌ಜಿಇಎಫ್‌ನ 60.65 ಎಕರೆಯಲ್ಲಿ ಟ್ರೀ–ಪಾರ್ಕ್ ಅನ್ನು 11 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು. ಮೈಸೂರು ಮಹಾರಾಣಿ ಕಾಲೇಜಿನಲ್ಲಿ 132 ಕೋಟಿ ರೂ. ವೆಚ್ಚದಲ್ಲಿ ಹಾಸ್ಟೆಲ್ ನಿರ್ಮಾಣಕ್ಕೆ ಸಂಪುಟ ಒಪ್ಪಿಗೆ ನೀಡಿದೆ ಎಂದರು.

ಮೈಸೂರಿನಲ್ಲಿ ದಕ್ಷಿಣ ಪಾಕ್, ಕಾಂಟಿನೆಂಟಲ್ ಹೋಟೆಲ್ ಉದ್ಘಾಟನೆ



ಮೈಸೂರು, ಮಾ.14(ಆರ್‌ಕೆ)– ಮೈಸೂರು ನಜರ್‌ಬಾದ್‌ನ ಮಿನಿ ವಿಧಾನ ಸೌಧದ ಬಳಿ ಆರಂಭವಾದ ದಕ್ಷಿಣ ಪಾಕ್ ಸಸ್ಯಾಹಾರಿ ಮತ್ತು ಕಾಂಟಿನೆಂಟಲ್ ಇನ್ ಅಂಡ್ ಸೂಟ್ಸ್ ಹೋಟೆಲ್ ಅನ್ನು ಶಾಸಕ ತನ್ವೀರ್ ಸೇಠ್ ಅವರು ಟೇಪು ಕತ್ತರಿಸುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಸಾಂಸ್ಕೃತಿಕ ನಗರಿ ಮೈಸೂರು ಆತಿಥ್ಯಕ್ಕೆ ಹೆಸರುವಾಸಿಯಾಗಿದ್ದು, ದೇಶ–ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಊಟ–ತಿಂಡಿ, ವಸತಿ ಕಲ್ಪಿಸುತ್ತಿರುವ ಹೋಟೆಲ್ ಮಾಲೀಕರು, ಅವರ ಸುರಕ್ಷತೆಗೂ ಆದ್ಯತೆ ನೀಡಿ ಇಲ್ಲಿನ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ಮೈಸೂರಿನ ಹೃದಯ ಭಾಗದಲ್ಲಿ ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಆತಿಥ್ಯ ನೀಡಲು ಸುಸಜ್ಜಿತ ಹೋಟೆಲ್ ಆರಂಭಿಸಿರುವ ಸಿ.ನಾರಾಯಣಗೌಡ, ಕೆ.ಆರ್.ಸತ್ಯನಾರಾಯಣ, ಚಿಕ್ಕಕೆಂಪೇಗೌಡರ ಪ್ರಯತ್ನ ಸಫಲವಾಗಲಿ, ಜನರಿಗೆ ಶುಚಿ–ರುಚಿಯಾದ ತಿಂಡಿ–ಊಟ ಸಿಗುವಂತಾಗಲಿ ಎಂದು ಶಾಸಕ ತನ್ವೀರ್ ಸೇಠ್ ಶುಭ ಕೋರಿದರು.

ಶಾಸಕ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಸಂದೇಶ್ ನಾಗರಾಜ್, ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ದತ್ತಿ ಅಧ್ಯಕ್ಷ ರವಿಶಾಸ್ತ್ರಿ, ರಾಜ್ಯ ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳು ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.


5, 8, 9ನೇ ತರಗತಿ ಬೋರ್ಡ್ ಪರೀಕ್ಷೆ ಬಗ್ಗೆ ಮುಖ್ಯ ಮಾಹಿತಿ: ವಿಸ್ತೃತ ಪೀಠಕ್ಕೆ ಕೇಸ್ ವರ್ಗಾಯಿಸಲು ಹೈಕೋರ್ಟ್ ನಕಾರ: ನಾಳೆ ವಿಚಾರಣೆ

ಬೆಂಗಳೂರು, ಮಾ.14– 5, 8, 9ನೇ ತರಗತಿಗಳ ಬೋರ್ಡ್ ಪರೀಕ್ಷೆ ವಿಚಾರಣೆಯನ್ನು ವಿಸ್ತೃತ ಪೀಠಕ್ಕೆ ವರ್ಗಾವಣೆ ಮಾಡಲು ಪ್ರತಿವಾದಿಗಳು ಮನವಿ ಸಲ್ಲಿಸಿದ್ದಾರೆ.

ಖಾಸಗಿ ಶಾಲೆಗಳ ಸಂಘದಿಂದ ಹೈಕೋರ್ಟ್‌ಗೆ ಮನವಿ ಸಲ್ಲಿಸಲಾಗಿದೆ. ಸುಪ್ರೀಂ ಕೋರ್ಟ್ ಮೇಲ್ಮನವಿ ವಿಚಾರಣೆ ಪೂರ್ಣಗೊಳಿಸಲು ಸೂಚನೆ ನೀಡಿದೆ. ವಿಸ್ತೃತ ಪೀಠಕ್ಕೆ ಕೇಸ್ ವರ್ಗಾಯಿಸಲು ಹೈಕೋರ್ಟ್ ನಿರಾಕರಿಸಿದೆ.

ಬೋರ್ಡ್ ಪರೀಕ್ಷೆಗೆ ಅನುಮತಿ ಕೋರಿ ಪೋಷಕರಿಂದಲೂ ಅರ್ಜಿ ಸಲ್ಲಿಕೆಯಾಗಿದೆ. ಏಕಸದಸ್ಯ ಪೀಠ ಶಾಲೆಗಳ ಬೋರ್ಡ್ ಪರೀಕ್ಷೆಯನ್ನು ರದ್ದುಪಡಿಸಿತ್ತು ಏಕಸದಸ್ಯ ಪೀಠದ ಆದೇಶಕ್ಕೆ ವಿಭಾಗೀಯ ಪೀಠ ತಡೆ ನೀಡಿತ್ತು.

ವಿಭಾಗೀಯ ಪೀಠದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿತ್ತು ಮೇಲ್ಮನವಿ ವಿಚಾರಣೆ ಪೂರ್ಣಗೊಳಿಸಲು ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು ಮೇಲ್ಮನವಿ ವಿಚಾರಣೆಯನ್ನು ಹೈಕೋರ್ಟ್ ನಾಳೆಗೆ ಮುಂದೂಡಿದೆ.



ಮೈಸೂರಿನ ಜಯನಗರದಲ್ಲಿರುವ ತಮ್ಮ ನಿವಾಸಕ್ಕೆ ಗುರುವಾರ ಭೇಟಿ ನೀಡಿದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾಜಿ ಎಂಎಲ್‌ಸಿ ಸಿದ್ದರಾಜು, ಮಾಜಿ ಮೇಯರ್ ಸಂದೇಶಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಯು.ಸುಬ್ಬಯ್ಯ, ಬಿಜೆಪಿ ಮುಖಂಡರಾದ ಬಿ.ಪಿ.ಮಂಜುನಾಥ್, ಕೇಬಲ್ ಮಹೇಶ್ ಮತ್ತಿತರರು ಹಾಜರಿದ್ದರು.

ಸಿದ್ಧಾರ್ಥನಗರ ಸಂಚಾರ ಪೊಲೀಸರಿಂದ ಮರ, ಕಂಬಗಳಿಗೆ ರಿಫ್ಲೆಕ್ಟರ್ ಅಳವಡಿಕೆ



ಮೈಸೂರು,ಮಾ.14(ಆರ್‌ಕೆ)–ರಾತ್ರಿ ವೇಳೆ ಸುಗಮ ಸಂಚಾರಕ್ಕೆ ಅನುಕೂಲವಾಗುವಂತೆ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ರಸ್ತೆಬದಿ ಮರಗಳು, ವಿದ್ಯುತ್ ಕಂಬಗಳಿಗೆ ರಿಫ್ಲೆಕ್ಟರ್‌ಗಳನ್ನು ಅಳವಡಿಸಿದರು. ಠಾಣಾ ವ್ಯಾಪ್ತಿಯ ರಸ್ತೆ, ಜಂಕ್ಷನ್‌ಗಳಲ್ಲಿನ ರಸ್ತೆ ವಿಭಜಕಗಳು ಸರಿಯಾಗಿ ಕಾಣದ ಹಿನ್ನೆಲೆಯಲ್ಲಿ ಕಾರು, ದ್ವಿಚಕ್ರ ವಾಹನಗಳು ಮೀಡಿಯನ್‌ಗೆ ಡಿಕ್ಕಿ ಹೊಡೆಯುತ್ತಿದ್ದವು. ಅದೇ ರೀತಿ ರಸ್ತೆಬದಿ ಮರಗಳು, ರಸ್ತೆಬದಿ ಲೈಟ್ ಕಂಬಗಳಿಗೂ ವಾಹನಗಳು ಅಪ್ಪಳಿಸಿದ್ದ ಪ್ರಕರಣಗಳು ವರದಿಯಾಗಿದ್ದವು. ಈ ಹಿನ್ನೆಲೆಯಲ್ಲಿ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಸಲಹೆಯಂತೆ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಮರಗಳು ಮತ್ತು ಮೀಡಿಯನ್‌ಗಳಿಗೆ ರಿಫ್ಲೆಕ್ಟರ್ ಉಪಕರಣ, ರಿಫ್ಲೆಕ್ಟರ್ ಟೇಪ್ ಅಂಟಿಸಿದ್ದಾರೆ. ಅಗತ್ಯವಿರುವೆಡೆ ಸಂಚಾರ ನಿಯಮ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಅದರಿಂದಾಗಿ ರಾತ್ರಿ ವೇಳೆ ಮರ, ಕಂಬ ಮೀಡಿಯನ್‌ಗಳಿರುವುದು ವಾಹನ ಚಾಲಕರಿಗೆ ಗೋಚರವಾಗಿ ಅಪಘಾತಗಳು ತಪ್ಪುತ್ತವೆ ಎಂದು ಸಂಚಾರ ಎಸಿಪಿ ಪರಶುರಾಮಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ತಮ್ಮ ನಿವಾಸಕ್ಕೆ ಗುರುವಾರ ಭೇಟಿ ನೀಡಿದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಮಾಜಿ ಸಚಿವ ಎಸ್.ಎ.ರಾಮದಾಸ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಮುಖಂಡ ವಡಿವೇಲು ಮತ್ತಿತರರು ಹಾಜರಿದ್ದರು.

ಬೆಂಗಳೂರಲ್ಲಿ ಹಾಡಹಗಲೇ ಚಿನ್ನಾಭರಣ ಅಂಗಡಿಗೆ ಗುಂಡಿನ ದಾಳಿ; ಇಬ್ಬರಿಗೆ ಗಂಭೀರ ಗಾಯ

ಬೆಂಗಳೂರು, ಮಾ.14– ರಾಜಧಾನಿ ಬೆಂಗಳೂರಿನಲ್ಲಿ ಮತ್ತೆ ಗುಂಡಿನ ಸದ್ದು ಮೊಳಗಿದ್ದು ಹಾಡಹಗಲೇ ದುಷ್ಕರ್ಮಿಗಳು ಚಿನ್ನಾಭರಣ ಅಂಗಡಿ ಮೇಲೆ ದಾಳಿ ಮಾಡಿದ್ದಾರೆ.

ಬೆಂಗಳೂರಿನ ಕೊಡಿಗೆಹಳ್ಳಿ ಬಳಿಯ ದೇವಿನಗರದಲ್ಲಿರುವ ಲಕ್ಷ್ಮೀ ಜುವೆಲ್ಲರ್ಸ್‌ನಲ್ಲಿ ಗುರುವಾರ ಈ ಘಟನೆ ನಡೆದಿದ್ದು, ಅಂಗಡಿಗೆ ನುಗ್ಗಿದ ಇಬ್ಬರು ದುಷ್ಕರ್ಮಿಗಳು ಹಣ ಕೊಡಲು ಒಪ್ಪದ ಮಾಲೀಕನ ಮೇಲೆ ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ಘಟನೆಯಲ್ಲಿ ಇಬ್ಬರಿಗೆ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಪೊಲೀಸ್ ಮೂಲಗಳ ಪ್ರಕಾರ ಅಂದಾ ರಾಮ್ ಹಾಗು ಅಪುರಾಮ್‌ಗೆ ಸೇರಿದ ಲಕ್ಷ್ಮೀ ಜುವೆಲ್ಲರಿಗೆ ಇಂದು ಇಬ್ಬರು ದರೋಡೆಕೋರರು ನುಗ್ಗಿದ್ದರು. ಬೈಕ್‌ನಲ್ಲಿ ಬಂದಿದ್ದ ಅವರು, ಬೈಕ್ ನಿಲ್ಲಿಸಿ ನೇರವಾಗಿ ಅಂಗಡಿಗೆ ನುಗ್ಗಿದ್ದಾರೆ. ಅಂಗಡಿ ಮಾಲೀಕರ ಬಳಿ ತಮಗೆ ಹಣ ನೀಡುವಂತೆ ಕೇಳಿದ್ದಾರೆ. ಈ ವೇಳೆ ಹಣ ನೀಡಲು ನಿರಾಕರಿಸಿದಾಗ ಪಿಸ್ತೂಲು ತೋರಿಸಿ ಹೆದರಿಸಿದ್ದಾರೆ. ಆಗಲೂ ಮಾಲೀಕರು ಹಣ ಕೊಡಲು ಒಪ್ಪದೆ ಇದ್ದಾಗ ಹಲ್ಲೆ ನಡೆಸಿದ್ದಲ್ಲದೆ ಗುಂಡು ಹಾರಿಸಿದ್ದಾರೆ.

ಗುಂಡಿನ ಸದ್ದು ಕೇಳುತ್ತಿದ್ದಂತೆಯೇ ಸುತ್ತಲಿದ್ದ ಜನರು ಓಡಿ ಬಂದಿದ್ದಾರೆ. ಆಗ ಈ ದರೋಡೆಕೋರರು ದ್ವಿಚಕ್ರ ವಾಹನದಲ್ಲಿ ಪರಾರಿಯಾಗಿದ್ದಾರೆ. ಗುಂಡಿನ ದಾಳಿ ನಡೆಸಿ ಪರಾರಿಯಾಗುವ ಭರದಲ್ಲಿ ಪಿಸ್ತೂಲನ್ನು ಅಲ್ಲೇ ಬಿಟ್ಟು ಓಡಿ ಹೋಗಿದ್ದಾರೆ. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಕೊಡಿಗೆಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಜುವೆಲ್ಲರಿಯ ಮತ್ತು ಅಕ್ಕಪಕ್ಕದ ಅಂಗಡಿಗಳ ಸಿಸಿಟಿವಿ ಪರಿಶೀಲಿಸಿ, ಮಾಹಿತಿ ಕಲೆಹಾಕಿದ್ದಾರೆ

ಅಂಬೇಡ್ಕರ್ ಕೊಟ್ಟ ಸಂವಿಧಾನದಿಂದ ಶೋಷಿತ, ಹಿಂದುಳಿದ ವರ್ಗದವರಿಗೆ ಶಿಕ್ಷಣದ ಅವಕಾಶ

ತಾಂತ್ರಿಕ ಶಿಕ್ಷಣ ಇಲಾಖೆ ಪ್ರಭಾರ ನಿರ್ದೇಶಕ ಕೆ.ಎಂ.ಸುರೇಶ್‌ಕುಮಾರ್ ಅಭಿಮತ

ಮೈಸೂರು,ಮಾ.14(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ದೊರಕಿಸಿಕೊಟ್ಟ ಅವಕಾಶದಿಂದಾಗಿ ಇಂದು ಶೋಷಿತ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯುವ ಅವಕಾಶ ಒದಗಿದೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಭಾರ ನಿರ್ದೇಶಕ ಕೆ.ಎಂ.ಸುರೇಶ್‌ಕುಮಾರ್ ತಿಳಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ ಡಾ.ಅಂಬೇಡ್ಕರ್ ಜಯಂತಿ ಹಾಗೂ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಆಧುನಿಕ ಭಾರತದ ಶಿಲ್ಪಿಯಾಗಿ ದೇಶದ ಜನರ ಒಳಿತನ್ನು ಬಯಸಿದ್ದಾರೆ. ಸಂವಿಧಾನದಲ್ಲಿ ದೇಶದ ಪ್ರಜೆಗಳಿಗೆ ಸಾಮಾಜಿಕ ನ್ಯಾಯ, ಸಮಾನತೆ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ನೀಡಿ ಜನರು ನೆಮ್ಮದಿಯಾಗಿರುವಂತೆ ಮಾಡಿದ್ದಾರೆ. ಸಂವಿಧಾನದ ಆಶಯದಂತೆ ಇಂದು ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಪೂರಕವಾದ ವಾತಾವರಣ ನಿರ್ಮಿಸಲಾಗಿದೆ. ಸರ್ಕಾರ ಹಾಸ್ಟೆಲ್ ಸೇರಿದಂತೆ ಅಗತ್ಯ ಸೌಲಭ್ಯ ಒದಗಿಸಿದೆ. ಆದ್ದರಿಂದ ವಿದ್ಯಾರ್ಥಿಗಳು ಚೆನ್ನಾಗಿ ಓದಬೇಕು. ಅಂಬೇಡ್ಕರ್‌ರವರು ಚೆನ್ನಾಗಿ ಓದಿದ್ದರಿಂದಲೇ 21ನೇ ಶತಮಾನದಲ್ಲಿ ಜ್ಞಾನದ ಸಂಕೇತವಾಗಿ ವಿಶ್ವ ಜ್ಞಾನಿ ಎಂದು ವಿಶ್ವಸಂಸ್ಥೆ ಘೋಷಣೆ ಮಾಡಿದೆ ಎಂದರು.



ಮೈಸೂರಿನ ನಜರ್‌ಬಾದ್‌ನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ತಾಂತ್ರಿಕ ಶಿಕ್ಷಣ ಇಲಾಖೆ ಪ್ರಭಾರ ನಿರ್ದೇಶಕ ಕೆ.ಎಂ.ಸುರೇಶ್‌ಕುಮಾರ್ ಅವರು ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಸಂವಿಧಾನದ ಮಹತ್ವವನ್ನು ತಿಳಿಸಿಕೊಟ್ಟಿದೆ. ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ವನ್ನು ಪಡೆಯುವುದರೊಂದಿಗೆ ಗುಣಾತ್ಮಕವಾದ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಜಪ ಮಾಡಿದರೆ ಪ್ರಗತಿ ಸಾಧಿಸಲು ಸಾಧ್ಯವಿಲ್ಲ. ಗುರಿ ಇಟ್ಟು ಕೊಂಡು ಶ್ರಮದಿಂದ ಸಾಧನೆ ಮಾಡಬೇಕು. ಗ್ರಾಮೀಣ ಭಾಗದಿಂದ ಬಂದಿರುವ ಹಾಸ್ಟೆಲ್ ವಿದ್ಯಾರ್ಥಿಗಳು ಕೀಳರಿಮೆಯಿಂದ ಹೊರಬಂದು, ನಗರ ಪ್ರದೇಶದ ಮಕ್ಕಳಿಗೆ ಸರಿಸಮಾನರಾಗಿ ಸಾಧನೆ ಮಾಡಬೇಕು. ಆ ಶಕ್ತಿ ಗ್ರಾಮೀಣ ಮಕ್ಕಳಲ್ಲಿದೆ. ಸಮಯ ವ್ಯರ್ಥ ಮಾಡದೆ ಅಧ್ಯಯನ ಮಾಡಬೇಕು. ಸಂವಿಧಾನ ನಮಗೆ ಎಲ್ಲವನ್ನು ಕೊಟ್ಟಿದೆ. ಆದರೆ ನಾವು ದೇಶಕ್ಕೆ ಏನು ಕೊಟ್ಟಿದ್ದೇವೆ ಎಂದು ಚಿಂತನೆ ಮಾಡಿ, ಚೆನ್ನಾಗಿ ಓದಿ ರಾಷ್ಟ್ರಕ್ಕೆ ಉತ್ತಮ ಪ್ರಜೆಗಳಾಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಸಿದ್ದಲಿಂಗು, ಸರ್ಕಾರಿ ವಿಭಜಿತ ಮಹಾರಾಜ ಪದವಿ ಪೂರ್ವ ಕಾಲೇಜಿನ ಉಪಪ್ರಾಂಶುಪಾಲ ರಮೇಶ್, ನಿಲಯಪಾಲಕ ಮಹಂತೇಶ್ ಮಾಟೋಳಿ, ಎಸ್.ಜಿ.ಮಹೇಶ್, ಸುಧಾ ಹಾಗೂ ಎಲ್ಲಾ ನಿಲಯಪಾಲಕರು ಉಪಸ್ಥಿತರಿದ್ದರು.

ಮೈಸೂರು ರಾಜ ಮನೆತನದ ಬಗ್ಗೆ ನಮಗೆ ಗೌರವವಿದೆ; ಆದರೆ ಯದುವೀರ್ ನಮ್ಮ ಪ್ರತಿಸ್ಪರ್ಧಿ

ಎನ್.ಆರ್.ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಪ್ರತಿಕ್ರಿಯೆ



ಮೈಸೂರು, ಮಾ.14(ಬಿಎಲ್‌ಯು)– ಮೈಸೂರು ರಾಜ ಮನೆತನದ ಬಗ್ಗೆ ಇವತ್ತಿಗೂ ನನಗೆ ಅಪಾರ ಗೌರವವಿದೆ. ಆದರೆ ಇದು ರಾಜಕಾರಣವಾದ ಕಾರಣ ನಮ್ಮ ಪಕ್ಷದ ಅಭ್ಯರ್ಥಿ ಗೆಲ್ಲಿಸುತ್ತೇವೆ ಎಂದು ಶಾಸಕ ತನ್ವೀರ್ ಸೇಠ್ ಸ್ಪಷ್ಟಪಡಿಸಿದರು.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಬಿಜೆಪಿ ಅಭ್ಯರ್ಥಿಯಾಗಿ ಘೋಷಣೆ ಮಾಡಿರುವುದಕ್ಕೆ ಪ್ರತಿಕ್ರಿಯೆ ನೀಡಿದರು.

ಬಿಜೆಪಿ ತನ್ನ ಅಭ್ಯರ್ಥಿ ಆಯ್ಕೆ ಮಾಡಿದೆ. ಆದರೆ ಅದಕ್ಕೂ ನಮಗೂ ಸಂಬಂಧವಿಲ್ಲ. ಅದು ಬಿಜೆಪಿ ಆಂತರಿಕ ವಿಚಾರ. ಆದರೆ ಕಾಂಗ್ರೆಸ್ ಪಕ್ಷ ತನ್ನ ಅಭ್ಯರ್ಥಿ ಆಯ್ಕೆಗೆ ಎಲ್ಲಾ ತಯಾರಿ ನಡೆಸುತ್ತಿದೆ. ಮೈಸೂರಿನಲ್ಲಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಯಲಿದೆ ಎಂದರು.

ರಾಜಮನೆತನದ ಬಗ್ಗೆ ನಮಗೆ ಇವತ್ತಿಗೂ ಗೌರವವಿದೆ. ಆದರೆ ಯದುವೀರ್ ನಮ್ಮ ಪ್ರತಿಸ್ಪರ್ಧಿ. ಆದ ಕಾರಣ ನಮ್ಮ ಪಕ್ಷದ ಅಭ್ಯರ್ಥಿ ಗೆಲ್ಲಿಸಲು ನಾವು ಏನು ಮಾಡಬೇಕೊ ಅದನ್ನು ಮಾಡುತ್ತೇವೆ ಎಂದರು.

ರಾಜಕಾರಣದಲ್ಲಿ ಏನೆಲ್ಲಾ ಆಗುತ್ತದೆ ನೋಡಿ......

ರಾಜಕಾರಣದಲ್ಲಿ ಏನೆಲ್ಲಾ ಆಗುತ್ತದೆ ಎಂಬುವುದಕ್ಕೆ ಪ್ರತಾಪ್ ಸಿಂಹಗೆ ಬಿಜೆಪಿ ಟಿಕೆಟ್ ಕೈ ತಪ್ಪಿರುವುದೇ ಉದಾಹರಣೆ ಎಂದು ಶಾಸಕ ತನ್ವೀರ್ ಸೇಠ್ ಅಭಿಪ್ರಾಯಪಟ್ಟರು.

ಪ್ರತಾಪ್ ಸಿಂಹ ನನ್ನ ಆತ್ಮೀಯ ಸ್ನೇಹಿತ. ಅವರಿಗೆ ಈ ಬಾರಿಯೂ ಬಿಜೆಪಿ ಟಿಕೆಟ್ ಸಿಗುತ್ತದೆ ಎಂದು ನಾನು ನಿರೀಕ್ಷೆ ಮಾಡಿದ್ದೆ ಎಂದರು. ಆದರೆ ಪ್ರತಾಪ್ ಸಿಂಹಗೆ ಟಿಕೆಟ್ ಕೈ ತಪ್ಪಿರುವುದು ಅನಿರೀಕ್ಷಿತ. ರಾಜಕಾರಣದಲ್ಲಿ ಏನೆಲ್ಲಾ ಆಗಬಹುದು ಎಂಬುದಕ್ಕೆ ಉದಾಹರಣೆ ನನ್ನ ಕಣ್ಣ ಮುಂದೆ ಇದೆ. ಈಗ ಪ್ರತಾಪ್ ಸಿಂಹಗೆ ಟಿಕೆಟ್ ಸಿಕ್ಕಿಲ್ಲ. ಆದರೆ ಅವರಿಗೆ ಒಳ್ಳೆಯದಾಗಲಿ ಎಂದು ಆಶಿಸುತ್ತೇನೆ ಎಂದು ತನ್ವೀರ್ ಸೇಠ್ ಹೇಳಿದರು.

ಶ್ರೀ ಮಂತ್ರಾಲಯ ಪರಿಮಳ ಪ್ರಶಸ್ತಿಗೆ ಭಾಜನ



ಮೈಸೂರು,ಮಾ.14–ರೈತ ಕಲ್ಯಾಣ ಸಂಘದ ಸಂಸ್ಥಾಪಕ ಭೂಮಿ ಪುತ್ರ ಸಿ.ಚಂದನ್‌ಗೌಡ ಅವರು ಈ ಸಾಲಿನ ಶ್ರೀ ಮಂತ್ರಾಲಯಂ ಪರಿಮಳ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮಾರ್ಚ್ 17ರ ಭಾನುವಾರ ಸಂಜೆ 4.30ಕ್ಕೆ ಮಂತ್ರಾಲಯ ಶ್ರೀ ಕ್ಷೇತ್ರದಲ್ಲಿ ಶ್ರೀ ಡಾ.ಶ್ರೀಮತ್ಸು ಬುಧೇಂದ್ರತೀರ್ಥ ಶ್ರೀಪಾದಂಗಳವರ ದಿವ್ಯ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ಇಂದು ಗ್ಯಾರಂಟಿ ಸಮಾವೇಶ: ಭಾರಿ ಬಂದೋಬಸ್ತ್




ಮೈಸೂರು, ಮಾ.14(ಆರ್‌ಕೆ)–ನಾಳೆ (ಶುಕ್ರವಾರ) ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಸಮಾವೇಶಕ್ಕೆ ಭಾರಿ ಬಂದೋಬಸ್ತ್ ಮಾಡಲಾಗಿದೆ.

ಸಮಾವೇಶ ನಡೆಯುವ ಮಹಾರಾಜ ಕಾಲೇಜು ಮೈದಾನದಲ್ಲಿ ಭಾರೀ ವೇದಿಕೆ ಹಾಗೂ ಆಸನಗಳ ವ್ಯವಸ್ಥೆ ಮಾಡಲಾಗಿದ್ದು, ಸಾವಿರಾರು ಮಂದಿ ಫಲಾನುಭವಿಗಳು ಆಗಮಿಸುವುದರಿಂದ ಮಹಿಳೆಯರು, ವಿದ್ಯಾರ್ಥಿಗಳು, ಕಾಂಗ್ರೆಸ್ ಕಾರ್ಯಕರ್ತರು, ಗಣ್ಯರಿಗಾಗಿ ಪ್ರತ್ಯೇಕ ಎನ್‌ಕ್ಲೋಷರ್‌ಗಳನ್ನು ಸಿದ್ಧಪಡಿಸಲಾಗಿದೆ.

ಪ್ರವೇಶ ದ್ವಾರಗಳಿಗೆ ಮೆಟಲ್ ಡೋರ್ ಡಿಟೆಕ್ಟರ್‌ಗಳನ್ನು ಅಳವಡಿಸಲಾಗಿದೆ. ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಸಚಿವರು, ಸಂಸದರು, ಶಾಸಕರು ಆಸೀನರಾಗುವುದರಿಂದ ಮೆಟಲ್ ಹ್ಯಾಂಡ್ ಡಿಟೆಕ್ಟರ್, ಶ್ವಾನ ದಳ, ಬಾಂಬ್ ಪತ್ತೆ ದಳ ಮತ್ತು ಬಾಂಬ್ ನಿಗ್ರಹ ದಳದ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ ಭದ್ರತೆಗೆ ನಿಯೋಜನೆಗೊಂಡಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಬಂದೋಬಸ್ತ್ ಕರ್ತವ್ಯದ ಬಗ್ಗೆ ಅಗತ್ಯ ಸೂಚನೆ ನೀಡಲಾಯಿತು. ಸ್ಥಳದಲ್ಲಿ ನಾಲ್ವರು ಎಸಿಪಿಗಳು, 10 ಇನ್ಸ್‌ಪೆಕ್ಟರ್‌ಗಳು, 20 ಸಬ್‌ಇನ್ಸ್‌ಪೆಕ್ಟರ್‌ಗಳು ಸೇರಿ 200ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ. ಸಿಎಆರ್, ಕೆಎಸ್‌ಆರ್‌ಪಿ, ಮೌಂಟೆಡ್ ಪೊಲೀಸ್, ಕಮಾಂಡೋ ಪಡೆಯ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳನ್ನು ಭದ್ರತೆಗೆ ಬಳಸಿಕೊಂಡು ಕಟ್ಟೆಚ್ಚರ ವಹಿಸಲಾಗಿದೆ.

ಭೂ ಅವ್ಯವಹಾರ ತಡೆಗೆ ಆಧಾರ್–ಆರ್‌ಟಿಸಿ ಜೋಡಣೆ ಆರಂಭ



ಆಧಾರ್ ಕಾರ್ಡ್‌ನೊಂದಿಗೆ ಆರ್‌ಟಿಸಿ ಜೋಡಣೆ ಮಾಡುವ ಪ್ರಕ್ರಿಯೆ ಎಲ್ಲಾ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಆರಂಭಗೊಂಡಿದೆ.

ಮೈಸೂರು, ಮಾ.14(ಆರ್‌ಕೆ)–ಅಕ್ರಮ ಭೂ ಮಾಲೀಕತ್ವ, ವಂಚನೆ ತಡೆಗಟ್ಟಲು ಆಧಾರ್ ಕಾರ್ಡ್‌ನೊಂದಿಗೆ ಆರ್‌ಟಿಸಿ ಜೋಡಣೆ ಮಾಡುವ ಪ್ರಕ್ರಿಯೆ ಎಲ್ಲಾ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಆರಂಭವಾಗಿದೆ.

ಈ ಬಗ್ಗೆ ಮಾರ್ಚ್ 11ರಂದು ಸರ್ಕಾರ ಅಧಿಸೂಚನೆ ಹೊರಡಿಸಿ ರಾಜ್ಯ ಪತ್ರದಲ್ಲೂ ಪ್ರಕಟಿಸಲಾಗಿದೆ. ಆದೇಶದನ್ವಯ ಮೈಸೂರು ನಗರದ 5 ಸೇರಿ ಜಿಲ್ಲೆಯ ಎಲ್ಲಾ 14 ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಆಧಾರ್‌ನೊಂದಿಗೆ ಆರ್‌ಟಿಸಿ ಲಿಂಕ್ ಮಾಡುವ ಪ್ರಕ್ರಿಯೆ ಆರಂಭವಾಗಿದ್ದು, ಅಗತ್ಯ ಬಿದ್ದರೆ ಭಾನುವಾರವೂ ಕೆಲಸ ಮಾಡುವಂತೆ ಸರ್ಕಾರ ಉಪ ನೋಂದಣಾಧಿಕಾರಿಗಳಿಗೆ ನಿರ್ದೇಶನ ನೀಡಿದೆ. ಅರ್ಹ ರೈತ ಫಲಾನುಭವಿಗಳಿಗೆ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಯೋಜನೆಗಳ ಸೌಲಭ್ಯ ಒದಗಿಸಲು ಹಾಗೂ ನಕಲಿ ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡುವುದು, ರೈತರಿಗೆ ವಂಚಿಸುವುದನ್ನು ತಡೆಯಬಹುದಲ್ಲದೆ, ಭೂ ಮಾಲೀಕತ್ವದ ಗೊಂದಲ ನಿವಾರಣೆಗೂ ಆಧಾರ್‌ನೊಂದಿಗೆ ಆರ್‌ಟಿಸಿ ಜೋಡಣೆ ಸುಲಭವಾಗುತ್ತದೆ. ಕಂದಾಯ ಇಲಾಖೆ ಅಧಿಕಾರಿಗಳು ರೈತರ ಮನೆಗಳಿಗೆ ಭೇಟಿ ನೀಡಿ ಆಧಾರ್ ಲಿಂಕ್ ಮಾಡುವುದಲ್ಲದೆ, ವಿಲೇಜ್ ಅಕೌಂಟೆಂಟ್ ಕಚೇರಿಗಳಿಗೆ ಭೇಟಿ ನೀಡುವ ರೈತರ ಭೂ ದಾಖಲೆಗಳಿಗೆ ಆಧಾರ್ ಜೋಡಣೆ ಕಾರ್ಯ ಪ್ರಗತಿಯಲ್ಲಿದೆ.

ಆಧಾರ್ ಕಾರ್ಡ್‌ನೊಂದಿಗೆ ಪಹಣಿ ಜೋಡಣೆಗೆ ಗ್ರಾಮಗಳಲ್ಲಿ ಅದಾಲತ್ ನಡೆಸಿ ನಿಗದಿತ ಸಮಯದೊಳಗೆ ಪ್ರಕ್ರಿಯೆ ಪೂರ್ಣಗೊಳಿಸುವಂತೆಯೂ ಕಂದಾಯ ಇಲಾಖೆ ನಿರ್ದೇಶನ ನೀಡಿರುವುದರಿಂದ ಲೋಕಸಭಾ ಚುನಾವಣೆ ನಂತರವೂ ಅಧಿಕಾರಿಗಳು ಈ ಕೆಲಸ ಮುಂದುವರಿಸಬೇಕೆಂದು ಸರ್ಕಾರ ಸೂಚಿಸಿದೆ.

ಕಾರು ಉರುಳಿ ಬಿದ್ದು ನಾಲ್ವರು ಯುವಕರಿಗೆ ಗಾಯ

ಮೈಸೂರು-ಬೆಂಗಳೂರು ಹೆದ್ದಾರಿ ಸರ್ವಿಸ್ ರಸ್ತೆಯಲ್ಲಿ ಗುರುವಾರ ಮಧ್ಯಾಹ್ನ ಘಟನೆ

ಶ್ರೀರಂಗಪಟ್ಟಣ,ಮಾ.14(ಆರ್‌ಕೆ)– ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ನಾಲ್ವರು ಯುವಕರು ಗಾಯಗೊಂಡ ಘಟನೆ ಗುರುವಾರ ಮಧ್ಯಾಹ್ನ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯ ಗಣಂಗೂರು ಸಮೀಪ ಸರ್ವಿಸ್ ರಸ್ತೆಯಲ್ಲಿ ಸಂಭವಿಸಿದೆ.

ಮಂಡ್ಯ ತಾಲೂಕು, ಮಲ್ಲಿಗೆರೆ ಗ್ರಾಮದ ಸುನಿಲ್, ನವೀನ್ ಕುಮಾರ್, ಸಾಗರ ಹಾಗೂ ತಾಂಡವ ಎಂಬ 22ರಿಂದ 24 ವರ್ಷದ ಯುವಕರು ಗಾಯಗೊಂಡವರಾಗಿದ್ದು, ಅವರನ್ನು ಮಂಡ್ಯ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಂದು ಬೆಳಗ್ಗೆ ಮಾರುತಿ ಸ್ವಿಫ್ಟ್(ಕೆಎ02, ಎಹೆಚ್7685) ಕಾರಿನಲ್ಲಿ ಮೈಸೂರಿಗೆ ಬಂದಿದ್ದರು. ಹಿಂದಿರುಗುತ್ತಿದ್ದಾಗ ಗಣಂಗೂರು ಶ್ರೀ ಬಸವೇಶ್ವರ ದೇವಸ್ಥಾನದ ಬಳಿ ಸರ್ವಿಸ್ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಕಾರು ನಾಲ್ಕೈದು ಸುತ್ತು ಉರುಳಿ ರಸ್ತೆ ಎಡಭಾಗಕ್ಕೆ ಬಿದ್ದಿದೆ.

ಪರಿಣಾಮ ಕಾರಿನಲ್ಲಿದ್ದ ನಾಲ್ವರು ಯುವಕರು ಗಾಯಗೊಂಡರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಬಿಜಿ.ಕುಮಾರ್ ಹಾಗೂ ಸಿಬ್ಬಂದಿ ಮಹಜರು ನಡೆಸಿ, ಗಾಯಗಳಾಗಿ ರಕ್ತಸ್ರಾವದಿಂದ ಒದ್ದಾಡುತ್ತಿದ್ದ ಯುವಕರನ್ನು ಆಸ್ಪತ್ರೆಗೆ ದಾಖಲಿಸಿದರು. ಜಖಂಗೊಂಡಿರುವ ಕಾರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಕಾಂಗ್ರೆಸ್ ಇಂದಿರಾ ಬ್ಲಾಕ್ ನೂತನ ಅಧ್ಯಕ್ಷರಾಗಿ ರವಿ ಮಂಚೇಗೌಡನಕೊಪ್ಪಲು ಅಧಿಕಾರ ಸ್ವೀಕಾರ



ಮೈಸೂರು, ಮಾ.14(ಬಿಎಲ್‌ಯು)– ಮೈಸೂರಿನ ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ನೂತನ ಅಧ್ಯಕ್ಷರಾಗಿ ರವಿ ಮಂಚೇಗೌಡನಕೊಪ್ಪಲು ಇಂದು ಅಧಿಕಾರ ಸ್ವೀಕರಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ ಉಪಸ್ಥಿತಿಯಲ್ಲಿ ರವಿ ಅಧಿಕಾರ ಸ್ವೀಕಾರ ಮಾಡಿದರು.

ಈ ವೇಳೆ ಮಾತನಾಡಿದ ತನ್ವೀರ್ ಸೇಠ್, ಒಂದು ಬೆಂಕಿ ಹಚ್ಚುವ ಪಕ್ಷವಿದೆ, ಇನ್ನೊಂದು ಬೆಂಕಿ ಆರಿಸುವ ಪಕ್ಷವಿದೆ. ಸಂವಿಧಾನ ಬದಲಾವಣೆ ಮಾಡಲು ಮತ ಕೊಡಿ ಎಂದು ಕೆಲವರು ಮನವಿ ಮಾಡುತ್ತಾರೆ. ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿ ಮತದಾರರು ಸೂಕ್ತ ನಿರ್ಧಾರ ತೆಗೆದುಕೊಳ್ಳುವ ವಿಶ್ವಾಸವಿದೆ ಎಂದರು.

ಸರ್ಕಾರದ ಗ್ಯಾರಂಟಿ ಯೋಜನೆಗಳು ಎಲ್ಲರಿಗೂ ತಲುಪುತ್ತಿದ್ದು, ಜನರು ತೃಪ್ತರಾಗಿದ್ದಾರೆ. ಇದರಿಂದ ಮತದಾರರು ಕಾಂಗ್ರೆಸ್ ಬೆಂಬಲಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಬಳಿಕ ಮಾತನಾಡಿದ ಹರೀಶ್‌ಗೌಡ, ಮೈಸೂರು ಮತ್ತು ಕೊಡಗು ಜಿಲ್ಲೆಯ ಕಾರ್ಯಕರ್ತರು ಲೋಕಸಭಾ ಚುನಾವಣೆಯಲ್ಲಿ ಸಕ್ರಿಯರಾಗಬೇಕು. ಸರ್ಕಾರದ ಯೋಜನೆಗಳನ್ನು ಜನರಿಗೆ ತಿಳಿಸಿ, ಮತ ಕೇಳಬೇಕು. ಜಾತ್ಯಾತೀತ ಸರ್ಕಾರ ಅಸ್ತಿತ್ವಕ್ಕೆ ತರುವ ಮಹತ್ವದ ಬಗ್ಗೆ ಅರಿವುಂಟು ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಆರಂಭದಲ್ಲೆ ಇತ್ತೀಚೆಗೆ ನಿಧನರಾದ ಮಾಜಿ ಶಾಸಕ ವಾಸು ಅವರಿಗೆ ಸಂತಾಪ ಸೂಚಿಸಲಾಯಿತು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ಮುಖಂಡ ಡಾ.ಶುಶ್ರುತ್ ಗೌಡ, ಮಾಜಿ ಮೇಯರ್ ಚಿಕ್ಕಣ್ಣ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ಅಭಿವೃದ್ಧಿ, ಸಾರ್ವಜನಿಕ ಸೇವೆ ಹಾದಿಯಿಂದ ಚುನಾವಣಾ ರಾಜಕಾರಣಕ್ಕೆ ಪ್ರವೇಶ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ



ಬೆಂಗಳೂರು, ಮಾ.14(ಕೆಎಂಶಿ)– ಅಭಿವೃದ್ಧಿ ಮತ್ತು ಸಾರ್ವಜನಿಕ ಸೇವೆಯ ದೃಷ್ಟಿಕೋನ ಇಟ್ಟುಕೊಂಡು ಚುನಾವಣಾ ರಾಜಕೀಯಕ್ಕೆ ಬರಲು ನಿರ್ಧರಿಸಿದ್ದಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಇಂದಿಲ್ಲಿ ತಿಳಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಇದ್ದಾಗ ಹೆಚ್ಚಿನ ಅಭಿವೃದ್ಧಿ ಮಾಡಲು ಅವಕಾಶ ಸಿಗುತ್ತದೆ ಎಂದರು. ಪ್ರತಾಪಸಿಂಹ ಅವರು ಮೈಸೂರಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ, ಅವರು ತಮಗೆ ಸಹಕಾರ ನೀಡಲಿದ್ದಾರೆ ಎಂದರು.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ಇಲ್ಲ

ಮಂಡಳಿ ಸ್ಪಷ್ಟನೆ

ಬೆಂಗಳೂರು, ಮಾ.14– ಕಳೆದ ಮಾ.7ರಂದು ಭೌತಶಾಸ್ತ್ರದ ದ್ವಿತೀಯ ಪಿಯುಸಿ ಬೋರ್ಡ್ ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳಿಗೆ ಬಹು ಆಯ್ಕೆಯ ಪ್ರಶ್ನೆಗಳು (MCQಗಳು) ಕಷ್ಟಕರವಾಗಿದ್ದರಿಂದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕ ನೀಡುತ್ತಿದೆ ಎಂದು ಹಬ್ಬಿರುವ ವದಂತಿ ನಿಜವಲ್ಲ ಎಂದು ಮಂಡಳಿ ಸ್ಪಷ್ಟಪಡಿಸಿದೆ. ಪತ್ರಿಕೆಯ ಭಾಗ 'ಎ'ಯಲ್ಲಿ ಬ್ಲೂಪ್ರಿಂಟ್ ಅಲ್ಲದ ಬಹು ಆಯ್ಕೆ ಮಾದರಿ ಪ್ರಶ್ನೆಗಳನ್ನು ಪ್ರಯತ್ನಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕಗಳನ್ನು ನೀಡಲು ಮಂಡಳಿಯು ನಿರ್ಧರಿಸಿದೆ. ಪ್ರಶ್ನೆಗಳನ್ನು ಪ್ರಯತ್ನಿಸದೆ ಹಾಗೆಯೇ ಬಿಟ್ಟುಬಿಟ್ಟ ವಿದ್ಯಾರ್ಥಿಗಳಿಗೆ ಯಾವುದೇ ಗ್ರೇಸ್ ಅಂಕಗಳನ್ನು ನೀಡಲಾಗುವುದಿಲ್ಲ ಎಂದು ಮಾರ್ಚ್ 10 ರಂದು ಹೊರಡಿಸಲಾದ ಸುತ್ತೋಲೆ ನಕಲಿ ಮತ್ತು ವಿದ್ಯಾರ್ಥಿಗಳು ಮತ್ತು ಪೋಷಕರನ್ನು ತಪ್ಪುದಾರಿಗೆಳೆಯುವಂಥದ್ದು ಎಂದು ಮಂಡಳಿ ತಿಳಿಸಿದೆ.

ಈ ಬಗ್ಗೆ TNIEಯೊಂದಿಗೆ ಮಾತನಾಡಿದ ಪ್ರಭಾರಿ ಮತ್ತು ಪಿಯುಸಿ ಪರೀಕ್ಷೆಗಳ ನಿರ್ದೇಶಕ ಗೋಪಾಲಕೃಷ್ಣ ಎಚ್‌ಎನ್, ಸುತ್ತೋಲೆ ನಕಲಿಯಾಗಿದ್ದು, ಮಂಡಳಿಯಿಂದ ಹೊರಡಿಸಲಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇಲಾಖೆ ಗ್ರೇಸ್ ಮಾರ್ಕ್‌ಗಳನ್ನು ನೀಡಲಿದೆ ಎಂದು ಸುತ್ತೋಲೆ ಇಂಟರ್ನೆಟ್, ಸೋಷಿಯಲ್ ಮೀಡಿಯಾ ಗಳಲ್ಲಿ ಹರಿದಾಡುತ್ತಿದೆ. ಆದರೆ ನಾವು ಇದುವರೆಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಪತ್ರಿಕೆಯಲ್ಲಿ ಕಾಣಿಸಿ ಕೊಂಡ ಎಲ್ಲಾ ಪ್ರಶ್ನೆಗಳು ಎನ್‌ಸಿಇ ಆರ್‌ಟಿ ಪಠ್ಯ ಪುಸ್ತಕಗಳ ಭಾಗವಾಗಿತ್ತು. ಈಗ ಎಲ್ಲೆಡೆ ಹರಿದಾಡುತ್ತಿರುವ ಸುತ್ತೋಲೆ ಮಂಡಳಿಯ ಅಧಿಕೃತ ಸುತ್ತೋಲೆಯಲ್ಲ ಎಂದು ಸ್ಪಷ್ಟಪಡಿಸುತ್ತೇನೆ ಎಂದರು.

ಮೇ, ಜೂನ್ ತಿಂಗಳಲ್ಲಿ ಸ್ನಾತಕ ಪದವಿಯ ಪೂರಕ ಪರೀಕ್ಷೆ

ಮೈಸೂರು,ಮಾ.14–ವಿವಿಧ ಸ್ನಾತಕ (ಯುಜಿ) ಪದವಿಯ ಸೆಮಿಸ್ಟರ್ ವಿದ್ಯಾರ್ಥಿಗಳು ತಮ್ಮ ಎರಡು ಪಟ್ಟು ಅವಧಿ ಮುಗಿದ ನಂತರವೂ 2, 4, 6 ಮತ್ತು 8ನೇ ಸೆಮಿಸ್ಟರ್‌ಗಳ ಪತ್ರಿಕೆಗಳಲ್ಲಿ ಅನುತ್ತೀರ್ಣಗೊಂಡಿದ್ದರೆ ಅಂತಹ ಪತ್ರಿಕೆಗಳ ಪರೀಕ್ಷೆಯನ್ನು ತೆಗೆದುಕೊಳ್ಳಲು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಮೇ ಅಥವಾ ಜೂನ್–2024ರ ನಡೆಯುವ ಪರೀಕ್ಷೆಯ ಶುಲ್ಕ ಪಾವತಿ ಹಾಗೂ ಅರ್ಜಿ ಸಲ್ಲಿಸುವ ಸಂಬಂಧ ಹೆಚ್ಚಿನ ಮಾಹಿತಿಗಳಿಗೆ ವಿದ್ಯಾರ್ಥಿಗಳು ವ್ಯಾಸಂಗ ಮಾಡಿದ ಕಾಲೇಜನ್ನು ಸಂಪರ್ಕಿಸಬಹುದು ಎಂದು ಪರೀಕ್ಷಾಂಗ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಇಂದು ರಾಜ್ಯ ಸರ್ಕಾರದ ಗ್ಯಾರಂಟಿ ಫಲಾನುಭವಿಗಳ ಸಮಾವೇಶ

ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗಿ

● ವಿಶಾಲ ವೇದಿಕೆ, ಪೆಂಡಾಲ್ ನಿರ್ಮಾಣ ● ಯೋಜನೆ ಬಗ್ಗೆ ಮಾಹಿತಿ ನೀಡಲು ಎಲ್‌ಇಡಿ ಸ್ಕ್ರೀನ್ ● ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಸಮಾವೇಶಕ್ಕೆ ಮಹತ್ವ



ಮೈಸೂರು ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಗುರುವಾರ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಶುಕ್ರವಾರ ನಡೆಯುವ ಗ್ಯಾರಂಟಿ ಯೋಜನೆಗಳ ಸಮಾವೇಶದ ಬಗ್ಗೆ ಪೂರ್ವ ಭಾವಿ ಸಭೆ ನಡೆಸಿ, ಸಿದ್ಧತೆಗಳನ್ನು ಪರಿಶೀಲಿಸಿದರು.



ಸಿದ್ದರಾಮಯ್ಯ



ಡಿ.ಕೆ.ಶಿವಕುಮಾರ್

ಮೈಸೂರು, ಮಾ.14(ಬಿಎಲ್‌ಯು)– ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶ ನಾಳೆ ಮೈಸೂರಿನಲ್ಲಿ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಹಲವು ನಾಯಕರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ನಾಳೆ ಮಧ್ಯಾಹ್ನ 2 ಗಂಟೆಗೆ ಸಮಾವೇಶ ಆರಂಭವಾಗಲಿದ್ದು,, ಗ್ಯಾರಂಟಿ ಯೋಜನೆಯ ಸಹಸ್ರಾರು ಫಲಾನುಭವಿಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಸಮಾವೇಶಕ್ಕಾಗಿ ಮಹಾರಾಜ ಕಾಲೇಜು ಮೈದಾನದಲ್ಲಿ ವಿಶಾಲ ವೇದಿಕೆ ನಿರ್ಮಾಣ ಮಾಡಲಾಗಿದ್ದು, ಸಾವಿರಾರು ಜನರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನದಿಂದ ಸಂಜೆ ತನಕ ಸಮಾವೇಶ ನಡೆಯುವುದರಿಂದ ಜನರಿಗೆ ಬಿಸಿಲಿನ ತಾಪ ಉಂಟಾಗದಂತೆ ಜರ್ಮನ್ ಪೆಂಡಾಲ್ ಹಾಕಲಾಗಿದೆ. ಜೊತೆಗೆ ಪೆಂಡಾಲ್‌ನಲ್ಲಿ ಭಾರೀ ಪ್ರಮಾಣದ ಫ್ಯಾನ್‌ಗಳನ್ನು ಅಳವಡಿಸಲಾಗಿದೆ. ವೇದಿಕೆಯಲ್ಲಿ ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡಲು ಎಲ್‌ಇಡಿ ಸ್ಕ್ರೀನ್‌ಗಳನ್ನು ಅಳವಡಿಸಲಾಗಿದೆ. ಲೋಕಸಭಾ ಚುನಾವಣೆಗೆ ಇನ್ನು ಕೆಲವೇ ದಿನಗಳು ಬಾಕಿ ಇರುವ ಸಂದರ್ಭದಲ್ಲಿ ನಾಳೆ ನಡೆಯುತ್ತಿರುವ ಗ್ಯಾರಂಟಿ ಯೋಜನೆಗಳ ಸಮಾವೇಶ ಮಹತ್ವ ಪಡೆದಿದೆ.

ಜಿಲ್ಲಾಧಿಕಾರಿ ಡಾ.ರಾಜೇಂದ್ರ ಇಂದು ಹಿರಿಯ ಅಧಿಕಾರಿಗಳ ಜೊತೆಗೆ ಸಮಾವೇಶ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಯಾವುದೇ ಲೋಪವಾಗದಂತೆ ಅಚ್ಚುಕಟ್ಟಾಗಿ ಸಮಾವೇಶ ನಡೆಯುವಂತೆ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತರುವಾಯ ಮೈಸೂರು ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಸಿದ್ಧತೆಗಳ ಬಗ್ಗೆ ಪರಿಶೀಲನೆ ನಡೆಸಿದರು.

ಜಿಲ್ಲಾ ಮಟ್ಟ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಿಗೆ ತೆರಳಿ, ಸಮಾವೇಶದ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು. ಆ ವೇಳೆ ಸಮಾವೇಶದಲ್ಲಿ ಭಾಗವಹಿಸುವಂತೆ ಜನರಿಗೆ ಆಹ್ವಾನ ನೀಡಬೇಕು. ಗ್ರಾಮ ಪಂಚಾಯಿತಿ, ನಗರಸಭೆ ಹಾಗೂ ಪುರಸಭೆಗಳಿಂದ ಫಲಾನುಭವಿಗಳನ್ನು ಕರೆತರಲು ಬಸ್ ವ್ಯವಸ್ಥೆ ಮಾಡಲಾಗಿದೆ.

ಸಮಾವೇಶದಲ್ಲಿ ಸಾವಿರಾರು ಜನರು ಭಾಗವಹಿಸುತ್ತಿದ್ದು ಅವರಿಗೆ ಕುಡಿಯುವ ನೀರು ಹಾಗೂ ಮಜ್ಜಿಗೆ ನೀಡಬೇಕು. ವೇದಿಕೆ, ಶಿಷ್ಟಾಚಾರ, ಆಹಾರ, ಸ್ವಚ್ಛತೆ, ಭದ್ರತೆ, ಆರೋಗ್ಯ, ಪ್ರಚಾರ, ಬಸ್ ವ್ಯವಸ್ಥೆ ಸಂಬಂಧ ಸಮಿತಿ ರಚನೆ ಮಾಡಿ ಅಧಿಕಾರಿಗಳು ಸಮರ್ಪಕ ರೀತಿ ಕೆಲಸ ನಿರ್ವಹಿಸಬೇಕು ಎಂದು ಹೇಳಿದರು.

ಕಾರ್ಯಕ್ರಮಕ್ಕೆ ಆಗಮಿಸುವ ಸಾರ್ವಜನಿಕರ ವಾಹನಗಳ ನಿಲುಗಡೆ ಸೇರಿದಂತೆ ಇತರೆ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಬೇಕು ಎಂದು ಡಾ.ರಾಜೇಂದ್ರ ತಾಕೀತು ಮಾಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾಡಳಿತ ಭವನದ ತಡೆಗೋಡೆ ಪರಿಶೀಲನೆ

● 15 ದಿನದೊಳಗೆ ಕ್ರಿಯಾ ಯೋಜನೆ ವರದಿ ನೀಡಿ ● ವಿಧಾನಸಭೆಯ ಅರ್ಜಿಗಳ ಸಮಿತಿ ಸದಸ್ಯರ ಸೂಚನೆ

ಮಡಿಕೇರಿ, ಮಾ.14–ಕೊಡಗು ಜಿಲ್ಲಾಡಳಿತ ಭವನದ ಮುಂಭಾಗ ಸುಭದ್ರವಾದ ತಡೆಗೋಡೆ ನಿರ್ಮಾಣಕ್ಕೆ 15 ದಿನದೊಳಗಾಗಿ ವಿಸ್ತೃತ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ವರದಿ ನೀಡುವಂತೆ ಅಧಿಕಾರಿಗಳಿಗೆ ಕರ್ನಾಟಕ ವಿಧಾನಸಭೆಯ ಅರ್ಜಿಗಳ ಸಮಿತಿ ಸದಸ್ಯರು ಸೂಚಿಸಿದರು.

ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಕಳಪೆ ತಡೆಗೋಡೆ ನಿರ್ಮಾಣವಾಗಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಗುರುವಾರ ವಿಧಾನಸಭೆಯ ಅರ್ಜಿಗಳ ಸಮಿತಿ ಸದಸ್ಯರಾದ ಎಸ್.ಸುರೇಶ್‌ಕುಮಾರ್, ಎ.ಮಂಜು, ಸಿ.ಬಿ.ಸುರೇಶ್ ಬಾಬು, ಮಹೇಂದ್ರ ಕಲ್ಲಪ್ಪ ತಮ್ಮಣ್ಣನವರ, ಶಾಸಕ ಡಾ.ಮಂತರ್‌ಗೌಡ, ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಲೋಕೋಪಯೋಗಿ ಇಲಾಖೆ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು.

ಪೂರ್ಣ ವೈಫಲ್ಯತೆ ಅಲ್ಲ: ಜಿಲ್ಲಾಡಳಿತ ಭವನದ ಮುಂಭಾಗ ನಿರ್ಮಿಸಿರುವ ತಡೆಗೋಡೆ ಮಳೆಗಾಲದಲ್ಲಿ ಸೂಕ್ತ ಚರಂಡಿ ವ್ಯವಸ್ಥೆಗಳಿಲ್ಲದೆ ಒಂದು ಭಾಗ ಉಬ್ಬಿದೆ. ಹೀಗೆಂದ ಮಾತ್ರಕ್ಕೆ ಒಟ್ಟು ಯೋಜನೆಯೇ ಪೂರ್ಣ ವಿಫಲವಾಗಿದೆ ಎನ್ನುವಂತಿಲ್ಲ ಎಂದು ಅರ್ಜಿ ಸಮಿತಿ ಸದಸ್ಯರ ಪರಿಶೀಲನೆ ವೇಳೆ ತಾಂತ್ರಿಕ ತಜ್ಞರು ಅನಿಸಿಕೆ ವ್ಯಕ್ತಪಡಿಸಿದರು.

ಈ ತಡೆಗೋಡೆಗೆ ಪರ್ಯಾಯವಾಗಿ ಅಗತ್ಯ ಕಾಮಗಾರಿ ಕೈಗೊಳ್ಳುವುದಕ್ಕೂ ಮುಂಬರುವ ಮಳೆಗಾಲದ ಅವಧಿಯಲ್ಲಿ ಈಗಿನ ತಡೆಗೋಡೆಯ ಸ್ಥಿತಿಯನ್ನು ಪರಿಶೀಲಿಸಬೇಕೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಡಾ.ಮಂತರ್‌ಗೌಡ, ತಡೆಗೋಡೆ ನಿರ್ಮಾಣ ಕಳಪೆಯಾಗಿ ಜನರು ಆತಂಕಕ್ಕೆ ಒಳಗಾಗಿದ್ದಾರೆ. ಜನಪ್ರತಿನಿಧಿಯಾಗಿ ಮತ್ತೊಂದು ಇದೇ ಮಳೆಗಾಲವನ್ನು ನೋಡಿಕೊಂಡಿರಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಸರ್ಕಾರಕ್ಕೆ ಶಿಫಾರಸು: ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ತಡೆಗೋಡೆಗೆ ಸಂಬಂಧಿಸಿದಂತೆ ಎಸ್.ಸುರೇಶ್‌ಕುಮಾರ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಅರ್ಜಿ ಸಮಿತಿಯ ಮುಂದೆ ತಡೆಗೋಡೆ ನಿರ್ಮಾಣಕ್ಕೆ ಸಂಬಂಧ ಸಲ್ಲಿಕೆಯಾದ ಅರ್ಜಿ ಹಿನ್ನೆಲೆಯಲ್ಲಿ ಈಗಾಗಲೇ 3 ಸಭೆ ನಡೆಸಿ ಇದೀಗ 4ನೇ ಸಭೆ ನಡೆಸಿ ಚರ್ಚಿಸಲಾಗಿದೆ. ಖುದ್ದು ಭೇಟಿ ನೀಡಿ ಪರಿಶೀಲಿಸಿ, ತಡೆಗೋಡೆ ಸಂಬಂಧ ಜನಸಾಮಾನ್ಯರಲ್ಲಿರುವ ಆತಂಕಗಳನ್ನು ದೂರ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದರು. ಜಿಲ್ಲಾಡಳಿತ ಭವನ 2013–14ರಲ್ಲಿ ನಿರ್ಮಾಣವಾದ ಬಳಿಕ 2020ರಲ್ಲಿ ತಡೆಗೋಡೆ ನಿರ್ಮಾಣವಾಗಿದ್ದು, 2022ರ ಮುಂಗಾರಿನ ಅವಧಿಯಲ್ಲಿ ತಡೆಗೋಡೆ ಕುಸಿತದ ಆತಂಕವನ್ನು ಜನರು ಎದುರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಒಟ್ಟು ಯೋಜನೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ, ಕೇಂದ್ರದ ಸಿಪಿಡಬ್ಲ್ಯುಡಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಐಐಟಿ ಅಧಿಕಾರಿಗಳನ್ನು ಕರೆಸಿ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾಡಳಿತ ಭವನಕ್ಕೆ 5 ಕೋಟಿ ರೂ. ವೆಚ್ಚವಾಗಿದ್ದರೆ, ತಡೆಗೋಡೆ ನಿರ್ಮಾಣಕ್ಕೆ 7 ಕೋಟಿ ರೂ. ವ್ಯಯಿಸಲಾಗಿದೆ. ಇಂತಹ ತಡೆಗೋಡೆಯಿಂದ ಪ್ರಸ್ತುತ ಆತಂಕ ಎದುರಾಗಿರುವ ಹಿನ್ನೆಲೆಯಲ್ಲಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ಅಗತ್ಯತೆ ಇದೆ. ಈಗ ಇರುವ ತಡೆಗೋಡೆಗೆ ಬದಲಿ ವ್ಯವಸ್ಥೆ ಬಗ್ಗೆ ವಿವರವಾದ ವರದಿ ನೀಡಲು ಸೂಚಿಸಲಾಗಿದೆ. ವರದಿಗೆ ಸಂಬಂಧಿಸಿದಂತೆ ಚರ್ಚಿಸಿ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಸುರೇಶ್ ಕುಮಾರ್ ಸ್ಪಷ್ಟಪಡಿಸಿದರು.

ಇದೇ ವೇಳೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಸತ್ಯನಾರಾಯಣ, ಅಂದಾಜು ಸಮಿತಿಯ ಜಯಪ್ರಸಾದ್, ಸದಸ್ಯರಾದ ಭುರ್ಜಿ, ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಶಿವಕುಮಾರ್, ಜಿಪಂ ಸಿಇಒ ವರ್ಣಿತ್ ನೇಗಿ, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.



ಮಡಿಕೇರಿ ಜಿಲ್ಲಾಡಳಿತ ಭವನದ ಮುಂಭಾಗದ ತಡೆಗೋಡೆಯನ್ನು ವಿಧಾನಸಭೆಯ ಅರ್ಜಿಗಳ ಸಮಿತಿ ಸದಸ್ಯರಾದ ಎಸ್.ಸುರೇಶ್‌ಕುಮಾರ್, ಎ.ಮಂಜು, ಸಿ.ಬಿ.ಸುರೇಶ್ ಬಾಬು, ಮಹೇಂದ್ರ ಕಲ್ಲಪ್ಪ ತಮ್ಮಣ್ಣನವರ ಪರಿಶೀಲಿಸಿದರು. ಶಾಸಕ ಡಾ.ಮಂತರ್‌ಗೌಡ ಇದ್ದರು.

ಸಾಮರ್ಥ್ಯ ಆಧರಿಸಿ ಲೋಕಸಭಾ ಅಭ್ಯರ್ಥಿಗಳ ಆಯ್ಕೆ



ಸುರೇಶ್‌ಕುಮಾರ್

ಮಡಿಕೇರಿ: ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಬಿಜೆಪಿ ಮೊದಲ ಹಂತವಾಗಿ 20 ಅಭ್ಯರ್ಥಿಗಳನ್ನು ಘೋಷಿಸಿದೆ. ಇದರಿಂದ ಕೆಲವರಿಗೆ ನೋವಾಗಿದ್ದು, ಪಕ್ಷದ ವರಿಷ್ಠರು ಈ ಸಮಸ್ಯೆಯನ್ನು ಪರಿಹರಿಸಲಿದ್ದಾರೆ ಎಂದು ಬಿಜೆಪಿ ಮುಖಂಡ ಎಸ್.ಸುರೇಶ್ ಕುಮಾರ್ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 28 ಕ್ಷೇತ್ರಗಳ ಪೈಕಿ 25 ಸ್ಥಾನಗಳಲ್ಲಿ ಬಿಜೆಪಿ ಸ್ಪರ್ಧಿಸಲಿದ್ದು, ಈಗಾಗಲೇ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ. ಪ್ರತಿ ಕ್ಷೇತ್ರದಲ್ಲೂ ಆಕಾಂಕ್ಷಿಗಳು ಹೆಚ್ಚಿದ್ದು, ಪಕ್ಷದ ನಾಯಕರು ಅಭ್ಯರ್ಥಿಗಳ ಸಾಮರ್ಥ್ಯವನ್ನು ಆಧರಿಸಿ ಆಯ್ಕೆ ಮಾಡಿದ್ದಾರೆ. ಸಂಸದರಾದ ನಳಿನ್ ಕುಮಾರ್ ಕಟೀಲ್ ಮತ್ತು ಪ್ರತಾಪ್ ಸಿಂಹ ಅವರು ನಾವ್ರ ಪಕ್ಷದ ಕಾರ್ಯಕರ್ತರು. 3ನೇ ಬಾರಿ ಮೋದಿ ಅವರನ್ನು ಪ್ರಧಾನಿಯನ್ನಾಗಿ ಮಾಡಬೇಕೆಂದು ಹೇಳಿದ್ದಾರೆ. ದೇಶವನ್ನು ವಿಶ್ವದ 3ನೇ ಆರ್ಥಿಕ ಶಕ್ತಿಯನ್ನಾಗಿ ಮಾಡುವುದೇ ನಮ್ಮೆಲ್ಲರ ಗುರಿಯಾಗಿದೆ ಎಂದರು.

ಕೆ.ಎಸ್. ಈಶ್ವರಪ್ಪ ಪುತ್ರನಿಗೆ ಟಿಕೆಟ್ ಕೈತಪ್ಪಿದ ಕುರಿತು ಪ್ರತಿಕ್ರಿಯಿಸಿದ ಎಸ್.ಸುರೇಶ್ ಕುಮಾರ್, ಈಶ್ವರಪ್ಪ ಅವರು ಪಕ್ಷದ ಅಧ್ಯಕ್ಷರಾಗಿ, ಪ್ರತಿಪಕ್ಷದ ನಾಯಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರಿಗೂ ಜವಾಬ್ದಾರಿ ಸ್ಥಾನ ಇದೆ. ಪಕ್ಷದ ಹಿರಿಯರು ಅವರೊಂದಿಗೆ ಮಾತನಾಡಿ ಸರಿಪಡಿಸುತ್ತಾರೆ. ಬಿಜೆಪಿ ಸರ್ವ ವ್ಯಾಪಿ ಹಾಗೂ ಸರ್ವ ಸ್ಪರ್ಶಿ ಪಕ್ಷವಾಗಿದ್ದು, ಯಾವುದೇ ಒಂದು ಸಮುದಾಯವನ್ನು ದೂರವಿಡುವ ಪ್ರಮಯವೇ ಇಲ್ಲ. ಬಿಜೆಪಿ ಇಡೀ ಸಮಾಜವನ್ನು ಒಂದು ಎಂದು ಪರಿಗಣಿಸುತ್ತದೆ ಎಂದರು.

ಜಿಲ್ಲೆಯಲ್ಲಿ ಮಾದಕವಸ್ತು ಮುಕ್ತಗೊಳಿಸಿ

ಮಡಿಕೇರಿ: ಜಿಲ್ಲೆಯನ್ನು ಡ್ರಗ್ಸ್, ಹೆರಾಯಿನ್ ಮತ್ತಿತರ ಮಾದಕ ವಸ್ತುಗಳಿಂದ ಮುಕ್ತಗೊಳಿಸಬೇಕು. ಈ ನಿಟ್ಟಿನಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ವಿಧಾನಸಭೆಯ ಅರ್ಜಿ ಸಮಿತಿ ಸದಸ್ಯ ಎಸ್.ಸುರೇಶ್ ಕುಮಾರ್ ಹೇಳಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಅಧಿಕಾರಿಗಳ ಸಭೆ ನಡೆಸಿದ ಸುರೇಶ್ ಕುಮಾರ್, ಶಿಕ್ಷಣ, ಆರೋಗ್ಯ, ಪೊಲೀಸ್, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳು ಡ್ರಗ್ಸ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ನಿರಂತರವಾಗಿ ಜಾಗೃತಿ ವಹಿಸಬೇಕು. ಡ್ರಗ್ಸ್ ವಿರುದ್ಧ ಪ್ರತಿಯೊಬ್ಬರೂ ಹೋರಾಟ ಮಾಡಬೇಕು ಎಂದು ಸಲಹೆ ನೀಡಿದರು.

ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಮಾದಕವಸ್ತು ಮಾರಾಟ ಮತ್ತು ಸೇವನೆ ಮಾಡುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುತ್ತಿದೆ. ಕಳೆದ 3 ವರ್ಷಗಳಲ್ಲಿ ಒಟ್ಟು 101 ಮಾದಕ ವಸ್ತು ಬಳಕೆ ಮತ್ತು ಸೇವನೆ ಪ್ರಕರಣಗಳನ್ನು ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗಿದೆ. ಒಟ್ಟು 92 ಕೆಜಿ ಗಾಂಜಾ ಮತ್ತು ಇತರ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕೆಲ ದಿನಗಳ ಹಿಂದೆ ಹೊರರಾಜ್ಯದ ಮೂವರು ಆರೋಪಿಗಳಿಗೆ ಮಾದಕವಸ್ತು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ 10 ವರ್ಷ ಶಿಕ್ಷೆ ವಿಧಿಸಿದೆ ಎಂದು ಸಭೆಯಲ್ಲಿ ಮಾಹಿತಿ ನೀಡಿದರು.

ಶಾಸಕ ಡಾ. ಮಂತರ್‌ಗೌಡ ಮಾತನಾಡಿ, ಕೊಡಗು ನೆರೆಯ 3 ಜಿಲ್ಲೆಗಳೊಂದಿಗೆ ಗಡಿ ಹಂಚಿಕೊಂಡಿದೆ. ಈ ಹಿನ್ನೆಲೆಯಲ್ಲಿ ಗಡಿ ಪ್ರದೇಶದ ಚೆಕ್‌ಪೋಸ್ಟ್‌ಗಳಲ್ಲಿ ಅಗತ್ಯ ತಪಾಸಣೆ ಮಾಡಬೇಕು. ಕೆಲವು ಪಾರ್ಟಿಗಳ ಮೇಲೂ ಕಣ್ಣಿಡಬೇಕು. ಇದರಿಂದ ಡ್ರಗ್ಸ್ ಪ್ರಕರಣಗಳನ್ನು ತಡೆಗಟ್ಟಬಹುದು. ಚೆಕ್‌ಪೋಸ್ಟ್‌ಗಳಲ್ಲಿ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುವಂತೆ ಸಲಹೆ ನೀಡಿದರು.

ಇಂದಿನಿಂದ ಮಲೆತಿರಿಕೆ ಬೆಟ್ಟದ ದೇವಾಲಯ ವಾರ್ಷಿಕೋತ್ಸವ



ಶ್ರೀ ಮಲೆಮಹದೇಶ್ವರ ದೇವಸ್ಥಾನ

ವಿರಾಜಪೇಟೆ: ವಿರಾಜಪೇಟೆಯ ಮಲೆತಿರಿಕೆ ಬೆಟ್ಟದ ಶ್ರೀ ಮಲೆಮಹದೇಶ್ವರ ದೇವಾಲಯದ ವಾರ್ಷಿಕೋತ್ಸವ ಮಾ.15ರಿಂದ 20ರವರೆಗೆ ಮಗ್ಗುಲ, ಐಮಂಗಲ, ಚೆಂಬೆಬೆಳ್ಳೂರು, ಕುಕ್ಲೂರು ಹಾಗೂ ಮಲೆತಿರಿಕೆ ಕುಂದ್ ಗ್ರಾಮಸ್ಥರು ವಿಜೃಂಭಣೆಯಿಂದ ಆಚರಿಸಲಿದ್ದಾರೆ.

ಬೆಟ್ಟದ ತುದಿಯಲ್ಲಿರುವ 800ಕ್ಕೂ ಹೆಚ್ಚು ವರ್ಷ ಇತಿಹಾಸವಿರುವ ಮಹದೇಶ್ವರ ದೇವಾಲಯದಲ್ಲಿ ಮಾ.15ರಂದು ಮುಂಜಾನೆ ಗಣಪತಿ ಹೋಮದೊಂದಿಗೆ ಉತ್ಸವಕ್ಕೆ ಚಾಲನೆ ನೀಡಲಾಗುವುದು. ಸಂಜೆ 4 ಗಂಟೆಗೆ ಕುಂದಿರ ಮನೆಯಿಂದ ಭಂಡಾರ ಬರಲಿದೆ. ಬಳಿಕ ಕೊಡಿಮರ ನಿಲ್ಲಿಸಲಾಗುವುದು. ರಾತ್ರಿ 8 ಗಂಟೆಗೆ ಮಹಾಪೂಜೆ ನಂತರ ಅನ್ನಸಂತರ್ಪಣೆ ನಡೆಯಲಿದೆ. 16ರಂದು ಬೆಳಗ್ಗೆ 11 ಗಂಟೆಗೆ ನಾಗದೇವರ ಸ್ಥಾನದಲ್ಲಿ ವಿಶೇಷ ಪೂಜೆ ನಡೆಯಲಿದೆ. 17ರಂದು ಬೆಳಗ್ಗೆ 11 ಗಂಟೆಗೆ ಅಯ್ಯಪ್ಪ ದೇವಸ್ಥಾನದಲ್ಲಿ ವಿಶೇಷ ಪೂಜೆ, ರಾತ್ರಿ 8 ಗಂಟೆಗೆ ಇರ್ ಬೊಳಕ್ ನಂತರ ಮಹಾಪೂಜೆ, 18ರಂದು ಮಧ್ಯಾಹ್ನ 12 ಗಂಟೆಗೆ ನೆರಪು, ಎತ್ತ್ ಪೋರಾಟ, ತೆಂಗಿನ ಕಾಯಿಗೆ ಗುಂಡು ಹೊಡೆಯುವುದು, 3 ಗಂಟೆಗೆ ದೇವರು ಹೊರಗೆ ಬರುವುದು. ರಾತ್ರಿ ನಗರದ ಮುಖ್ಯಬೀದಿಗಳಲ್ಲಿ ಮೆರವಣಿಗೆ ನಡೆಯಲಿದೆ.

19ರಂದು ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ, ಸಂಜೆ 6ಕ್ಕೆ ದೇವರ ಜಳಕ–ಅವಭೃತ ಸ್ನಾನ, 20ರಂದು ಬೆಳಗ್ಗೆ 11 ಗಂಟೆಗೆ ಕೊಡಿಮರ ಇಳಿಸುವುದು ನಂತರ ದೇವರಿಗೆ ಮಹಾಪೂಜೆ ನಡೆಯಲಿದೆ ಎಂದು ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ವಟೇರಿರ ಶಂಕರಿ ಪೂವಯ್ಯ, ದೇವತಕ್ಕರಾದ ಕೊಳುವಂಡ ಕಾರ್ಯಪ್ಪ ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವೇಗೌಡರ ಮಾರ್ಗದರ್ಶನದಲ್ಲಿ ಚುನಾವಣೆ

ಲೋಕಸಭಾ ಚುನಾವಣೆ ಸಂಬಂಧ ಇಂದು ಮಂಡ್ಯದಲ್ಲಿ ಜೆಡಿಎಸ್ ಮುಖಂಡರ ಸಭೆ



ಮಂಡ್ಯದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆಯಲಿರುವ ಜೆಡಿಎಸ್ ಮುಖಂಡರ ಸಭೆಯ ಕುರಿತು ಭಾರತೀನಗರ ಸಮೀಪದ ಹನುಮಂತನಗರದಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಪೂರ್ವಭಾವಿ ಸಭೆ ನಡೆಸಿದರು.

ಭಾರತೀನಗರ,ಮಾ.14– ಮುಂಬರುವ ಲೋಕಸಭಾ ಚುನಾವಣೆ ಕುರಿತು ಚರ್ಚಿಸುವ ಸಂಬಂಧ ಮಂಡ್ಯ ಜಿಲ್ಲೆಯ ಮುಖಂಡರ ಸಭೆಯನ್ನು ಮಂಡ್ಯದ ಅಂಬೇಡ್ಕರ್ ಭವನದಲ್ಲಿ ನಾಳೆ(ಶುಕ್ರವಾರ) ಬೆಳಿಗ್ಗೆ 10.30 ಕ್ಕೆ ಆಯೋಜಿಸಲಾಗಿದೆ ಎಂದು ತಿಳಿಸಿದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಲೋಕಸಭಾ ಚುನಾವಣೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಮಾರ್ಗದರ್ಶನದಲ್ಲಿ ನಡೆಯಲಿದೆ ಎಂದರು.

ಹನುಮಂತನಗರದಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಈ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಜಿಲ್ಲೆಯ ಜೆಡಿಎಸ್‌ನ ಎಲ್ಲಾ ಮಾಜಿ ಶಾಸಕರು, ಶಾಸಕರು, ಪಕ್ಷದ ಮುಖಂಡರು ಭಾಗವಹಿಸಲ್ಲಿದ್ದಾರೆ ಎಂದರು.

ಹೆಚ್‌ಡಿಕೆಗೆ ಅದ್ದೂರಿ ಸ್ವಾಗತ : ಸಭೆಗೆ ಆಗಮಿಸುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಅವರನ್ನು ಜಿಲ್ಲೆಯ ಮುಖಂಡರು ಮತ್ತು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅದ್ದೂರಿಯಾಗಿ ಸ್ವಾಗತಿಸುವಂತೆ ಅವರು ಮನವಿ ಮಾಡಿದರು.

ದೇವೇಗೌಡರ ಮಾರ್ಗದರ್ಶನದಲ್ಲಿ ಚುನಾವಣೆ : ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಮಾರ್ಗದರ್ಶನದಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಿಂದ ದೇಶ ಸುಭೀಕ್ಷೆಯಾಗಿ ಅಭಿವೃದ್ಧಿಗೊಳ್ಳಲ್ಲಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದಿಂದ ಜನರು ಈಗಾಗಲೇ ಬೇಸತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತವನ್ನು ಮೆಚ್ಚಿದ್ದಾರೆ. ನಮ್ಮ ವರಿಷ್ಠರ ತೀರ್ಮಾನದಂತೆ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಗೊಂಡಿದೆ. ಇದರಿಂದ ಜೆಡಿಎಸ್ ಪಕ್ಷಕ್ಕೆ ಮತ್ತಷ್ಟು ಬಲ ಬಂದಂತಾಗಿದೆ. ಜಿಲ್ಲೆ ಮತ್ತು ದೇಶದ ಅಭಿವೃದ್ಧಿಗಾಗಿ ಜೆಡಿಎಸ್ ಪಕ್ಷಕ್ಕಾಗಿ ಮತ ನೀಡಬೇಕೆಂದು ಹೇಳಿದರು.

ಪ್ರಯೋಜನಕ್ಕೆ ಬಾರದ ಗ್ಯಾರಂಟಿಗಳು: ರಾಜ್ಯ ಸರ್ಕಾರ ಗ್ಯಾರಂಟಿಗಳ ಆಶ್ವಾಸನೆ ನೀಡಿ ಮತಗಳನ್ನು ಕಸಿಯುವಲ್ಲಿ ಯಶಸ್ವಿಯಾಗಿದೆ ಆದರೆ ಜನಗಳಿಗೆ ಗ್ಯಾರಂಟಿಗಳು ಸಮರ್ಪಕವಾಗಿ ತಲುಪುತ್ತಿಲ್ಲ. ಜೊತೆಗೆ ಗ್ಯಾರಂಟಿಗಳ ಹೆಸರಿನಲ್ಲಿ ರಾಜ್ಯದ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಇದನ್ನು ಜನರು ಮೌನವಾಗಿ ಗಮನಿಸುತ್ತಿದ್ದಾರೆ. ಇದಕ್ಕೆ ಉತ್ತರ ನೀಡಲು ಲೋಕಸಭಾ ಚುನಾವಣೆ ಬಂದಿದೆ. ಈ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷಕ್ಕೆ ಮತ ನೀಡುವ ಮೂಲಕ ದೇಶದ ಅಭಿವೃದ್ಧಿಗಾಗಿ ಮತದಾರು ಮುಂದಾಗಬೇಕೆಂದು ಡಿ.ಸಿ.ತಮ್ಮಣ್ಣ ತಿಳಿಸಿದರು.

ಇದೇ ವೇಳೆ ಮುಖಂಡರಾದ ಸಂತೋಷ್ ತಮ್ಮಣ್ಣ ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಬಿಳಿಯಪ್ಪ, ಡಿಸಿಸಿ ಬ್ಯಾಂಕ್ ನಿರ್ದೇಶಕ ಕಾಳೇಗೌಡ, ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಉಪಾಧ್ಯಕ್ಷ ದೇವರಹಳ್ಳಿ ವೆಂಕಟೇಶ್, ಮುಖಂಡರಾದ ರಾಜಣ್ಣ, ಡಿ.ಹೊನ್ನೇಗೌಡ, ವೆಂಕಟೇಶ್, ವಿಶ್ವ ಅರವಿಂದ್, ಬೊಮ್ಮೇಗೌಡ, ಹನುಮೇಗೌಡ, ಸಿದ್ದರಾಜು, ಬಸವರಾಜು ಇದ್ದರು.

ಅರ್ಜಿ ಆಹ್ವಾನ

ಮಂಡ್ಯ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಎಸ್‌ಟಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಮಾಧ್ಯಮದಲ್ಲಿ ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಆಫ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸ: 08232–221157 ಅನ್ನು ಸಂಪರ್ಕಿಸಬಹುದು.

ಕೊಳಚೆ ಪ್ರದೇಶದ ಪುನರ್ವಸತಿಗಾಗಿ 10 ಎಕರೆ ಸರ್ಕಾರಿ ಜಮೀನನ್ನು ಕಾಯ್ದಿರಿಸಿ: ಡಾ.ಕುಮಾರ



ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ ಮಾತನಾಡುತ್ತಿರುವುದು.

ಮಂಡ್ಯ,ಮಾ.14– ಮಂಡ್ಯ ನಗರದಲ್ಲಿ 24 ಕೊಳಚೆ ಪ್ರದೇಶಗಳಿದ್ದು, ಹೆಚ್ಚುವರಿಯಾಗಿ ಘೋಷಣೆಯಾಗಿಲ್ಲದ ಕೊಳಚೆ ಪ್ರದೇಶದ ಗುಣಲಕ್ಷಣಗಳನ್ನು ಹೊಂದಿರುವ ಹಲವು ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ನಿವೇಶನ ಮತ್ತು ವಸತಿ ರಹಿತರಿಗೆ ಪುನರ್ವಸತಿ ಕಲ್ಪಿಸಲು ಮಂಡ್ಯ ನಗರದ ಸುತ್ತ 10 ಎಕರೆ ಸರ್ಕಾರಿ ಜಮೀನನ್ನು ಕಾಯ್ದಿರಿಸಲು ತಹಶೀಲ್ದಾರ್ ಶಿವಕುಮಾರ್ ಬಿರಾದರ್ ಅವರಿಗೆ ಜಿಲ್ಲಾಧಿಕಾರಿ ಡಾ. ಕುಮಾರ ಸೂಚಿಸದ್ದಾರೆ.

ಇಂದು ಜಿಲ್ಲಾಧಿಕಾರಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ನಡೆದ ಜಿಲ್ಲಾ ವ್ಯಾಪ್ತಿಯ ಕೊಳಚೆ ಪ್ರದೇಶಗಳ ಕುಂದು ಕೊರತೆ ಸಭೆಯಲ್ಲಿ ಅವರು ಮಾತನಾಡಿದರು.

ನಗರದಲ್ಲಿರುವ ಲ್ಯಾಂಡ್ ಆರ್ಮಿ ಕೊಳಚೆ ಪ್ರದೇಶ, ಕಾಳಪ್ಪ ಬಡಾವಣೆ, ಹೊಸಹಳ್ಳಿ ಗುರುಮಠ ಕೊಳಚೆ ಪ್ರದೇಶ, ಹಾಲಹಳ್ಳಿ ಟ್ಯಾಂಕ್ ಬೆಡ್ ನ್ಯೂ ತಮಿಳ್ ಕಾಲೋನಿ, ಕಾಳಿಕಾಂಬ ಸ್ಲಂ ಪ್ರದೇಶ, ಸ್ಲಾಟರ್ ಹೌಸ್ ಸ್ಲಂ, ವಿವೇಕಾನಂದ ಬಡಾವಣೆ, ಮದ್ದೂರು ತಮಿಳ್ ಕಾಲೋನಿ, ಇಂದಿರಾ ಬಡಾವಣೆ, ವೇಣುಗೋಪಾಲ ಶಿಶು ವಿಹಾರ(ಗೂಬೆಹಳ್ಳ) ಕೊಳಚೆ ಪ್ರದೇಶ, ಹೊನ್ನಯ್ಯ ಬಡಾವಣೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಎಚ್.ಎಲ್. ನಾಗರಾಜು, ನಗರಸಭೆ ಪೌರಾಯುಕ್ತ ಆರ್. ಮಂಜುನಾಥ್, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಸಹಾಯಕ ಕಾರ್ಯ ಪಾಲಕ ಅಭಿಯಂತರರು ಜವಹಾರ್ ಜೋಗಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಎಚ್.ಎಸ್. ನಿರ್ಮಲಾ ಅವರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕುಡಿಯುವ ನೀರು ಸಮಸ್ಯೆ ಪರಿಹಾರಕ್ಕಾಗಿ ಸಹಾಯವಾಣಿ

ಮಂಡ್ಯ, ಮಾ.14– ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಕುರಿತು ಸ್ವೀಕೃತವಾಗುವ ದೂರುಗಳನ್ನು ದಾಖಲಿಸಲು ಮಂಡ್ಯ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ 24X7 ಕಂಟ್ರೋಲ್ ರೂಮ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕುಡಿಯುವ ನೀರಿನ ಸಮಸ್ಯೆ ದೂರು ಇದ್ದಲ್ಲಿ ಸಹಾಯವಾಣಿ ಸಂಖ್ಯೆ 08232–229624ಕ್ಕೆ ಕರೆ ಮಾಡಿ ದೂರು ದಾಖಲಿಸಬಹುದಾಗಿದೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಮರ್ಪಕ ಕುಡಿಯುವ ನೀರಿನ ಮೇಲ್ವಿಚಾರಣೆಗಾಗಿ ಜಿಲ್ಲಾ ಪಂಚಾಯಿತಿಯ ವತಿಯಿಂದ ತಾಲೂಕಿಗೆ ಒಬ್ಬರಂತೆ ತಾಪಂ ಸಿಇಒ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳನ್ನು ನೇಮಕ ಮಾಡಿದ್ದು, ಕೃಷ್ಣರಾಜಪೇಟೆ ಕಾರ್ಯನಿರ್ವಾಹಕ ಅಧಿಕಾರಿಗಳ ಮೊ.ಸಂ. 9480872105, ಸಹಾಯಕ ಕಾರ್ಯಪಾಲಕ ಅಭಿಯಂತರರು(RWS) ಮೊ.ಸಂ.9632769002, ಮದ್ದೂರು ಕಾರ್ಯನಿರ್ವಾಹಕ ಅಧಿಕಾರಿಗಳ ಮೊ. ಸಂ.9480872110, ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೊ.ಸಂ. 9448767960, ಮಳವಳ್ಳಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೊ.ಸಂ. 9480872115, ಸಹಾಯಕ ಕಾರ್ಯಪಾಲಕ ಅಭಿಯಂತರರು ಮೊ.ಸಂ.807386903, ಮಂಡ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೊ.ಸಂ.9480872100, ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೊ.ಸಂ.8431017502, ನಾಗಮಂಗಲ ಕಾರ್ಯನಿರ್ವಾಹಕ ಅಧಿಕಾರಿಗಳ ಮೊ.ಸಂ.9480872120, ಸಹಾಯಕ ಕಾರ್ಯಪಾಲಕ ಅಭಿಯಂತರರು ಮೊ.ಸಂ.7899105505, ಪಾಂಡವಪುರ ಕಾರ್ಯನಿರ್ವಾಹಕ ಅಧಿಕಾರಿಗಳ ಮೊ.ಸಂ. 9480872125, ಸಹಾಯಕ ಕಾರ್ಯಪಾಲಕ ಅಭಿಯಂತರರು, ಮೊ.ಸಂ. 9900568915, ಶ್ರೀರಂಗಪಟ್ಟಣ ಕಾರ್ಯನಿರ್ವಾಹಕ ಅಧಿಕಾರಿಗಳ ಮೊ.ಸಂ.9480872130 ಸಹಾಯವಾಣಿಗಳಾಗಿದ್ದು, ಇವ್ರಗಳನ್ನು ಸಂಪರ್ಕಿಸಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸಮಸ್ಯೆಗಳಿಗೆ ಪರಿಹಾರವನ್ನು ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ರಂಗಮಂದಿರ ಕಾಮಗಾರಿಗೆ ಭೂಮಿಪೂಜೆ



ಚಾಮರಾಜನಗರ ತಾಲೂಕಿನ ಸಿದ್ದಯ್ಯನಪುರ ಗ್ರಾಮದಲ್ಲಿ 8 ಲಕ್ಷ ರೂ. ವೆಚ್ಚದಲ್ಲಿ ರಂಗಮಂದಿರ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ಚಾಮರಾಜನಗರ, ಮಾ.14–ತಾಲೂಕಿನ ಸಿದ್ದಯ್ಯನಪುರ ಗ್ರಾಮದಲ್ಲಿ 8 ಲಕ್ಷ ರೂ. ವೆಚ್ಚದಲ್ಲಿ ರಂಗಮಂದಿರ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ಸಿದ್ದಯ್ಯನಪುರ ಗ್ರಾಮದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ. ರಸ್ತೆ ಕುಡಿಯುವ ನೀರು, ಚರಂಡಿ, ಸಮುದಾಯ ಭವನ, ಬೀದಿದೀಪ, ಸೇತುವೆ ನಿರ್ಮಾಣ, ರೈತರಿಗೆ ಗಂಗಾ ಕಲ್ಯಾಣ, ಆಶ್ರಯ ಮನೆಗಳು ಹೀಗೆ ಹಲವಾರು ಕಾಮಗಾರಿಗಳನ್ನು ನನ್ನ ಅವಧಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂದರು.

ಮುಂದಿನ ದಿನಗಳಲ್ಲೂ ಎಲ್ಲೆಲ್ಲಿ ರಸ್ತೆಗಳು, ಕುಡಿಯುವ ನೀರಿನ ಸಮಸ್ಯೆಗಳಿವೆ ಅಲ್ಲೆಲ್ಲಾ ಭೇಟಿ ನೀಡಿ, ಸಮಸ್ಯೆ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಉಪಾಧ್ಯಕ್ಷ ಬಸವಣ್ಣ, ಸದಸ್ಯರಾದ ಸೋಮಣ್ಣ, ಶೈಲಜಾ ಗೋವಿಂದರಾಜು, ಮಂಜು, ಮಹದೇವಮ್ಮ, ರೇಖಾ, ಯಜಮಾನರಾದ ಮೂರ್ತಿ, ಪಾಪಣ್ಣ ಬಸವಯ್ಯ, ಮುಖಂಡರಾದ ಹನುಮಂತು, ಶಿವಬಸವಣ್ಣ, ರಮೇಶ್, ನಂಜುಂಡಸ್ವಾಮಿ, ನೀರು ಬಳಕೆದಾರರ ಸಂಘದ ಅಧ್ಯಕ್ಷ ಗೋವಿಂದರಾಜು, ನಿರ್ಮಿತಿ ಕೇಂದ್ರದ ಇಂಜಿನಿಯರ್ ಭೀಮ್ ಸಾಗರ್ ಮತ್ತಿತರರಿದ್ದರು.

ಒಳ ಸಭಾಂಗಣ ನಿರ್ಮಾಣಕ್ಕೆ ಚಾಲನೆ: ನಗರದ ಭುವನೇಶ್ವರಿ ವೃತ್ತದ ಶಿಕ್ಷಕರ (ಗುರು) ಭವನದ ಒಳ ಸಭಾಂಗಣ ನಿರ್ಮಾಣಕ್ಕೆ 5 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು. ನಂತರ ಮಾತನಾಡಿದ ಶಾಸಕರು, ಶಿಕ್ಷಕರ ಭವನಕ್ಕೆ ಒಳ ಸಭಾಂಗಣ ಇಲ್ಲದೆ ಸಭೆಗಳನ್ನು ನಡೆಸಲು ಸಾಕಷ್ಟು ಸಮಸ್ಯೆಯುಂಟಾಗುತ್ತಿದೆ. ಶಿಕ್ಷಕರೆಲ್ಲರೂ ಮನವಿ ಮಾಡಿದ ಹಿನ್ನೆಲೆಯಲ್ಲಿ ಈ ಕಾಮಗಾರಿ ನಡೆಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯೆ ಕಲಾವತಿ, ಬಿಇಒ ಸೋಮಣ್ಣೇಗೌಡ, ಜಿಲ್ಲಾ ಪ್ರಾಥಮಿಕ ಶಿಕ್ಷರ ಸಂಘದ ಅಧ್ಯಕ್ಷ ಮಾದಪ್ಪ, ಗೌರವಾಧ್ಯಕ್ಷ ಎಂ.ಡಿ.ಮಹದೇವಸ್ವಾಮಿ, ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ರಾಮಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಮಹದೇವಸ್ವಾಮಿ, ಜಿಲ್ಲಾ ಸಹಕಾರ್ಯದರ್ಶಿ ವಾಸು, ಖಜಾಂಚಿ ಕೃಷ್ಣಮೂರ್ತಿ, ಸಂಘಟನಾ ಕಾರ್ಯದರ್ಶಿ ಮಲ್ಲಿಕಾರ್ಜುನಾ, ನಿರ್ಮಿತಿ ಕೇಂದ್ರ ಭೀಮಸಾಗರ್ ಮತ್ತಿತರರಿದ್ದರು.

ನಾಳೆ ಎಸ್‌ಟಿ ಮೋರ್ಚಾ ಮುನ್ನಡೆ ಸಮಾವೇಶ

ಚಾಮರಾಜನಗರ: ಬಿಜೆಪಿ ಎಸ್‌ಟಿ ಮೋರ್ಚಾದ ಮುನ್ನಡೆ ಸಮಾವೇಶವನ್ನು ಮಾ.16ರಂದು ಹಮ್ಮಿಕೊಳ್ಳಲಾಗಿದೆ ಎಂದು ಮೋರ್ಚಾದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ನಗರದ ಅಂಬೇಡ್ಕರ್ ಭವನದಲ್ಲಿ ಬೆಳಗ್ಗೆ 11 ಗಂಟೆ ಸಮಾವೇಶ ನಡೆಯಲಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ. ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಶ್ರೀರಾಮುಲು, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ರಾಮಚಂದ್ರ ಇನ್ನಿತರ ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಚಾಮರಾಜನಗರಕ್ಕೆ ಕೈ ಅಭ್ಯರ್ಥಿ ಯಾರು?

ಲೋಕಸಭಾ ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಕುತೂಹಲ

ಸಿದ್ದಲಿಂಗಸ್ವಾಮಿ






ಮಹದೇವಪ್ಪ ದರ್ಶನ್ ಸುನಿಲ್ ಬೋಸ್ ನಂಜುಂಡಸ್ವಾಮಿ

ಚಾಮರಾಜನಗರ, ಮಾ.14–ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯನ್ನು ಈಗಾಗಲೇ ಘೋಷಿಸಿದ್ದು, ಕಾಂಗ್ರೆಸ್ ಅಭ್ಯರ್ಥಿ ಯಾರಾಗುತ್ತಾರೆ ಎಂದು ಪಕ್ಷದ ಕಾರ್ಯಕರ್ತರಲ್ಲಿ ತೀವ್ರ ಕುತೂಹಲ ಮೂಡಿಸಿದೆ.

ಬಿಜೆಪಿ ಬುಧವಾರ ಪ್ರಕಟಿಸಿದ ರಾಜ್ಯದ 20 ಕ್ಷೇತ್ರಗಳಲ್ಲಿ ಚಾಮರಾಜನಗರಕ್ಕೆ ಮಾಜಿ ಶಾಸಕ ಎಸ್.ಬಾಲರಾಜು ಹೆಸರನ್ನು ಘೋಷಿಸಿದೆ. ಆದರೆ, ಕಾಂಗ್ರೆಸ್ ತನ್ನ ಹುರಿಯಾಳನ್ನು ಇನ್ನೂ ಅಂತಿಮಗೊಳಿಸಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬುದು ಕ್ಷೇತ್ರಾದ್ಯಂತ ಚರ್ಚೆಗೆ ಗ್ರಾಸವಾಗಿದೆ. ಇದು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಮತ್ತು ರಾಜಕೀಯಾಸಕ್ತರಲ್ಲಿ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

ಕಾಂಗ್ರೆಸ್ ಟಿಕೆಟ್ ಪಡೆಯಲು 7–8 ಆಕಾಂಕ್ಷಿಗಳು ಬಯಸಿದ್ದು, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್, ಮಾಜಿ ಸಚಿವ ಬಿ.ಸೋಮಶೇಖರ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಮುಖಂಡರಾದ ಡಿ.ಎನ್.ನಟರಾಜು, ಕಿರಣ್, ರಂಗಸ್ವಾಮಿ ಟಿಕೆಟ್ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಪಕ್ಷದ ಹೈಕಮಾಂಡ್ ಕ್ಷೇತ್ರಕ್ಕೆ ವೀಕ್ಷಕರಾಗಿ ಸಚಿವ ದಿನೇಶ್ ಗುಂಡೂರಾವ್ ಅವರನ್ನು ನೇಮಿಸಿತ್ತು. ನಂತರ ಇವರು ಕ್ಷೇತ್ರಕ್ಕೆ ಆಗಮಿಸಿ ಪಕ್ಷದ ಎಲ್ಲಾ ಆಕಾಂಕ್ಷಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಅಭಿಪ್ರಾಯ ಸಂಗ್ರಹಿಸಿದ್ದರು. ಆದರೆ, ಹೈಕಮಾಂಡ್‌ಗೆ ಸಚಿವ ಎಚ್.ಸಿ.ಮಹದೇವಪ್ಪ, ಸುನೀಲ್ ಬೋಸ್ ಹಾಗೂ ಜಿ.ಎನ್. ನಂಜುಂಡಸ್ವಾಮಿ ಅವರ ಹೆಸರನ್ನು ಶಿಫಾರಸ್ಸು ಮಾಡಲಾಗಿದೆ ಎನ್ನಲಾಗಿದೆ.

ಈ ಪೈಕಿ ಎಚ್.ಸಿ.ಮಹದೇವಪ್ಪ ಅವರು ಸ್ಪರ್ಧೆಗೆ ಸುತರಾಂ ಒಪ್ಪುತ್ತಿಲ್ಲ ಎನ್ನಲಾಗುತ್ತಿದ್ದು, ತಮ್ಮ ಪುತ್ರ ಸುನೀಲ್ ಬೋಸ್‌ಗೆ ಟಿಕೆಟ್ ನೀಡುವಂತೆ ಬೇಡಿಕೆ ಮುಂದಿಟ್ಟಿದ್ದಾರೆ ಎನ್ನಲಾಗಿದೆ. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ದಿ.ಆರ್.ಧ್ರುವನಾರಾಯಣ್ ಅವರ ಪುತ್ರ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಸ್ಪರ್ಧಿಸಲಿದ್ದಾರೆ ಎಂಬ ಮಾತುಗಳು ಕೇಳಲಾರಂಭಿಸಿದೆ. ಆದರೆ, ಇದಕ್ಕೆ ದರ್ಶನ್ ಒಪ್ಪಿಗೆ ಸೂಚಿಸಿಲ್ಲ ಎನ್ನಲಾಗಿದೆ. ಪಕ್ಷದ ವರಿಷ್ಠರ ಒಲವು ದರ್ಶನ್ ಅವರ ಮೇಲಿದ್ದು, ಅವರ ಮನವೊಲಿಸುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಪಕ್ಷದ ವರಿಷ್ಠರ ಮಾತಿಗೆ ದರ್ಶನ್ ಒಪ್ಪಿಗೆ ಸೂಚಿಸಿದರೆ ಅವರೇ ಅಭ್ಯರ್ಥಿ ಆಗುವುದರಲ್ಲಿ ಅನುಮಾನವಿಲ್ಲ. ಅವರು ಒಪ್ಪದಿದ್ದರೆ ಸುನೀಲ್ ಬೋಸ್ ಅಥವಾ ಜಿ.ಎನ್.ನಂಜುಂಡಸ್ವಾಮಿ ಅಭ್ಯರ್ಥಿಗಳಾಗಬಹುದು ಎಂದು ಕಾಂಗ್ರೆಸ್ ಮುಖಂಡರು ಹೇಳುತ್ತಿದ್ದಾರೆ.

ಗೆಲುವನ್ನೇ ಮಾನದಂಡವಾಗಿಸಿಕೊಂಡಿರುವ ಪಕ್ಷದ ವರಿಷ್ಠರು ಎಲ್ಲವನ್ನು ಅಳೆದು ತೂಗಿ ಅಭ್ಯರ್ಥಿಯನ್ನು 2–3 ದಿನಗಳಲ್ಲಿ ಪ್ರಕಟಿಸಲಿದ್ದಾರೆ ಎಂದು ಹೇಳಲಾಗುತ್ತಿದೆ.

> “ಪಕ್ಷದ ವರಿಷ್ಠರು ಅಭ್ಯರ್ಥಿ ಯಾರಾಗಬೇಕು ಎಂಬುದನ್ನು ನಿರ್ಧರಿಸಲಿದ್ದಾರೆ. 2–3 ದಿನಗಳಲ್ಲಿ ಅಭ್ಯರ್ಥಿಯ ಹೆಸರನ್ನು ಪ್ರಕಟಿಸುವ ಸಾಧ್ಯತೆ ಇದೆ. ಗೆಲುವೇ ಮಾನದಂಡವಾಗಿರುವುದರಿಂದ ಸೂಕ್ತ ಅಭ್ಯರ್ಥಿ ಆಯ್ಕೆ ಆಗಲಿದ್ದಾರೆ.
> –ಬಿ.ಕೆ.ರವಿಕುಮಾರ್, ಚಾಮರಾಜನಗರ ಜಿಲ್ಲಾ ಉಪಾಧ್ಯಕ್ಷ

ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಅರ್ಜಿ ಆಹ್ವಾನ

ಚಾಮರಾಜನಗರ, ಮಾ.14–ಗ್ರಾಮೀಣ ಪುನರ್ವಸತಿ ಯೋಜನೆಯಡಿ ಹನೂರು ತಾಲೂಕಿನ ಬೈಲೂರು, ಚಿಕ್ಕಮಾಲಾಪುರ, ಲೊಕ್ಕನಹಳ್ಳಿ, ಗೋಪಿನಾಥಂ, ಕೌದಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

18 ರಿಂದ 45 ವರ್ಷವಾಗಿರಬೇಕು. ಗ್ರಾಪಂ ವ್ಯಾಪ್ತಿಯಲ್ಲಿ ಸಂಚರಿಸಿ ಮಾಹಿತಿ, ಸೌಲಭ್ಯ ಕಲ್ಪಿಸಲು ಸಮರ್ಥರಾಗಿರಬೇಕು. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದವರಿಗೆ ಆದ್ಯತೆ ನೀಡಲಾಗುವುದು. ಯುಡಿಐಡಿ ಕಾರ್ಡ್ ಲಗತ್ತಿಸಬೇಕು. ತಹಶೀಲ್ದಾರ್‌ರಿಂದ ವಾಸಸ್ಥಳ ದೃಢೀಕರಣ ಪತ್ರ ಲಗತ್ತಿಸಬೇಕು. 9 ಸಾವಿರ ರೂ. ಗೌರವಧನ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುವುದು.

ಹೆಚ್ಚು ವಿಕಲಚೇತನರಾಗಿರಬಾರದು. ಈ ನೇಮಕಾತಿ ಒಂದು ವರ್ಷವಿದ್ದು, ನಂತರ ಮರು ಪರಿಶೀಲಿಸಲಾಗುವುದು. ಮರು ಪರಿಶೀಲನೆಯಲ್ಲಿ ಕೆಲಸ ಕಾರ್ಯಗಳ ನಿರ್ವಹಣೆ, ವಿಕಲಚೇತನರೊಂದಿಗೆ ಸಂಬಂಧ, ವಿವಿಧ ಇಲಾಖೆ, ಸ್ವಯಂ ಸೇವಾ ಸಂಸ್ಥೆ, ಸಮುದಾಯದೊಂದಿಗಿನ ಸಂಬಂಧಗಳನ್ನು ಪರಿಗಣಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆಸಕ್ತ ವಿಕಲಚೇತನ ವ್ಯಕ್ತಿಗಳು ಅರ್ಜಿಯೊಂದಿಗೆ ಅಗತ್ಯ ದಾಖಲಾತಿಗಳನ್ನು ಮಾ.30ರೊಳಗೆ ಸಂಬಂಧಿಸಿದ ತಾಲೂಕು ಪಂಚಾಯಿತಿಯ ಎಂಆರ್‌ಡಬ್ಲ್ಯು ಅವರಿಗೆ ಸಲ್ಲಿಸಬೇಕು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಬಿಐ ಚುನಾವಣಾ ಬಾಂಡ್‌ಗಳ ಡೇಟಾ; ಇಸಿಐ ವೆಬ್‌ಸೈಟ್‌ನಲ್ಲಿ ಬಹಿರಂಗ

ನವದೆಹಲಿ, ಮಾ.14– ಭಾರತೀಯ ಚುನಾವಣಾ ಆಯೋಗ (ಇಸಿಐ) ಗುರುವಾರ ತನ್ನ ವೆಬ್‌ಸೈಟ್‌ನಲ್ಲಿ ಚುನಾವಣಾ ಬಾಂಡ್‌ಗಳ ಡೇಟಾವನ್ನು ಬಹಿರಂಗಪಡಿಸಿದೆ. ಎಸ್‌ಬಿಐ ಮಂಗಳವಾರ ಚುನಾವಣಾ ಬಾಂಡ್‌ಗಳ ಡೇಟಾವನ್ನು ಆಯೋಗಕ್ಕೆ ಹಸ್ತಾಂತರಿಸಿತ್ತು. ಸುಪ್ರೀಂ ಕೋರ್ಟ್ ಆದೇಶವನ್ನು ಅನುಸರಿಸಿ, ಇಸಿಐ ತನ್ನ ವೆಬ್‌ಸೈಟ್‌ನಲ್ಲಿ ಡೇಟಾವನ್ನು ಅಪ್‌ಲೋಡ್ ಮಾಡಿದೆ.

ಸುಪ್ರೀಂಕೋರ್ಟ್ ಇದೇ ವರ್ಷದ ಫೆಬ್ರವರಿ 15 ಮತ್ತು ಮಾರ್ಚ್ 11 ರಂದು ನೀಡಿದ ಆದೇಶದ ಅನುಸಾರ, ಎಸ್ ಬಿಐ ಚುನಾವಣಾ ಬಾಂಡ್ ಗಳ ಬಗ್ಗೆ ಮಾಹಿತಿಯನ್ನು ಒದಗಿಸಿದೆ. ಮಾರ್ಚ್ 12 ರಂದು ಎಸ್ ಬಿಐ ಚುನಾವಣಾ ಆಯೋಗಕ್ಕೆ ಚುನಾವಣಾ ಬಾಂಡ್ ಗಳ ಬಗ್ಗೆ ಮಾಹಿತಿ ನೀಡಿತ್ತು. ಆಯೋಗ ಇಂದು ತನ್ನ ವೆಬ್‌ಸೈಟ್‌ನಲ್ಲಿ ಆ ಮಾಹಿತಿಯನ್ನು ಪ್ರಕಟಿಸಿದೆ. ಎಸ್ ಬಿಐನಿಂದ ಪಡೆದ ಮಾಹಿತಿಯನ್ನು url: https://www.eci.gov.in/candidate-politicalparty "ನಲ್ಲಿ ಲಭ್ಯವಿದೆ ಎಂದು ಚುನಾವಣಾ ಆಯೋಗ ಗುರುವಾರ ಹೇಳಿಕೆಯಲ್ಲಿ ತಿಳಿಸಿದೆ.

ಚುನಾವಣಾ ಬಾಂಡ್‌ಗಳನ್ನು ರಿಡೀಮ್ ಮಾಡಿದ ಪಕ್ಷಗಳಲ್ಲಿ ಬಿಜೆಪಿ, ಕಾಂಗ್ರೆಸ್, ಎಐಎಡಿಎಂಕೆ, ಬಿಆರ್‌ಎಸ್, ಶಿವಸೇನೆ, ಟಿಡಿಪಿ, ವೈಎಸ್‌ಆರ್ ಕಾಂಗ್ರೆಸ್, ಡಿಎಂಕೆ, ಜೆಡಿಎಸ್, ಎನ್‌ಸಿಪಿ, ತೃಣಮೂಲ ಕಾಂಗ್ರೆಸ್, ಜೆಡಿಯು, ಆರ್‌ಜೆಡಿ, ಎಎಪಿ ಮತ್ತು ಸಮಾಜವಾದಿ ಪಕ್ಷ ಸೇರಿವೆ.

ಚುನಾವಣಾ ಸಮಿತಿ ಅಪ್‌ಲೋಡ್ ಮಾಡಿದ ಮಾಹಿತಿಯ ಪ್ರಕಾರ, ಚುನಾವಣಾ ಬಾಂಡ್‌ಗಳ ಖರೀದಿದಾರರಲ್ಲಿ ಗ್ರಾಸಿಮ್ ಇಂಡಸ್ಟ್ರೀಸ್, ಮೇಘಾ ಇಂಜಿನಿಯರಿಂಗ್, ಪಿರಮಲ್ ಎಂಟರ್‌ಪ್ರೈಸಸ್, ಟೊರೆಂಟ್ ಪವರ್, ಭಾರ್ತಿ ಏರ್‌ಟೆಲ್, ಡಿಎಲ್‌ಎಫ್ ಕಮರ್ಷಿಯಲ್ ಡೆವಲಪರ್ಸ್, ವೇದಾಂತ ಲಿಮಿಟೆಡ್, ಅಪೊಲೊ ಟೈರ್ಸ್, ಲಕ್ಷ್ಮಿ ಮಿತ್ತಲ್, ಎಡೆಲ್‌ವೀಸ್, ಪಿವಿಆರ್, ಕೆವೆಂಟರ್, ಸುಲಾ ವೈನ್, ವೆಲ್ಸ್ಪನ್ ಮತ್ತು ಸನ್ ಫಾರ್ಮಾ ಸೇರಿವೆ.

ಒಂದನೇ ಪುಟದಿಂದ

ಬಿಜೆಪಿಯಲ್ಲಿ ಬೇಸರ

ಯಡಿಯೂರಪ್ಪನವರಿಗೆ ಇದ್ದಂತಹ ಹಠ ನನ್ನ ಮಗನಿಗೆ ಟಿಕೆಟ್ ಕೊಡಿಸಲು ಯಾಕೆ ಇರಲಿಲ್ಲ ಎಂದು ಪ್ರಶ್ನಿಸಿದರು. ನನ್ನ ಮಗನನ್ನು ಎಂಎಲ್‌ಎ ಮಾಡುತ್ತೇವೆ ಎನ್ನುತ್ತಿದ್ದಾರೆ. ಅದನ್ನು ನಂಬುವುದಾದರೂ ಹೇಗೆ? ಇದು ಮೂಗಿಗೆ ತುಪ್ಪ ಸವರುವ ಕೆಲಸ. ನಾಳೆ ಸಂಜೆ ನನ್ನ ಬೆಂಬಲಿಗರು ಸಭೆ ಕರೆದಿದ್ದಾರೆ. ಎಲ್ಲಾ ವರ್ಗದ ಜನರೂ ನನ್ನನ್ನು ಶಿವಮೊಗ್ಗದಲ್ಲಿ ಪಕ್ಷೇತರವಾಗಿ ಸ್ಪರ್ಧಿಸುವಂತೆ ಒತ್ತಡ ಹೇರುತ್ತಿದ್ದಾರೆ. ನಾಳಿನ ಸಭೆಯ ನಂತರ ನನ್ನ ತೀರ್ಮಾನವನ್ನು ತಿಳಿಸುತ್ತೇನೆ ಎಂದು ಈಶ್ವರಪ್ಪ ಹೇಳಿದರು.

ಮಾಧುಸ್ವಾಮಿ ನಡೆ ಕುತೂಹಲ: ತುಮಕೂರು ಟಿಕೆಟ್ ಬಯಸಿದ್ದ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ತೀವ್ರ ಅಸಮಾಧಾನ ಹೊರ ಹಾಕಿದ್ದಾರೆ. ಸ್ಥಳೀಯರಿಗೆ ಟಿಕೆಟ್ ನೀಡಬೇಕೆಂಬ ಒತ್ತಾಯವಿದೆ. ಆದರೆ ಹೊರಗಿನವರಾದ ವಿ.ಸೋಮಣ್ಣ ಅವರಿಗೆ ಟಿಕೆಟ್ ನೀಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಹಿಂದೆಯೇ ಮಾಧುಸ್ವಾಮಿ, ತುಮಕೂರಿನಲ್ಲಿ ಸ್ಥಳೀಯರಿಗೆ ಟಿಕೆಟ್ ನೀಡಬೇಕು. ಹೊರಗಿನವರಿಗೆ ಟಿಕೆಟ್ ನೀಡಿದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಆದಂತಹ ಸ್ಥಿತಿಯೇ ಆಗಲಿದೆ ಎಂದು ಎಚ್ಚರಿಕೆ ನೀಡಿದ್ದರು. ಇದೀಗ ಮಾಧುಸ್ವಾಮಿ ನಡೆ ಕುತೂಹಲ ಕೆರಳಿಸಿದೆ.

ಶೆಟ್ಟರ್ ಬೇಸರ: ಹಾವೇರಿ ಅಥವಾ ಧಾರವಾಡ ಟಿಕೆಟ್ ಬಯಸಿದ್ದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಇದೀಗ ಇವೆರಡೂ ಕ್ಷೇತ್ರಗಳಿಗೂ ಬೇರೆ ಅಭ್ಯರ್ಥಿಗಳು ಘೋಷಣೆಯಾದ ಹಿನ್ನೆಲೆಯಲ್ಲಿ ಅಸಮಾಧಾನಗೊಂಡಿದ್ದಾರೆ. ಅವರ ಹೆಸರು ಬೆಳಗಾವಿ ಕ್ಷೇತ್ರಕ್ಕೆ ಪರಿಗಣಿಸಲಾಗಿದ್ದು, ಚರ್ಚೆಯಲ್ಲಿದೆ ಎಂದು ಹೇಳಲಾಗುತ್ತಿದ್ದರೂ, ಶೆಟ್ಟರ್ ಅದನ್ನು ಒಪ್ಪುವ ಪರಿಸ್ಥಿತಿಯಲ್ಲಿಲ್ಲ. ಹಾವೇರಿ ಮತ್ತು ಧಾರವಾಡ ಕ್ಷೇತ್ರಗಳಿಗೆ ನನ್ನ ಹೆಸರು ಇತ್ತು ಈಗ ಆ ಎರಡೂ ಕ್ಷೇತ್ರಗಳಿಗೂ ಬೇರೆಯವರನ್ನು ಘೋಷಿಸಿದ್ದಾರೆ. ಮುಂದೆ ಏನು ಎಂಬುದನ್ನು ನೋಡೋಣ ಎಂದು ಶೆಟ್ಟರ್ ಸುದ್ದಿಗಾರರಿಗೆ ತಿಳಿಸಿದರು.

ಸಿ.ಟಿ.ರವಿ ಅಸಮಾಧಾನ: ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಪ್ರಬಲ ಆಕಾಂಕ್ಷಿಯಾಗಿದ್ದ ಮಾಜಿ ಸಚಿವ ಸಿ.ಟಿ.ರವಿ ತೀವ್ರ ಅಸಮಾಧಾನಗೊಂಡಿದ್ದು, ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಿ ವಿಪಕ್ಷ ನಾಯಕ ಸ್ಥಾನ ನೀಡುವ ಭರವಸೆ ಕೊಡಲಾಗಿದೆ ಎಂದು ಹೇಳಲಾಗುತ್ತಿದೆಯಾದರೂ, ಸಿ.ಟಿ.ರವಿಯವರ ಅಸಮಾಧಾನ ಶಮನವಾಗಿಲ್ಲ ಎಂದು ಹೇಳಲಾಗುತ್ತಿದೆ.

ಕೊಡುಗೆ ನೀಡಲು ರಾಜಕೀಯಕ್ಕೆ ಬಂದಿದ್ದೇನೆ

ಮಾಡಿದೆ ಎಂದರು. ತಾಯಿ ಚಾಮುಂಡೇಶ್ವರಿ ಮತ್ತು ನನ್ನ ತಾಯಿಯವರ ಆಶೀರ್ವಾದದೊಂದಿಗೆ ರಾಜಕೀಯಕ್ಕೆ ಪ್ರವೇಶಿಸಿದ್ದೇನೆ. ಮೈಸೂರು–ಕೊಡಗು ಕ್ಷೇತ್ರದಲ್ಲಿ ಈ ಹಿಂದೆ ಅನೇಕರು ಕೊಡುಗೆ ನೀಡಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆ ಹೇಳಬೇಕು. ಅವರು ಅಡಿಪಾಯ ಹಾಕಿದ್ದಾರೆ. ಭವಿಷ್ಯದಲ್ಲಿ ಅಭಿವೃದ್ಧಿ ಕೆಲಸ ಮುಂದುವರೆಸಿ, ನನ್ನದೇ ಆದ ಗುರುತು ಒತ್ತಲು ಇಚ್ಛಿಸಿದ್ದೇನೆ. ಜೊತೆಗೆ ಕಾರ್ಯಕರ್ತರ ಸಹಕಾರ ಇದ್ದರೆ ಮಾತ್ರ ಯಶಸ್ವಿಯಾಗಲು ಸಾಧ್ಯ ಎಂದು ಕಾರ್ಯಕರ್ತರ ಸಹಕಾರ ಕೋರಿದರು.

ಕ್ಷೇತ್ರದಲ್ಲಿನ ಸವಾಲುಗಳೇನು ಎಂಬುದಕ್ಕೆ ಪ್ರತಿಕ್ರಿಯಿಸಿ, ಸ್ಪರ್ಧಿಸಿದರೆ ಮೈಸೂರು–ಕೊಡಗು ಕ್ಷೇತ್ರದಲ್ಲೇ ಎಂದು ನಿರ್ಧರಿಸಿದ್ದೆ. ಸವಾಲುಗಳು ಇದ್ದರೆ ಅದು ಒಳ್ಳೆಯದು. ಅದನ್ನು ದಾಟಿ ಮುಂದುವರೆಯುವುದೇ ಜೀವನ ಮಾರ್ಗ ಎಂದರು. ರಾಜಕಾರಣದಲ್ಲಿ ಟೀಕೆ ಸಾಮಾನ್ಯ, ಇದಕ್ಕೆ ಮಾನಸಿಕವಾಗಿ ತಯಾರಾಗಿದ್ದೀರಾ? ಎಂಬುದಕ್ಕೆ ಉತ್ತರಿಸಿ, ರಾಜಕೀಯದಲ್ಲಿ ಅವೆಲ್ಲಾ ಸಹಜ, ಅದನ್ನು ಸಹಿಸಿಕೊಳ್ಳಬೇಕು. ಸಾಂಬಾರಿನಲ್ಲಿ ಒಮ್ಮೆ ಮೆಣಸಿನ ಕಾಯಿ ಸಿಗುತ್ತದೆ. ರಾಜಕಾರಣದಲ್ಲಿ ಪ್ರತಿದಿನವೂ ಸಿಗಲೂಬಹುದು ಎಂದು ಹೇಳಿದರು. ಸ್ವಯಂ ಪ್ರೇರಣೆಯಿಂದ ಬಿಜೆಪಿಯತ್ತ ಬಂದೀರಾ? ಎಂಬುದಕ್ಕೆ ಪ್ರತಿಕ್ರಿಯಿಸಿ, ಈ ಸಂಬಂಧ ಬೇಕಾದಷ್ಟು ಊಹಾಪೋಹಗಳು ಇವೆ. ಸದ್ಯದಲ್ಲೇ ಈ ಎಲ್ಲದರ ಬಗ್ಗೆ ಸ್ಪಷ್ಟೀಕರಣ ನೀಡುತ್ತೇನೆ. ರಾಜಸ್ಥಾನ ಕಡೆಯ (ಟಿಕೆಟ್ ವಿಚಾರದಲ್ಲಿ ಯದುವೀರ್‌ಗೆ ಹೆಣ್ಣು ಕೊಟ್ಟ ಮಾವನವರ ಪ್ರಭಾವವಿದೆ ಎನ್ನಲಾಗಿರುವ ಸಂಬಂಧ) ಪ್ರಭಾವ ಇದೆ ಎಂಬುದರಲ್ಲಿ ಸತ್ಯವಿಲ್ಲ. ರಾಜ್ಯದ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿಯೇ ಬಿಜೆಪಿ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದೇನೆ ಎಂದು ತಿಳಿಸಿದರು.

ಬಿಜೆಪಿಯಲ್ಲಿ ಪ್ರಧಾನಮಂತ್ರಿ ಅವರಿಂದ ಹಿಡಿದು ಇಲ್ಲಿನ ಕಾರ್ಯಕರ್ತರವರೆಗೆ ಒಂದು ಸಿದ್ಧಾಂತವಿದೆ. ಜೊತೆಗೆ ನಂಬಿಕೆ ಹಾಗೂ ಅಭಿವೃದ್ಧಿ ಮಾರ್ಗ ಸೇರಿದಂತೆ ಎಲ್ಲದರಲ್ಲೂ ಒಂದು ಸ್ಥಿರತೆ ಇದೆ. ಅದಕ್ಕಾಗಿ ಈ ಪಕ್ಷದ ಆಯ್ಕೆ ಮಾಡಿದೆ. ಅದರ ಜೊತೆಗೆ ಅಭಿವೃದ್ಧಿಗೆ ನನ್ನದೇ ದೃಷ್ಟಿಕೋನ ಇದೆ ಎಂದರು.

ಮೈಸೂರು ರಾಜವಂಶಸ್ಥರು ಮೈಸೂರಿಗೆ ಕೊಟ್ಟ ಕೊಡುಗೆ ಅವಿಸ್ಮರಣೀಯ. ಮೈಸೂರಿನ ವಿಚಾರದಲ್ಲಿ ನಿಮ್ಮ ಕನಸ್ಸು ಏನೆಂಬುದಕ್ಕೆ ಪ್ರತಿಕ್ರಿಯಿಸಿ, ನಮ್ಮ ಪೂರ್ವಜರು ಕೊಟ್ಟ ಕೊಡುಗೆಯಿಂದಲೇ ನನ್ನನ್ನು ಇಷ್ಟೊಂದು ದೊಡ್ಡ ಮಟ್ಟದಲ್ಲಿ ಗೌರವಿಸಲಾಗುತ್ತಿದೆ. ಈ ಎಲ್ಲಾ ಗೌರವಕ್ಕೆ ಚಿರಋಣಿಯಾಗಿದ್ದು, ಅಂತಹ ಋಣ ತೀರಿಸಲೆಂದೇ ಒಂದು ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ ಎಂದು ಹೇಳಿದರು.

ಸಂವಿಧಾನದ ಪ್ರಕಾರ ಎಲ್ಲರೂ ಒಂದೇ: ನಮ್ಮ ಸಂವಿಧಾನದ ಪ್ರಕಾರ ಹಾಗೂ ದೇವರ ಮುಂದೆ ಎಲ್ಲರೂ ಸಾಮಾನ್ಯ ವ್ಯಕ್ತಿಯೇ. ನಮಗೆ ನಿಜವಾದ ಅಧಿಕಾರ ಬೇಕಿದ್ದರೆ ರಾಜಕಾರಣ ಪ್ರವೇಶಿಸಬೇಕು. ಆ ಮೂಲಕ ಜನರ ಪ್ರತಿನಿಧಿಯಾಗಿ ಕೆಲಸ ಕಾರ್ಯ ಮಾಡಬಹುದು. ಜೊತೆಗೆ ತಾತನವರು ಇದೇ ಮೈಸೂರನ್ನು ಭಾರತಕ್ಕೆ ವಿಲೀನ ಮಾಡಿದ ನಂತರ ನಮ್ಮದೇ ವರ್ಚಸ್ಸು ಸೃಷ್ಟಿಸಲು ಅವಕಾಶಬೇಕು. ರಾಜಮನೆತನ ಎಂಬುದು ಒಂದು ಪರಂಪರೆ ಭಾಗವಾಗಿ ಮುಂದುರೆಯುತ್ತದೆ. ಅದರ ಹೊರತಾಗಿ ನಮ್ಮದೇ ಛಾಪನ್ನು ನಾವೇ ಸೃಷ್ಟಿಸಬೇಕಿರುವುದು ಮುಖ್ಯ ಎಂದು ಹೇಳಿದರು. ಎಲ್ಲರ ಸಲಹೆ–ಸಹಕಾರದೊಂದಿಗೆ ರಾಜಕಾರಣದಲ್ಲಿ ಎದುರಾಗುವ ಎಲ್ಲಾ ರೀತಿಯ ಅಡೆತಡೆ ನಿವಾರಿಸಿಕೊಂಡು ಮುಂದೆ ಸಾಗುತ್ತೇನೆ. ಕ್ಷೇತ್ರದಲ್ಲಿ ಪ್ರತಾಪ್ ಸಿಂಹ ಅವರ ಅವಧಿವರೆಗೆ ಅಭಿವೃದ್ಧಿಯಾಗಿದೆ. ಪ್ರತಾಪ್ ಸಿಂಹ ಅವರು ತಮ್ಮ ಎರಡು ಅವಧಿಯಲ್ಲಿ ಅಭಿವೃದ್ಧಿ ಕೆಲಸ ಮಾಡಿದ್ದು, ಆ ಸಂಬಂಧ ಪೋಸ್ಟ್ ಕಾರ್ಡ್ ಕೂಡ ವಿತರಣೆ ಮಾಡಿದ್ದಾರೆ. ಒಳ್ಳೆಯ ಅಡಿಪಾಯ ಹಾಕಿದ್ದಾರೆ. ಅವರ ಸಹಕಾರವೂ ಬೇಕಾಗುತ್ತದೆ ಎಂದು ಪ್ರಶ್ನೆಗಳಿಗೆ ಉತ್ತರಿಸಿದರು.

ಎಸಿ ರೂಮ್‌ನಲ್ಲಿರುವ ಮಹಾರಾಜರು ರೋಡ್‌ಗೆ ಹೇಗೆ ಬರುತ್ತಾರೆ ಎಂಬ ಟೀಕೆ ಬಂದಿತ್ತು? ಎಂಬುದಕ್ಕೆ ಪ್ರತಿಕ್ರಿಯಿಸಿ, ಎಸಿ ರೂಮ್ ಬಿಟ್ಟು ಬರುವುದೇನು ಕಷ್ಟವಲ್ಲ. ಸಾರ್ವಜನಿಕ ಜೀವನದಲ್ಲಿ ಸಾರ್ವಜನಿಕ ಜವಾಬ್ದಾರಿಗಳನ್ನು ನಿಭಾಸಲೇಬೇಕಾಗುತ್ತದೆ. ಎಲ್ಲಾ ಯೋಚನೆ ಮಾಡಿಯೇ ಪ್ರವೇಶಿಸಿದ್ದೇನೆ. ಅರಮನೆ ಮತ್ತು ಸಾರ್ವಜನಿಕರ ನಡುವಿನ ವ್ಯಾಜ್ಯಗಳು ನ್ಯಾಯಾಲಯದ ಆದೇಶದಂತೆ ಕಾನೂನು ಚೌಕಟ್ಟಿನಲ್ಲಿ ಮುಂದುವರೆಯುತ್ತವೆ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಈ ಅವಕಾಶಕ್ಕೆ ನೀವೇ ಪ್ರಯತ್ನಿಸಿದ್ದಾ? ಅಥವಾ ಅದಾಗಿಯೇ ಒಲಿದು ಬಂದಿತೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಎರಡೂ ಆಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಮಂಗಳವಾದ್ಯ ಹಾಗೂ ಜನಪದ ಕಲಾತಂಡಗಳ ಮೆರುಗಿನೊಂದಿಗೆ ಯದುವೀರ್ ಅವರನ್ನು ಬಿಜೆಪಿ ಕಚೇರಿಗೆ ಸ್ವಾಗತಿಸಲಾಯಿತು. ಅಲ್ಲದೆ, ನೂರಾರು ಸಂಖ್ಯೆಯಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ನೆರೆದು, ಹೂಗುಚ್ಛ ನೀಡಿ ಯದುವೀರ್‌ಗೆ ಅಭಿನಂದಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಎಂಎಲ್‌ಸಿ ಸಿದ್ದರಾಜು, ಮಾಜಿ ಮೇಯರ್ ಸಂದೇಶಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮುಖಂಡರಾದ ಫಣೀಶ್, ಮೈ.ವಿ.ರವಿಶಂಕರ್ ಮತ್ತಿತರರು ಹಾಜರಿದ್ದರು. ಬಳಿಕ ಯದುವೀರ ಅವರು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಹಾಗೂ ಮಾಜಿ ಸಚಿವ ಎಸ್.ಎಸ್.ರಾಮದಾಸ್ ಅವರ ನಿವಾಸಕ್ಕೂ ಭೇಟಿ ನೀಡಿದ್ದರು.

"ನನ್ನ ಪ್ರೀತಿಯ ಕಾರ್ಯಕರ್ತರೇ ಮತ್ತು ಕೊಡಗು–ಮೈಸೂರಿನ ಬಂಧುಗಳೇ, ಟಿಕೆಟ್ ಕೈತಪ್ಪಿದೆ. ಇವನ ಬಳಿ ಹೇಗೆ ಕೆಲಸಕ್ಕಾಗಿ ಕರೆ ಮಾಡುವುದು ಎಂದು ಅಂಜಬೇಡಿ. ಈಗಲೂ ಮತ್ತು ಮಾಜಿಯಾದ ಮೇಲೂ ಕೈಲಾದ ಕೆಲಸ ಮಾಡಿಕೊಡುತ್ತೇನೆ. ಸೋಮವಾರದಿಂದ ಪ್ರಚಾರಕ್ಕೆ ಬರುತ್ತೇನೆ.

– ಸಾಮಾಜಿಕ ಜಾಲ ತಾಣದಲ್ಲಿ ಸಂಸದ ಪ್ರತಾಪ್ ಸಿಂಹ ಸಂದೇಶ

ಆರೋಗ್ಯವಂತ ಮಹಿಳೆಯಿಂದ ಕುಟುಂಬ ಸುಭದ್ರ

ಮೈಸೂರು ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ಮತ್ತು ಜಿಯೋಮಿಕ್ಸ್ ವಿಭಾಗದ ಮುಖ್ಯಸ್ಥೆ ಡಾ.ಎಸ್.ಎಸ್.ಮಾಲಿನಿ ಅಭಿಮತ

ಮೈಸೂರು,ಮಾ.14(ಎಂಟಿವೈ)– ಮಹಿಳೆಯರು ಆರೋಗ್ಯವಂತರಾಗಿದ್ದರೆ ಕುಟುಂಬವೂ ಆರೋಗ್ಯ ಹಾಗೂ ಸುಭದ್ರತೆಯಿಂದ ಕೂಡಿರುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ಮತ್ತು ಜಿಯೋಮಿಕ್ಸ್ ವಿಭಾಗದ ಮುಖ್ಯಸ್ಥೆ ಡಾ.ಎಸ್.ಎಸ್.ಮಾಲಿನಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬನ್ನಿಮಂಟಪದಲ್ಲಿರುವ ದಿ ಆರ್ಗನೈಜೇಷನ್ ಫಾರ್ ದಿ ಡೆವಲಪ್‌ಮೆಂಟ್ ಆಫ್ ಪೀಪಲ್(ಓಡಿಪಿ) ಸಂಸ್ಥೆಯಲ್ಲಿ ಆಯೋಜಿಸಿದ್ದ 'ವಿಶ್ವ ಮಹಿಳಾ ದಿನ'ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜ ಮತ್ತು ಕುಟುಂಬದಲ್ಲಿ ಮಹಿಳೆಯರು ತಮ್ಮ ಜವಾಬ್ದಾರಿಯನ್ನು ದಕ್ಷತೆಯಿಂದ ನಿಭಾಯಿಸುತ್ತಿದ್ದಾರೆ. ಯಾವುದೇ ಕೆಲಸವಾದರೂ ಸಮರ್ಥವಾಗಿ ನಿಭಾಯಿಸುವ ವಿಶೇಷ ಶಕ್ತಿ ಮಹಿಳೆಯರಲ್ಲಿದೆ. ಶಾಂತಿ, ಸಹನೆ, ಮಮತೆ ಹಾಗೂ ಮಾನವೀಯ ಮೌಲ್ಯವುಳ್ಳ ಗುಣವನ್ನು ಹೊಂದಿರುವ ಮಹಿಳೆಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು. ಮಹಿಳೆಯರು ಆರೋಗ್ಯವಂತರಾಗಿದ್ದರೆ ಕುಟುಂಬವೂ ಆರೋಗ್ಯ ಹಾಗೂ ಸುಭದ್ರವಾಗಿರುತ್ತದೆ. ಸಮಾಜದಲ್ಲಿ ಗಂಡು–ಹೆಣ್ಣಿನ ನಡುವೆ ತಾರತಮ್ಯ ಮೂಡದಂತೆ ನೋಡಿಕೊಳ್ಳುವ ಜವಾಬ್ದಾರಿ ಎಲ್ಲರದ್ದಾಗಿದೆ. ಮಹಿಳೆಯರು ಮನಸ್ಸು ಮಾಡಿದರೇ ಸಮಾಜದಲ್ಲಿ ಗಂಡು–ಹೆಣ್ಣೆಂಬ ಭೇದ–ಭಾವ ಹೋಗಲಾಡಿಸಬಹುದಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಪೊಲೀಸ್ ಕಂಟ್ರೋಲ್ ರೂಮ್ ಇನ್ಸ್‌ಪೆಕ್ಟರ್ ಗೀತಾ ಮಾತನಾಡಿ, ಇಂದಿಗೂ ಸಮಾಜ ಮತ್ತು ಕುಟುಂಬದಲ್ಲಿ ಮಹಿಳೆಯರು ಶೋಷಣೆಗೆ ಒಳಗಾಗುತ್ತಲೇ ಇದ್ದಾರೆ. ಆದರೂ ಸವಾಲುಗಳನ್ನು ಹಿಮ್ಮೆಟ್ಟಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ. ಮಹಿಳೆಯರು ತಮಗೆ ಎದುರಾಗುವ ಯಾವುದೇ ಸವಾಲನ್ನು ಸಮರ್ಥವಾಗಿ ಎದುರಿಸಬೇಕು. ಮಹಿಳೆಯರ ರಕ್ಷಣೆಗೆ ಪೊಲೀಸ್ ಇಲಾಖೆ ಸದಾ ಸಿದ್ಧವಿದ್ದು, ಯಾವುದೇ ಸಂಕಷ್ಟದ ಸಂದರ್ಭ ಎದುರಾದರೆ 112 ಸಹಾಯವಾಣಿಗೆ ಕರೆ ಮಾಡುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಓಡಿಪಿ ಸಂಸ್ಥೆಯ ಅಧ್ಯಕ್ಷ, ಮೈಸೂರು ಧರ್ಮಪ್ರಾಂತ್ಯದ ಆಡಳಿತಾಧಿಕಾರಿ ಡಾ.ಬರ್ನಾಡ್ ಮೊರಾಸ್ ಮಾತನಾಡಿ, ಸಮಾಜದಲ್ಲಿ ಈ ಹಿಂದಿನಿಂದಲೂ ಮಹಿಳೆಯರಿಗೆ ವಿಶೇಷ ಸ್ಥಾನಮಾನವಿದೆ. ಎಲ್ಲರೂ ಮಹಿಳೆಯರನ್ನು ವಿನಮ್ರತೆಯಿಂದ ಕಾಣಬೇಕು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಇನ್ನಿತರರು ಪ್ರೇರಣಾ ಶಕ್ತಿಯಾಗಿ ಸ್ವೀಕರಿಸಬೇಕು ಎಂದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮೈಸೂರು ತಾಲೂಕಿನ ಇಂದಿರಾ ಕಾಲೋನಿಯ ಶಾಲಿನಿ, ಗುಂಡೂರಾವ್ ನಗರದ ಭವಾನಿ, ಕೊಡಗು ಜಿಲ್ಲೆಯ ಬೆಟ್ಟದ ಕಾಡಿನ ಸಫಿಯಾ, ವಿರಾಜಪೇಟೆ ತಾಲೂಕು ಮಲ್ದಾರೆಯ ಕೆ.ವಿ.ಸುಜಿತ ಅವರಿಗೆ 'ಪ್ರೇರಣಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಧರ್ಮಪ್ರಾಂತ್ಯದ ಗುರು ಆಲ್ಫ್ರೆಡ್ ಜಾನ್ ಮೆಂಡೋನ್ಸಾ, ಓಡಿಪಿ ನಿರ್ದೇಶಕ ಅಲೆಕ್ಸ್ ಪ್ರಶಾಂತ್ ಸಿಕ್ವೇರಾ, ಮಹಿಳೋದಯ ಮಹಿಳಾ ಒಕ್ಕೂಟದ ಅಧ್ಯಕ್ಷೆ ಲತಾಮಣಿ, ಪುಷ್ಪ, ಎಂ.ವಾಣಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಸಾವಿರ ಗಿಡ ವಿತರಿಸಲಾಯಿತು.



ಮೈಸೂರಿನ ಓಡಿಪಿ ಸಂಸ್ಥೆಯಲ್ಲಿ ನಡೆದ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಮೈಸೂರು ತಾಲೂಕಿನ ಇಂದಿರಾ ಕಾಲೋನಿಯ ಶಾಲಿನಿ, ಗುಂಡೂರಾವ್ ನಗರದ ಭವಾನಿ, ಕೊಡಗು ಜಿಲ್ಲೆಯ ಬೆಟ್ಟದ ಕಾಡಿನ ಸಫಿಯಾ, ವಿರಾಜಪೇಟೆ ತಾಲೂಕಿನ ಮಲ್ದಾರೆಯ ಕೆ.ವಿ. ಸುಜಿತ ಅವರಿಗೆ 'ಪ್ರೇರಣಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಜೂನ್ ವೇಳೆಗೆ ಮುಂಗಾರು ಮಳೆ ಆರಂಭ; ಈ ವರ್ಷ ವಾಡಿಕೆ ಮಳೆಯಾಗುವ ಸಾಧ್ಯತೆ

ಭಾರತೀಯ ಹವಾಮಾನ ಇಲಾಖೆಯ ವಿಜ್ಞಾನಿಗಳಿಂದ ಮಾಹಿತಿ



ಮೈಸೂರು, ಮಾ.14(ಬಿಎಲ್‌ಯು)– ಜೂನ್ ವೇಳೆಗೆ ಮುಂಗಾರು ಮಳೆ ಆರಂಭವಾಗಲಿದೆ. ಈ ವರ್ಷ ವಾಡಿಕೆ ಮಳೆಯಾಗಲಿದೆ ಎಂದು ಮೈಸೂರಿನ ನಾಗನಹಳ್ಳಿ ಹವಾಮಾನ ಇಲಾಖೆಯ ಸಹ ಸಂಶೋಧಕ ಡಾ.ಜಿ.ವಿ.ಸುಮಂತ್ ತಿಳಿಸಿದ್ದಾರೆ.

ಕಳೆದ ವರ್ಷ ಎಲ್ ನಿನೋ ಕಾರಣದಿಂದ ಬರಗಾಲ ಪರಿಸ್ಥಿತಿ ಉಂಟಾಗಿತ್ತು. ಆದರೆ ಈ ಬಾರಿ ಎಲ್ ನಿನೋ ಸದ್ಯಕ್ಕೆ ದುರ್ಬಲಗೊಳ್ಳುತ್ತಿದೆ. ಇದರಿಂದ ಜೂನ್ ತಿಂಗಳಿಂದ ಮಳೆ ಆರಂಭವಾಗಲಿದೆ ಎಂದು ಹೇಳಿದ್ದಾರೆ. ಭಾರತೀಯ ಹವಾಮಾನ ಇಲಾಖೆ ವಿಜ್ಞಾನಿಗಳು ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಜೂನ್‌ನಲ್ಲಿ ಆರಂಭವಾಗಿ ಈ ವರ್ಷ ವಾಡಿಕೆಯ ಮಳೆಯಾಗಬಹುದು ಎಂದು ಅಂದಾಜಿಸಿದ್ದಾರೆ ಎಂದು ಹೇಳಿದ್ದಾರೆ.

ಸದ್ಯ ಮೈಸೂರಿನಲ್ಲಿ ಇಂದು 36.6 ಡಿಗ್ರಿ ಸೆಲ್ಸಿಯಸ್ ತಾಪಮಾನವಿತ್ತು. ಕಳೆದ ವರ್ಷ ಮಳೆಯಾಗದೆ ಭೂಮಿ ಧಗೆ ಹೆಚ್ಚಿದೆ ಸೂರ್ಯನ ಶಾಖಕ್ಕೆ ಭೂಮಿಯಿಂದ ಬಿಸಿ ಹವೆಯೂ ಹೆಚ್ಚಿದೆ. ಇದರಿಂದ ಸಹಜವಾಗಿಯೇ ತಾಪಮಾನ ಹೆಚ್ಚಾಗುತ್ತಿದೆ. ಇದು ಏಪ್ರಿಲ್ ತಿಂಗಳ ವೇಳೆಗೆ 38 ಡಿಗ್ರಿ ಸೆಲ್ಸಿಯಸ್ ತನಕ ಹೆಚ್ಚಾಗುವ ಸಾಧ್ಯತೆ ಇದೆ. ಸಾಮಾನ್ಯವಾಗಿ ಮೈಸೂರಿನಲ್ಲಿ ತಾಪಮಾನ ಹೆಚ್ಚಾಗುವುದಿಲ್ಲ. ಬಹಳ ಹಿಂದೆ ಮೈಸೂರಿನಲ್ಲಿ 38 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಈಗ ಅದೇ ಪರಿಸ್ಥಿತಿಗೆ ಬರುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಕಳೆದ ವರ್ಷ ಬರಗಾಲದಿಂದ ತಾಪಮಾನ ಹೆಚ್ಚಾಗಿದೆ. ಆದ ಕಾರಣ ಈ ಬಾರಿ ಕೂಡ 38 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ದಾಖಲಾಗುವ ಸಾಧ್ಯತೆ ಇದೆ ಎಂದು ಡಾ.ಸುಮಂತ್ ತಿಳಿಸಿದ್ದಾರೆ.

ಇವತ್ತಿನ ತಾಪಮಾನ ಹೆಚ್ಚಾಗಲು ಸಮುದ್ರದಲ್ಲಿ ಉಂಟಾಗುವ ಎಲ್ ನಿನೋ ಕಾರಣ. ಇದು ಬೇಸಿಗೆಯಲ್ಲಿ ಶಾಖ ಹೆಚ್ಚಿಸಿ ಹವಾಮಾನದ ಮೇಲೆ ಪರಿಣಾಮ ಬೀರುತ್ತದೆ ಎಂದು ತಿಳಿಸಿದ್ದಾರೆ.

ಎಲ್ ನಿನೋ ಎಂದರೇನು...!

ಫೆಸಿಫಿಕ್ ಮಹಾ ಸಾಗರದ ಮೇಲ್ಮೈ ಸಾಮಾನ್ಯಕ್ಕಿಂತ ಹೆಚ್ಚು ಉಷ್ಣತೆ ಹೆಚ್ಚಾಗುವುದನ್ನು ಎಲ್ ನಿನೋ ಎಂದು ಕರೆಯಲಾಗುತ್ತದೆ. ಇದು ಜಾಗತಿಕ ಹವಾಮಾನದ ಮೇಲೆ ಪರಿಣಾಮ ಬೀರುತ್ತದೆ. ಇದು ಜಾಗತಿಕ ತಾಪಮಾನದ ಹೆಚ್ಚಳಕ್ಕೂ ಕಾರಣವಾಗುತ್ತದೆ ಎಂದು ಡಾ. ಸುಮಂತ್ ತಿಳಿಸಿದ್ದಾರೆ.

ಎಲ್ ನಿನೋ ಪರಿಣಾಮದಿಂದ ಮಳೆ ಕೊರತೆಯಾಗಿ, ವಾತಾವರಣದಲ್ಲಿ ಉಷ್ಣತೆ ಹೆಚ್ಚಾಗುತ್ತದೆ. ಇದರಿಂದ ಮಳೆ ಕಡಿಮೆಯಾಗಿ ಅನಾವೃಷ್ಟಿಗೆ ಕಾರಣ ವಾಗುತ್ತದೆ ಎಂದು ಹೇಳಿದ್ದಾರೆ. ಎಲ್ ನಿನೋ ಸಾಮಾನ್ಯವಾಗಿ ಪ್ರತಿ 2ರಿಂದ 7 ವರ್ಷಗಳಿಗೊಮ್ಮೆ ಸಂಭವಿಸುತ್ತದೆ. ಇದು ಸುಮಾರು 9ರಿಂದ 12 ತಿಂಗಳ ತನಕ ಇರುತ್ತದೆ. ಕೆಲವೊಮ್ಮೆ ಎರಡು ವರ್ಷಗಳ ತನಕ ಕೂಡ ಇರುತ್ತದೆ ಎಂದು ಡಾ. ಸುಮಂತ್ ವಿವರಿಸಿದ್ದಾರೆ. ಕಳೆದ ವರ್ಷ ಬರಗಾಲದ ಕಾರಣ ಜನರು ಕುಡಿಯುವ ನೀರಿಗೂ ಹಾಹಾಕಾರ ಪಡುವ ಪರಿಸ್ಥಿತಿ ಬಂದಿದೆ. ಬೆಳೆ ಬೆಳೆಯುವ ರೈತನ ಪಾಡಂತೂ ಹೇಳ ತೀರದಾಗಿದೆ. ಯಾವಾಗ ಮಳೆಯಾಗುತ್ತದೋ ಎಂದು ಜನರು ಆಕಾಶದತ್ತ ದೃಷ್ಟಿ ಹಾಯಿಸಿದ್ದಾರೆ. ಕಳೆದ ವರ್ಷದಂತೆ ಈ ಬಾರಿಯೂ ಬರಗಾಲ ಆವರಿಸಿದರೆ ಏನು ಮಾಡುವುದು ಎಂದು ಜನರು ಆತಂಕದಲ್ಲಿದ್ದಾರೆ. ಆದರೆ ಈಗ ಹವಾಮಾನ ಇಲಾಖೆಯ ವಿಜ್ಞಾನಿಗಳು, ಜೂನ್ ತಿಂಗಳಲ್ಲಿ ಮಳೆಯಾಗಲಿದೆ ಎಂದು ಹೇಳುತ್ತಿರುವುದರಿಂದ ಜನರು ನಿಟ್ಟುಸಿರು ಬಿಡುವಂತಾಗಿದೆ.

ಮಮತಾ ಬ್ಯಾನರ್ಜಿಗೆ ಗಂಭೀರ ಗಾಯ



ಕೋಲ್ಕತ್ತಾ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಹಾಗೂ ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಅವರ ತಲೆಗೆ ಗಂಭೀರ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಟಿಎಂಸಿ ಪಕ್ಷ ಅಧಿಕೃತವಾಗಿ ತಿಳಿಸಿದೆ. ಟಿಎಂಸಿ ಅಧಿಕೃತ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಮತಾ ಬ್ಯಾನರ್ಜಿ ಆಸ್ಪತ್ರೆಯ ಹಾಸಿಗೆ ಮೇಲೆ ಮಲಗಿರುವ ಫೋಟೋ ಹಂಚಿಕೊಂಡಿದ್ದು, ಅವರ ಹಣೆಯ ಮಧ್ಯದಲ್ಲಿ ಆಳವಾದ ಗಾಯವಾಗಿದ್ದು, ರಕ್ತಮುಖದ ಮೇಲೆ ಸುರಿಯುತ್ತಿರುವ ಫೋಟೋಗಳನ್ನು ಹರಿಯಬಿಟ್ಟಿದೆ ಮಮತಾ ಅವರು ತಮ್ಮ ಮನೆಯ ಆವರಣದಲ್ಲಿ ವಾಯುವಿಹಾರ ನಡೆಸುತ್ತಿದ್ದಾಗ ಕುಸಿದು ಬಿದ್ದು ಕಲ್ಲಿಗೆ ಹಣೆ ಬಡಿದಿದ್ದರಿಂದ ಗಾಯಗೊಂಡಿದ್ದಾರೆ ಎನ್ನಲಾಗಿದೆ.

ಪಿಎಚ್.ಡಿ ಪದವಿ



ಮೈಸೂರು,ಮಾ.14–ಡಾ.ಬಿ.ಶಂಕರ್ ಅವರ ಮಾರ್ಗದರ್ಶನದಲ್ಲಿ ಜಹ್ರಾ ಬತೂಲ್ ಅವರು ನಗರ ಮತ್ತು ಪ್ರಾದೇಶಿಕ ಯೋಜನೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕ್ಲಾಕ್ ಟವರ್ ಬಳಿ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.14(ಎಂಟಿವೈ)– ಸಂವಿಧಾನ ಬದಲಿಸುವ ಹೇಳಿಕೆಯನ್ನು ಮತ್ತೊಮ್ಮೆ ನೀಡಿರುವ ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಸಂಶೋಧಕರ ವೇದಿಕೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕ್ಲಾಕ್ ಟವರ್ ಮುಂಭಾಗದ ಪ್ರತಿಭಟನೆ ನಡೆಸಿದ ಸಂಶೋಧಕರ ಸಂಘದ ಸದಸ್ಯರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ, ಸಂಸದ ಅನಂತಕುಮಾರ್ ಹೆಗಡೆ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಅನಂತಕುಮಾರ್ ಹೆಗಡೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 400 ಸೀಟುಗಳನ್ನು ಗೆದ್ದರೆ ಸಂವಿಧಾನ ಬದಲಾವಣೆ ಹಾಗೂ ತಿದ್ದುಪಡಿ ಮಾಡಬಹುದು ಎಂದಿದ್ದಾರೆ. ಇದರಿಂದ ಬಿಜೆಪಿ ನಾಯಕರು ಅಂಬೇಡ್ಕರ್ ಅವರು ನೀಡಿರುವ ಸಂವಿಧಾನವನ್ನು ಬದಲಿಸುವ ಉದ್ದೇಶ ಹೊಂದಿದ್ದಾರೆ ಎಂಬುದು ಪದೇ ಪದೇ ಸಾಬೀತಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಂಸದ ಅನಂತಕುಮಾರ್ ಹೆಗಡೆ ಅವರಿಗೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಸಂಶೋಧಕರ ವೇದಿಕೆ ಅಧ್ಯಕ್ಷ ರಾಜೇಶ್ ಚಾಕನಹಳ್ಳಿ ಮಾತನಾಡಿ, ಪಟ್ಟಭದ್ರ ಹಿತಾಸಕ್ತಿಗಳು, ಮನುವಾದಿಗಳು ಅನಾದಿ ಕಾಲದಿಂದಲೂ ಶೂದ್ರರನ್ನು ಶೋಷಣೆ ಮಾಡಿ ಆಳ್ವಿಕೆ ಮಾಡುತ್ತಲೇ ಬಂದಿದ್ದಾರೆ. ಡಾ.ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದಿಂದ ಎಲ್ಲಾ ಪ್ರಜೆಗಳಿಗೂ ಸಮಾನತೆಯ ಹಕ್ಕು ಸಿಕ್ಕಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಮನುವಾದಿಗಳು ತಮ್ಮ ಅಸ್ತಿತ್ವಕ್ಕಾಗಿ ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ಹೇಳಿಕೆ ನೀಡುತ್ತಿರುವುದು ಖಂಡನೀಯ ಎಂದರು.

ಪ್ರತಿಭಟನೆಯಲ್ಲಿ ವೇದಿಕೆ ಪ್ರಧಾನ ಕಾರ್ಯದರ್ಶಿ ಕಾಂತರಾಜು, ಕಾರ್ಯದರ್ಶಿ ಪಾರ್ಥ, ಸಂಶೋಧಕರಾದ ವರಹಳ್ಳಿ ಆನಂದ್, ಸಂಜಯ್ ಕುಮಾರ್, ಕುಶಾಲ್, ಜಗದೀಶ್ ಮಹದೇವಯ್ಯ, ರಂಗಸ್ವಾಮಿ, ಮಲ್ಲೇಶ್, ಸುರೇಶ್, ಪ್ರತಾಪ್ ನಟರಾಜ್ ಬೊಮ್ಮಲ ಪುರ, ಲಿಂಗರಾಜು ರಾಜೇಶ್ ಶಿವ, ನವೀನ್ ಜೀವಿ, ಪ್ರಸನ್ನ ಮಹದೇವ, ಹನುಮಂತಪ್ಪ, ಶಿವು ಹೊಸಳ್ಳಿ, ಶಿವು ಬಂಡಳ್ಳಿ, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಸಚಿನ್, ಗೋಪಾಲ್ ಮುಂತಾದ ಹಲವಾರು ಸಂಶೋಧಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಭಾರತೀಯ ಜನತಾ ಪಾರ್ಟಿಯ ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದ ಶ್ರೀ ಕೃಷ್ಣದತ್ತ ಯದುವೀರ ಒಡೆಯರ್ ಅವರನ್ನು ಮೈಸೂರು ನಗರದ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಮೈಸೂರು ನಗರ ಪ್ರಧಾನ ಕಾರ್ಯದರ್ಶಿಗಳಾದ ಗಿರಿಧರ್, ಮಹೇಶ್, ಉಪಾಧ್ಯಕ್ಷ ಜೋಗಿ ಮಂಜು, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಸಚ್ಚಿನ್, ಲೋಹಿತ್, ಭರತ್,ಅರ್ಜುನ, ನವೀನ್ ಇನ್ನಿತರರು ಹಾಜರಿದ್ದರು.

ಇಂದು ಕೊಡಗಿಗೆ ಯದುವೀರ್

ಮಡಿಕೇರಿ, ಮಾ.14–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೊದಲ ಬಾರಿಗೆ ಶುಕ್ರವಾರ ಕೊಡಗಿಗೆ ಆಗಮಿಸಲಿದ್ದಾರೆ.



ಶುಕ್ರವಾರ ಬೆಳಗ್ಗೆ 8.30ಕ್ಕೆ ಕೊಡಗಿನ ಗಡಿ ಕುಶಾಲನಗರಕ್ಕೆ ಆಗಮಿಸುವ ಯದುವೀರ್ ಅವರನ್ನು ಗಡಿಯಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿ ಜಿಲ್ಲೆಗೆ ಬರ ಮಾಡಿಕೊಳ್ಳಲಿದ್ದಾರೆ. ಇದೇ ವೇಳೆ ಮಾಜಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ ಸೇರಿದಂತೆ ಪಕ್ಷದ ವಿವಿಧ ಮೋರ್ಚಾ ಹಾಗೂ ಮಂಡಲ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಭಾಗಹಿಸಲಿದ್ದಾರೆ.

ಬಳಿಕ 10 ಗಂಟೆಗೆ ಮಡಿಕೇರಿಗೆ ಆಗಮಿಸುವ ಯದುವೀರ್, ನಗರದ ಕಾವೇರಿ ಹಾಲ್‌ನಲ್ಲಿ ಆಯೋಜಿಸಿರುವ ಜಿಲ್ಲಾ ಬಿಜೆಪಿ ಹಿಂದುಳಿದ ವರ್ಗಗಳ ಬೃಹತ್ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿ ಕಾಳಪ್ಪ ಮತ್ತು ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಅಪ್ಪು ರವೀಂದ್ರ ಅವರು ತಿಳಿಸಿದ್ದಾರೆ.

ಮತ್ತೊಮ್ಮೆ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಲಿರುವ ಕುಮಾರಸ್ವಾಮಿ

● ಮಾ.21ರಂದು ಮೂರನೇ ಬಾರಿ ಹೃದಯ ಶಸ್ತ್ರಚಿಕಿತ್ಸೆ ● ಮೂರು ದಿನ ವಿಶ್ರಾಂತಿ ನಂತರ ಚುನಾವಣಾ ಪ್ರಚಾರದಲ್ಲಿ ಭಾಗಿ ● ಬಿಜೆಪಿ ವರಿಷ್ಠರು ಸಲಹೆ ನೀಡಿದರೆ ಮಂಡ್ಯದಿಂದ ಸ್ಪರ್ಧೆ

ಬೆಂಗಳೂರು, ಮಾ.14(ಕೆಎಂಶಿ)– ಲೋಕಸಭಾ ಚುನಾವಣಾ ಹೊಸ್ತಿಲಲ್ಲೇ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಲಿದ್ದಾರೆ.

ಇದರ ಮಧ್ಯೆ ಲೋಕಸಭಾ ಚುನಾವಣಾ ತಯಾರಿ ಹಾಗೂ ಉಳಿದ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ದೆಹಲಿಗೆ ಬರುವಂತೆ ಬಿಜೆಪಿ ವರಿಷ್ಠರು ಆಹ್ವಾನಿಸಿದ್ದಾರೆ.

ಬಹುತೇಕ ನಾಳೆ ದೆಹಲಿಗೆ ತೆರಳಲಿರುವ ಕುಮಾರಸ್ವಾಮಿ, ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಷಾ ಅವರನ್ನು ಭೇಟಿ ಮಾಡಿ ಚರ್ಚೆ ಮಾಡಲಿದ್ದಾರೆ.



ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗುವ ಕುಮಾರಸ್ವಾಮಿ ಅವರಿಗೆ ವಿಶ್ರಾಂತಿ ಅಗತ್ಯವಿರುವುದರಿಂದ ಅವರು ಲೋಕಸಭಾ ಚುನಾವಣಾ ಕಣಕ್ಕಿಳಿಯುವುದು ಕ್ಲಿಷ್ಟಕರ, ಆದರೆ, ನಾಳೆ ದೆಹಲಿಯಲ್ಲಿ ಪ್ರಧಾನಿ ಅವರು ಚುನಾವಣಾ ಕಣಕ್ಕಿಳಿಯುವಂತೆ ಸಲಹೆ ಮಾಡಿದರೆ ಮಂಡ್ಯದಲ್ಲಿ ಸ್ಪರ್ಧಿಸಲಿದ್ದಾರೆ.

ವಿಧಾನಮಂಡಲದ ಅಧಿವೇಶನ ನಡೆಯುವ ಸಂದರ್ಭದಲ್ಲೇ ಕುಮಾರಸ್ವಾಮಿ ಅವರಿಗೆ ಆರೋಗ್ಯದಲ್ಲಿ ಏರುಪೇರು ಕಂಡು ಬಂದ ಹಿನ್ನಲೆಯಲ್ಲಿ ಡಾ. ಮಂಜುನಾಥ್ ಚೆನ್ನೈನ ಅಪೋಲೋ ಆಸ್ಪತ್ರೆಯ ಪರಿಣಿತ ವೈದ್ಯರ ಬಳಿ ಕಳುಹಿಸಿದ್ದರು.

ಅಲ್ಲಿ ಮೂರು ದಿನಗಳ ಕಾಲ ಚಿಕಿತ್ಸೆ ಪಡೆದ ನಂತರ ಮತ್ತೊಂದು ಶಸ್ತ್ರಚಿಕಿತ್ಸೆ ಅಗತ್ಯವಿದ್ದು ಇದನ್ನು ನಮ್ಮಿಂದ ಮಾಡಲು ಸಾಧ್ಯವಿಲ್ಲ ಎಂದು ಅಮೆರಿಕ ವೈದ್ಯರನ್ನು ಅವರೇ ಸಂಪರ್ಕಿಸಿ, ಕುಮಾರಸ್ವಾಮಿ ಅವರ ಶಸ್ತ್ರ ಚಿಕಿತ್ಸೆಗೆ ಸಮಯ ನಿಗದಿ ಮಾಡಿದ್ದರು. ಮಾರ್ಚ್ 21 ರಂದು ಚೆನ್ನೈನ ಅಪೋಲೋದಲ್ಲೇ ಮೂರನೇ ಬಾರಿಗೆ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಲಿದ್ದಾರೆ.

ಕುಮಾರಸ್ವಾಮಿ ಅವರಿಗೆ ಶಸ್ತ್ರ ಚಿಕಿತ್ಸೆ ಮಾಡಲು ಅಮೆರಿಕದಿಂದ ಪರಿಣಿತರ ವೈದ್ಯರ ತಂಡವೇ ಮಾರ್ಚ್ 19ಕ್ಕೆ ಚೆನ್ನೈಗೆ ಬರಲಿದ್ದಾರೆ. ಅಂದೇ ಕುಮಾರಸ್ವಾಮಿ ಅವರು ಆಸ್ಪತ್ರೆಗೆ ದಾಖಲಾಗಲಿದ್ದಾರೆ.

ಶಸ್ತ್ರ ಚಿಕಿತ್ಸೆ ನಂತರ ಮೂರು ದಿನಗಳ ಕಾಲ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆದು ಮಾರ್ಚ್ 25ರಂದು ಹಿಂತಿರುಗಲಿದ್ದಾರೆ.

ಈ ಹಿಂದೆಯೂ ಕುಮಾರಸ್ವಾಮಿ ಅವರಿಗೆ ತೆರೆದ ಹೃದಯ ಶಸ್ತ್ರ ಚಿಕಿತ್ಸೆ ನಡೆದ ಸಂದರ್ಭದಲ್ಲೇ ವೈದ್ಯರು ಹೆಚ್ಚು ಆಯಾಸ ಮಾಡಿಕೊಳ್ಳಬಾರದು ಎಂದು ಸಲಹೆ ಮಾಡಿದ್ದರು.

ಆದರೆ ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಹಗಲು–ರಾತ್ರಿ ಎನ್ನದೇ ಚುನಾವಣಾ ಪ್ರಚಾರ ನಡೆಸಿದ್ದು, ವಿಶ್ರಾಂತಿ ಇಲ್ಲದೆ ಹೃದಯ ಸಮಸ್ಯೆಗೆ ಕಾರಣವಾಗಿದೆ ಎಂದು ವೈದ್ಯರು ಹೇಳಿದ್ದಾರೆ.



ಆ.15ಕ್ಕೆ ಮಫ್ತಿ ಪ್ರೀಕ್ವೇಲ್ 'ಭೈರತಿ ರಣಗಲ್'

ಗೀತಾ ಶಿವರಾಜಕುಮಾರ್ ನಿರ್ಮಾಣದ, ನರ್ತನ್ ನಿರ್ದೇಶನದ, ಬಹುನಿರೀಕ್ಷಿತ 'ಭೈರತಿ ರಣಗಲ್' ಚಿತ್ರ ಆಗಸ್ಟ್ 15ರ ಸ್ವತಂತ್ರ ದಿನಾಚರಣೆಯಂದು ಬಿಡುಗಡೆಯಾಗುತ್ತಿದೆ. ಆರು ವರ್ಷಗಳ ಹಿಂದೆ ಬಿಡುಗಡೆಯಾದ ಮಫ್ತಿ ಚಿತ್ರದ ಪ್ರೀಕ್ವೆಲ್ ಇದಾಗಿದ್ದು, ಅದರಲ್ಲಿದ್ದ ಶಿವರಾಜ್‌ಕುಮಾರ್ ಅವರ ಭೈರತಿ ರಣಗಲ್ ಪಾತ್ರದ ಹಿನ್ನೆಲೆ ಏನು? ಎಂಬುದನ್ನು ಈ ಚಿತ್ರ ಹೇಳುತ್ತಾ ಹೋಗುತ್ತದೆ. ಈ ಕುರಿತು ಮಾತನಾಡಿದ ಶಿವಣ್ಣ, ಮಫ್ತಿ ಚಿತ್ರ ಮಾಡುವಾಗ ಇದರಲ್ಲಿ ನಾನು ನಟಿಸಬೇಕಾ ಎಂಬ ಗೊಂದಲವಿತ್ತು. ಏಕೆಂದರೆ, ಅಲ್ಲಿ ನನ್ನ ಪಾತ್ರ ಬರುವುದೇ ಇಂಟರ್‌ವೆಲ್ ನಂತರ. ಮುರಳಿ ನನ್ನ ಮಾವನ ಮಗ. ಇಲ್ಲ ಅನ್ನೋ ಹಾಗಿರಲಿಲ್ಲ. ಏನು ಮಾಡೋದು ಅಂತ ಗೊಂದಲದಲ್ಲಿದ್ದೆ, ಆಗ ನರ್ತನ್, ನೀವು ಈ ಪಾತ್ರ ಮಾಡಲೇಬೇಕು ಎಂದಾಗ ಧೈರ್ಯ ಬಂತು. ಆನಂತರ ಒಪ್ಪಿಕೊಂಡೆ. ಅಭಿನಯಿಸುವಾಗಲೇ ಅದೇನೋ ಆ ಪಾತ್ರವನ್ನು ಇಷ್ಟಪಡತೊಡಗಿದೆ. ಅದಕ್ಕೆ ಆ ಹೆಸರೂ ಕಾರಣವಾಗಿತ್ತು. ಈ ಥರದ ಹೆಸರನ್ನು ಕೇಳೋಕೆ ಸಾಧ್ಯವೇ ಇಲ್ಲ. ಅಲ್ಲಿ ಬರುವ ಭೈರತಿ ರಣಗಲ್ ಪಾತ್ರದ ಹಿನ್ನೆಲೆ ಏನೆಂದು ಈ ಚಿತ್ರದಲ್ಲಿ ಹೇಳಿದ್ದಾರೆ. ಅವನು ಯಾಕೆ ಭೈರತಿ ರಣಗಲ್ ಆಗ್ತಾನೆ. ಅವನನ್ನು ಕಂಡರೆ ಜನ ಏಕೆ ಅಷ್ಟು ಪ್ರೀತಿ ಮಾಡ್ತಾರೆ ಇದಕ್ಕೆಲ್ಲ ಉತ್ತರವಿದೆ. ಹೆಚ್ಚು ಆಡಂಬರವಿಲ್ಲದೆ, ಸರಳವಾಗಿ ಚಿತ್ರವನ್ನು ನರ್ತನ್ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು.

ಶಿವಣ್ಣ ಯಾವಾಗಲೂ ಆ ಕಪ್ಪು ಬಣ್ಣದ ಡ್ರೆಸ್ ಯಾಕೆ ಹಾಕುತ್ತಾರೆ ಎನ್ನುವುದೇ ಚಿತ್ರದ ಕಥೆ ಎಂದ ನಿರ್ದೇಶಕ ನರ್ತನ್, ಮಫ್ತಿ ಚಿತ್ರ ಮಾಡುವಾಗಲೇ, ಆ ಪಾತ್ರದ ತೂಕ ಹೆಚ್ಚಿತ್ತು. ಚಿತ್ರ ನೋಡಿದಾಗ ಜನರಿಗೆ ಸಾಕಾಗಲಿಲ್ಲ. ಏಕೆಂದರೆ, ಶಿವಣ್ಣ ಅವರ ಪಾತ್ರ ಇಂಟರ್ವೆಲ್ ನಂತರ ಬರುತ್ತದೆ. ಈ ಪಾತ್ರವನ್ನು ಇಷ್ಟಕ್ಕೇ ಮುಗಿಸಬಾರದು, ಇದರ ಹಿನ್ನೆಲೆ ಏನಾದರೂ ಬರೆಯಬೇಕು ಎಂದುಕೊಂಡಾಗ ರಣಗಲ್ ಹಿಂದಿನ ಕಥೆ ಸೃಷ್ಟಿಯಾಯಿತು. ಪೆನ್ ಹಿಡಿದಾಗ ಬಹಳ ಸಲೀಸಾಗಿ ಕಥೆ ಬೆಳೆಯುತ್ತಾ ಹೋಯಿತು. ಭೈರತಿ ರಣಗಲ್ ಗ್ಯಾಂಗ್‌ಸ್ಟರ್ ಆಗಿದ್ದು ಹೇಗೆ? ಸದಾ ಆ ಬ್ಲಾಕ್ ಡ್ರೆಸ್ ಯಾಕೆ ಹಾಕುತ್ತಾರೆ ಎನ್ನುವುದೇ ಚಿತ್ರದ ಕಥೆ. ಈಗಾಗಲೇ ಶೇ.70ರಷ್ಟು ಚಿತ್ರೀಕರಣ ಮುಗಿದಿದೆ ಎಂದು ಹೇಳಿದರು. ಚಿತ್ರದಲ್ಲಿ ಶಿವರಾಜಕುಮಾರ್, ರುಕ್ಮಿಣಿ ವಸಂತ್, ರಾಹುಲ್ ಬೋಸ್, ಅವಿನಾಶ್, ದೇವರಾಜ್, ಮಧು ಗುರುಸ್ವಾಮಿ, ಛಾಯಾಸಿಂಗ್, ಬಾಬು ಹಿರಣ್ಣಯ್ಯ ಮುಂತಾದವರಿದ್ದಾರೆ. ನವೀನ್‌ಕುಮಾರ್ ಛಾಯಾಗ್ರಹಣ, ರವಿ ಬಸ್ರೂರು ಸಂಗೀತ ಚಿತ್ರಕ್ಕಿದೆ.



'ದಿ ಎಂಡ್' ಚಿತ್ರದಲ್ಲಿ ಹನುಮಾನ್ ಚಾಲೀಸ

ಇತ್ತೀಚೆಗೆ ಶ್ರೀರಾಮ, ಹನುಮಾನ್ ಹೆಚ್ಚು ಸುದ್ದಿಯಲ್ಲಿರುವ ಪದಗಳು, ಇದೀಗ ಕನ್ನಡ ಚಿತ್ರವೊಂದರಲ್ಲಿ ಹನುಮಾನ್ ಚಾಲೀಸವನ್ನು ಬಳಸಿಕೊಳ್ಳಲಾಗಿದೆ, ಆ ಚಿತ್ರದ ಹೆಸರು ದಿ ಎಂಡ್. ಪವನ್‌ಕುಮಾರ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದ ಹನುಮಾನ್ ಚಾಲೀಸ ಲಿರಿಕಲ್ ಹಾಡು ಇತ್ತೀಚೆಗೆ ಬಿಡುಗಡೆಯಾಯಿತು.

ಕನ್ನಡದ ಪ್ರಥಮ ಸೂಪರ್ ಹೀರೋ ಕಾನ್ಸೆಪ್ಟ್ ಹೊಂದಿದ ಈ ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯ ಹಂತ ತಲುಪಿದ್ದು, ಐದು ದಿನಗಳ ಶೂಟಿಂಗ್ ಮಾತ್ರ ಬಾಕಿಯಿದೆ. ಹದಿನೆಂಟು ಪುರಾಣಗಳನ್ನು ಆಧರಿಸಿ ಕಥೆ ಚಿತ್ರಕಥೆ ಹೆಣೆಯಲಾಗಿರುವ ಈ ಚಿತ್ರವನ್ನು ಕನ್ನಡ ಸೇರಿದಂತೆ ದೇಶದ ಒಂಭತ್ತು ಭಾಷೆಗಳಲ್ಲಿ ನಿರ್ಮಿಸಲಾಗುತ್ತಿದೆ.

ನಿರ್ದೇಶಕ ಪವನ್‌ಕುಮಾರ್ ಮಾತನಾಡುತ್ತ, ಸರ್ವಕಾಲಿಕ ಸೂಪರ್ ಹೀರೋ ಹನುಮಂತನ ಮಹಿಮೆಯನ್ನು ವರ್ಣಿಸುವ ಹನುಮಾನ್ ಚಾಲೀಸಾ ಹಾಡನ್ನು ಈ ಚಿತ್ರದಲ್ಲಿ ಸಂದರ್ಭಕ್ಕನುಗುಣವಾಗಿ ಬಳಸಿಕೊಂಡಿದ್ದೇವೆ. ಐದು ಪ್ರಸಿದ್ಧ ಶಿವ ದೇಗುಲಗಳಲ್ಲಿ ಏಕಕಾಲಕ್ಕೆ ಈ ಹಾಡು ಬಿಡುಗಡೆಯಾಗಿರುವುದು ವಿಶೇಷ. ಅರುಣ್ ಆಂಡ್ರ್ಯೂ ಅವರು ಸಂಗೀತ ಸಂಯೋಜನೆ ಮಾಡಿರುವ ಈ ಹಾಡನ್ನು ಮಧುಕುಮಾರ್ ಭಾವಪರವಶರಾಗಿ ಹಾಡಿದ್ದಾರೆ. ಅಂದುಕೊಂಡ ಹಾಗೆ ಆದರೆ ದಿ ಎಂಡ್ ಚಿತ್ರವನ್ನು ಇದೇ ಮೇ ತಿಂಗಳಲ್ಲಿ ರಿಲೀಸ್ ಮಾಡಲು ಸಿದ್ದತೆ ಮಾಡಿಕೊಂಡಿದ್ದೇವೆ ಎಂದು ಹೇಳಿದರು.



ನಿರ್ದೇಶಕ ಪವನ್‌ಕುಮಾರ್ ಅವರು ಈ ಚಿತ್ರದಲ್ಲಿ ತೆಗೆದುಕೊಂಡಿರುವ ಕಾನ್ಸೆಪ್ಟ್ ಚೆನ್ನಾಗಿದೆ. ಸೂಪರ್ ಹೀರೋ ಎಂದರೆ ವಿಶೇಷ ಶಕ್ತಿಯುಳ್ಳವನು ಎಂದರ್ಥ. ಈ ಚಿತ್ರದಲ್ಲಿ ನಾನು ಸೂಪರ್ ಹೀರೋ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ನಾಯಕ ರವಿಶೇಖರ್ ಹೇಳಿದರು. ಚಿತ್ರದ ನಾಯಕಿ ಪವಿತ್ರ, ವಿಶೇಷ ಪಾತ್ರದಲ್ಲಿ ನಟಿಸಿರುವ ನಟಿ ಚೈತ್ರಾ ಕೊಟ್ಟೂರ್, ಸಂಗೀತ ನಿರ್ದೇಶಕ ಅರುಣ್ ಆಂಡ್ರ್ಯೂ, ಗಾಯಕ ಮಧುಕುಮಾರ್ ಸೇರಿದಂತೆ ದಿ ಎಂಡ್ ಚಿತ್ರತಂಡದ ಅನೇಕ ಸದಸ್ಯರು ಸಿನಿಮಾ ಕುರಿತಂತೆ ಮಾತನಾಡಿದರು. ಈ ಚಿತ್ರದಲ್ಲಿ ಬರುವ ವಿಶೇಷ ಪಾತ್ರವೊಂದಕ್ಕೆ ಕನ್ನಡದ ಹಿರಿಯನಟ ಅನಂತನಾಗ್ ಅವರ ಜೊತೆ ಮಾತುಕತೆ ನಡೆಯುತ್ತಿದೆ. ಫೈನಲ್ ಆದರೆ ಅವರೂ ಸಹ ಈ ಚಿತ್ರದ ಭಾಗವಾಗಲಿದ್ದಾರೆ.

ಮಾ.22ಕ್ಕೆ 'ಅವತಾರ ಪುರುಷ'ನ ಮತ್ತೊಂದು ಅವತಾರ

ಶರಣ್ ನಟನೆಯ ಅವತಾರ ಪುರುಷ ಚಿತ್ರದ ಮುಂದುವರಿದ ಭಾಗ ಅವತಾರ ಪುರುಷ 2 ಮಾರ್ಚ್ 22ರಂದು ತೆರೆ ಕಾಣುತ್ತಿದೆ. ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ಹಂಚಿಕೊಂಡ ನಿರ್ದೇಶಕ ಸಿಂಪಲ್ ಸುನಿ, 2022ರಲ್ಲಿ ತೆರೆಕಂಡ ಅವತಾರ ಪುರುಷ ಫ್ಯಾಂಟಸಿ ಕಥೆಯನ್ನು ಒಂದು ಭಾಗದಲ್ಲಿ ಹೇಳಲು ಸಾಧ್ಯವಿರಲಿಲ್ಲ. ಹಾಗಾಗಿ ನಿರ್ಮಾಣ ಹಂತದಲ್ಲೇ 2 ಪಾರ್ಟ್ ಮಾಡಿಕೊಂಡಿದ್ದೆವು. ಎಲ್ಲರೂ ಎರಡನೇ ಭಾಗವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಕೇಳುತ್ತಿದ್ದರು, ಈಗ ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. ಇದೇ ತಿಂಗಳ 22ರಂದು ಅವತಾರ ಪುರುಷ 2 ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಚಿತ್ರದ ಮೊದಲ ಭಾಗ ನೋಡಿದವರಿಗೆ ಹಾಗೂ ನೋಡದವರಿಗೂ ಈ ಚಿತ್ರ ಇಷ್ಟವಾಗುತ್ತದೆ, ಮೊದಲ ಭಾಗದಲ್ಲಿದ್ದ ಕನ್‌ಫ್ಯೂಷನ್‌ಗಳಿಗೆಲ್ಲ ಇಲ್ಲಿ ಉತ್ತರವಿದೆ. ಚಿತ್ರದಲ್ಲಿ ಶರಣ್, ಆಶಿಕಾ ರಂಗನಾಥ್ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ವಿಶಿಷ್ಟ ಪಾತ್ರದಲ್ಲಿ ಶ್ರೀನಗರ ಕಿಟ್ಟಿ ಕಾಣಿಸಿಕೊಂಡಿದ್ದಾರೆ. ಸಾಯಿಕುಮಾರ್, ಸಾಧುಕೋಕಿಲ, ಸುಧಾರಾಣಿ, ಭವ್ಯ ಉಳಿದ ತಾರಾಬಳಗದಲ್ಲಿದ್ದಾರೆ ಎಂದರು. ನಿರ್ಮಾಪಕ ಪುಷ್ಕರ್ ಮಲ್ಲಿಕಾರ್ಜುನಯ್ಯ ಮಾತನಾಡುತ್ತ, ಅವತಾರ ಪುರುಷ 2ರಲ್ಲಿ ಮೊದಲ ಚಿತ್ರಕ್ಕಿಂತ ಹೆಚ್ಚು ಗ್ರಾಫಿಕ್ಸ್ ಇದೆ, ಚಿತ್ರ ಪ್ರತಿ ಕ್ಷಣ ನೋಡಿಸಿಕೊಂಡು ಹೋಗುತ್ತದೆ. ಸದ್ಯದಲ್ಲೇ ಟ್ರೈಲರ್ ಹಾಗೂ ಹಾಡುಗಳನ್ನು ರಿಲೀಸ್ ಮಾಡಲಿದ್ದೇವೆ ಎಂದು ಮಾಹಿತಿ ನೀಡಿದರು,

ನಿರ್ದೇಶಕ ಸಿಂಪಲ್ ಸುನಿ ಹಾಗೂ ನಿರ್ಮಾಪಕ ಪುಷ್ಕರ್ ಮಲ್ಲಿಕಾರ್ಜುನಯ್ಯ ಅವರ ಸಿನಿಮಾ ಪ್ರೀತಿ ನನಗೆ ಬಹಳ ಇಷ್ಟ ಎಂದು ಮಾತು ಆರಂಭಿಸಿದ ನಟ ಶರಣ್, ನನ್ನನ್ನು ಕೂಡ ಬಹಳಷ್ಟು ಜನ ಅವತಾರ ಪುರುಷ 2 ಯಾವಾಗ ಬಿಡುಗಡೆಯಾಗುತ್ತದೆ ಎಂದು ಕೇಳುತ್ತಿದ್ದರು. ಚಿತ್ರದ ಎರಡನೇ ಭಾಗ ಇಷ್ಟು ಕುತೂಹಲ ಹುಟ್ಟಿಸಿದೆ ಎಂದರೆ ನಿಜಕ್ಕೂ ಮೊದಲ ಭಾಗ ಎಲ್ಲರಿಗೂ ಇಷ್ಟವಾಗಿದೆ ಎಂದರ್ಥ. ನಾನು, ನನ್ನ ಯಾವ ಸಿನಿಮಾವನ್ನು ಮೊದಲು ನೋಡುವುದಿಲ್ಲ. ಅಭಿಮಾನಿಗಳ ಜೊತೆ ಚಿತ್ರಮಂದಿರದಲ್ಲೇ ನೋಡುತ್ತೇನೆ. ಈ ಚಿತ್ರವನ್ನು ನೋಡಲು ನಾನು ಸಹ ಕಾತುರದಿಂದ ಕಾಯುತ್ತಿದ್ದೇನೆ. ಕೆಲವರು ಚಿತ್ರ ಸ್ವಲ್ಪ ತಡವಾಯಿತು ಎನ್ನುತ್ತಿದ್ದಾರೆ. ಹಾಗೇನಿಲ್ಲ. ಮೊದಲ ಭಾಗ ಕೂಡ 22ರಲ್ಲೇ ಬಿಡುಗಡೆಯಾಗಿತ್ತು. ಇದು ಕೂಡ 22ರಂದೇ ಬಿಡುಗಡೆಯಾಗುತ್ತಿದೆ. ಮೊದಲ ಭಾಗ 2022ರಲ್ಲಿ. ಎರಡನೇ ಭಾಗ 2024ರ ಮಾರ್ಚ್ 22ರಂದು ರಿಲೀಸಾಗುತ್ತಿದೆ ಎಂದರು.

ಬಹಳ ದಿನಗಳ ನಂತರ ನನ್ನ ಅಭಿನಯದ ಕನ್ನಡ ಚಿತ್ರವೊಂದು ಬಿಡುಗಡೆಯಾಗುತ್ತಿದೆ. ಒಳ್ಳೆಯ ತಂಡದೊಂದಿಗೆ ಕೆಲಸ ಮಾಡಿರುವ ಖುಷಿಯಿದೆ ಎಂದು ನಾಯಕಿ ಆಶಿಕಾ ರಂಗನಾಥ್ ಹೇಳಿದರೆ, ಅವತಾರ ಪುರುಷ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಕಾಣಿಸಿಕೊಂಡು ಕುತೂಹಲ ಹುಟ್ಟಿಸಿದ್ದ ನಟ ಶ್ರೀನಗರ ಕಿಟ್ಟಿ ಮಾತನಾಡುತ್ತ, ಈ ಚಿತ್ರದಲ್ಲಿ ತಾನು ಕುಮಾರ ಎಂಬ ವಿಶಿಷ್ಟ ಪಾತ್ರದಲ್ಲಿ ಅಭಿನಯಿಸಿರುವುದಾಗಿ ಹೇಳಿದರು.

ಸಿನಿಪದಬಂಧ-517

1		2			3	4				5
			6		7			8		
9										
							10			
		11								
12							13			14
					15					
16				17						
								18		
		19					20			

ಹೆಸರು ________
ವಿಳಾಸ ________
____
ದೂರವಾಣಿ ಸಂಖ್ಯೆ ________

ಎಡದಿಂದ ಬಲಕ್ಕೆ

1. ರಘುವೀರ್-ಸಿಂಧು ಅಭಿನಯದಲ್ಲಿ ನದಿಗಳೆರಡು ಸಂಗಮಿಸಿವೆ 4
3. ವಿಶ್ವಕ್ಕೆ ಒಡೆಯ ಈ ಹಿರಿಯ ಪೋಷಕ ನಟ 4
7. ಶಂಕರ್ ನಾಗ್ ಅಭಿನಯದಲ್ಲಿ ನರನೊಂದಿಗೆ ರಾಕ್ಷಸನು ಇದ್ದಾನೆ 6
9. ಅಜಯ್ ರಾವ್ ಅವರ ಅಂತರಾಳದ ನುಡಿ 6
10. ರಘುವೀರ್ ಅವರ ಚಿನ್ನದ ರಶ್ಮಿ 4
12. ದ್ವಾರಕೀಶ್-ಜಯಚಿತ್ರ ಕುಬ್ಜರು 4
15. ಮಂಜುಳಾ ಅಭಿನಯದಲ್ಲಿ ನೆನಪಿನಲ್ಲುಳಿದ ಗೀತೆ 6
16. ದುನಿಯಾ ವಿಜಿ ಕಲ್ಯಾಣಿ ರಾಜ್ ಅವರ ಪುತ್ರ 6
19. ಪಲ್ಲವಿ ಅನುಪಲ್ಲವಿ ಚಿತ್ರದ ನಿರ್ದೇಶಕ 4
20. ಕುಮಾರ್ ಬಂಗಾರಪ್ಪ ನೂತನ ಪ್ರತಿಭೆ 4

ಮೇಲಿನಿಂದ ಕೆಳಕ್ಕೆ

1. ವಿಷ್ಣುವರ್ಧನ್ ನೇತೃತ್ವದ ಅವಿಭಕ್ತ ಕುಟುಂಬ 5
2. ಪ್ರಜ್ವಲ್ ದೇವರಾಜ್ ಅಭಿನಯಕ್ಕೆ ಮಹೇಶ್ ರಾವ್ ನಿರ್ದೇಶಕ 2
4. ವನದಲ್ಲಿ ಕುಳಿತು ಬರೆದ ಪದ್ಯ 3
5. ಜಗ್ಗೇಶ್ ಶಿವ ಸ್ವರೂಪಿ 3
6. ಗಣೇಶ ಸುಬ್ರಮಣ್ಯ ಚಿತ್ರದ ನಾಯಕಿ 3
7. ಅನಂತ್ ನಾಗ್ ನಾಲಿಗೆಗೆ ನಡೆದು ಕೊಂಡಿದ್ದಾನೆ 7
8. ಬಿ.ಸಿ.ಪಾಟೀಲ್ ನಡೆಸಿದ ಗುಂಡಾ ವರ್ತನೆ 4
11. ಡಿವಿಜಿ ಅವರ ಕಗ್ಗ ನೆನಪಿಸಿಕೊಂಡರೆ ದ್ವಾರಕೀಶ್ ಚಿತ್ರ ಪ್ರತ್ಯಕ್ಷ! 4
13. ರವಿಶಂಕರ್-ರಮಣಿತ್ ಚೌಧರಿ ಅವರ ಜರ್ನಿ 3
14. ಚಂದ್ರಶೇಖರ ಕಂಬಾರ ಅವರ ಪ್ರಾಣಿ 5
16. ನಾಗರಹಾವು ಚಿತ್ರದ ಅಂಬರೀಷ್ ಪಾತ್ರ 3
17. ವೃಕ್ಷದ ನಡುವೆ ದ್ವೇಷವಿದೆ 3
18. ಕುಶನೊಂದಿಗೆ ಬಂದವನು 2

ವಿಜೇತರು: ಚಂದ್ರಶೇಖರಾರಾಧ್ಯ, ಅಗಸನಪುರ ಮಳವಳ್ಳಿ (ತಾ)-571475



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 516ರ ಉತ್ತರ

ಶಿ	ವ	ರಾ	ತ್ರಿ		ಭ	ಕ್ತ	ಪ್ರ	ಹ್ಲಾ	ದ	
ವ		ಜ			ಲೇ				ಶಾ	
ಪ್ಪ			ರಾ	ಜಾ	ಹು	ಲಿ		ದೇ	ವ	
ನಾ	ನೇ	ರಾ	ಜ		ಡು		ನಂ		ತಾ	
ಯ			ಯು		ಗ		ಬಿ		ರ	
ಕ		ಶಿ	ವ	ಣ್ಣ		ಅಂ	ಬಿ	ಕಾ		ಭ
	ಅ		ರಾ		ಅ		ಟ್ರೆ			ಕ್ತ
	ಮ		ಜ		ರು		ಬಿ	ಸಿ	ಬಿ	ಸಿ
	ರ	ವ್ಯ		ರ	ಣ	ಚಂ	ಡಿ			ರಿ
	ಪ್ರೇ				ರಾ			ನಾ		ಯಾ
	ಮ	ಣ್ಣೆ	ನ	ಮ	ಗ		ರಾ	ಗ	ತಾ	ಳ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಬನಾರಸ್ ನಾಯಕನ ಹೊಸಚಿತ್ರಕ್ಕೆ ಅನಿಲ್‌ಕುಮಾರ್ ಆಕ್ಷನ್ ಕಟ್

ಬನಾರಸ್ ನಾಯಕ ಜೈದ್‌ಖಾನ್ ಮತ್ತೊಂದು ಚಿತ್ರದಲ್ಲಿ ನಟಿಸುತ್ತಿದ್ದಾರೆ, ಆ ಚಿತ್ರಕ್ಕೆ ಉಪಾಧ್ಯಕ್ಷ ಖ್ಯಾತಿಯ ಅನಿಲ್‌ಕುಮಾರ್ ಆಕ್ಷನ್ ಕಟ್ ಹೇಳಲಿದ್ದಾರೆ. ದಿಲ್‌ವಾಲ, ಶಕ್ತಿ ಹಾಗೂ ರ್‍ಯಾಂಬೊ 2 ಚಿತ್ರಗಳನ್ನು ನಿರ್ದೇಶಿಸಿದ ಅನಿಲ್‌ಕುಮಾರ್ ಇತ್ತೀಚೆಗೆ ತೆರೆಕಂಡ ಚಿಕ್ಕಣ್ಣ ಅಭಿನಯದ "ಉಪಾಧ್ಯಕ್ಷ" ಚಿತ್ರವನ್ನೂ ನಿರ್ದೇಶಿಸಿದ್ದರು. ಇದೀಗ ಅನಿಲ್‌ಕುಮಾರ್ ಹಾಗೂ ಝೈದ್‌ಖಾನ್ ಕಾಂಬಿನೇಶನ್‌ನಲ್ಲಿ ನೂತನ ಚಿತ್ರವೊಂದು ಮೂಡಿಬರಲಿದೆ.

ಬನಾರಸ್ ನಂತರ ಸಾಕಷ್ಟು ಕಥೆಗಳನ್ನು ಕೇಳಿದ ಝೈದ್‌ಖಾನ್ ಅವರಿಗೆ ಯಾವ ಕಥೆಯೂ ಇಷ್ಟವಾಗಿಲ್ಲ. ಆದರೆ ಅನಿಲ್‌ಕುಮಾರ್ ಹೇಳಿದ ಒಂದು ಲೈನ್ ಇಷ್ಟಪಟ್ಟು ಅಭಿನಯಿಸಲು ಮುಂದೆ ಬಂದಿದ್ದಾರೆ. ಕ್ಲಾಸ್ ಮತ್ತು ಮಾಸ್ ಎರಡೂ ವರ್ಗದ ಆಡಿಯನ್ಸ್ ಇಷ್ಟಪಡುವ ಕಥೆಯಿದಾಗಿದ್ದು, ಹೆಸರಾಂತ ನಿರ್ಮಾಣ ಸಂಸ್ಥೆ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ನುರಿತ ತಂತ್ರಜ್ಞರ ದೊಡ್ಡ ತಂಡವೇ ಈ ಚಿತ್ರದಲ್ಲಿರಲಿದೆ. ತಾಂತ್ರಿಕವರ್ಗ ಹಾಗೂ ತಾರಾಬಳಗದ ಕುರಿತು ಹೆಚ್ಚಿನ ಮಾಹಿತಿಯನ್ನು ಸದ್ಯದಲ್ಲೇ ನೀಡುವುದಾಗಿ ನಿರ್ದೇಶಕ ಅನಿಲ್ ಕುಮಾರ್ ತಿಳಿಸಿದ್ದಾರೆ.

2.7 ಕೋಟಿ ವೆಚ್ಚದ ಕಾಲೇಜು ಕೊಠಡಿ ಕಾಮಗಾರಿಗೆ ಚಾಲನೆ

ಹೆಚ್.ಡಿ.ಕೋಟೆ, ಮಾ.14– ತಾಲೂಕಿಗೆ ಪ್ರಪ್ರಥಮವಾಗಿ ಬಿಎಸ್ಸಿ ಕಾಲೇಜು ತರುವ ನಿಟ್ಟಿನಲ್ಲಿ ಸತತ ಪ್ರಯತ್ನ ಮಾಡಿ ಯಶಸ್ಸು ಕಂಡಿದ್ದೇವೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ 2.7 ಕೋಟಿ ವೆಚ್ಚದ ಕಾಲೇಜು ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹೆಚ್.ಡಿ.ಕೋಟೆ ತಾಲೂಕಿಗೆ ಪ್ರಥಮವಾಗಿ ಬಿಎಸ್ಸಿ ಕಾಲೇಜನ್ನು ತರುವ ನಿಟ್ಟಿನಲ್ಲಿ ಸತತ ಪ್ರಯತ್ನ ಮಾಡಿ, ಶಿಕ್ಷಣ ಇಲಾಖೆ ಸಚಿವರೊಂದಿಗೆ ಚರ್ಚಿಸಿ ಹಾಗೂ ಮುಖ್ಯಮಂತ್ರಿಗಳಿಗೂ ಮನವಿ ಸಲ್ಲಿಸಿದ್ದೆ. ಅದರಂತೆ ಅದು ಯಶಸ್ಸು ಕಂಡಿದೆ ಎಂದರು.

ಪಟ್ಟಣದ ಪದವಿ ಪೂರ್ವ ಕಾಲೇಜಿಗೆ 2 ಕೋಟಿ 70 ಲಕ್ಷ ವೆಚ್ಚದಲ್ಲಿ ನೂತನವಾಗಿ 6 ಕೊಠಡಿಗಳನ್ನು ನಿರ್ಮಾಣ ಮಾಡಲು ಭೂಮಿ ಪೂಜೆ ನೆರವೇರಿಸಿದ್ದೇನೆ. ಈಗಾಗಲೇ ಒಂದು ಕೋಟಿ ವೆಚ್ಚದಲ್ಲಿ 5 ಕೊಠಡಿಗಳ ನಿರ್ಮಾಣ ಕಾಮಗಾರಿ ಪ್ರಗತಿ ಹಂತದಲ್ಲಿದೆ. ಮುಂದಿನ ಶೈಕ್ಷಣಿಕ ವರ್ಷಕ್ಕೆ ಈ ಕೊಠಡಿಗಳು ಲೋಕಾರ್ಪಣೆಗೊಳ್ಳಲಿವೆ ಎಂದರು.



ಹೆಚ್.ಡಿ.ಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜು ಕೊಠಡಿ ನಿರ್ಮಾಣ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

ತಾಲೂಕಿನಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ರಾಜ್ಯದಲ್ಲಿ ನಮ್ಮದೇ ಸರ್ಕಾರ ಅಸ್ತಿತ್ವದಲ್ಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ತವರು ಜಿಲ್ಲೆಯವರೇ ಆಗಿರುವುದರಿಂದ ಅವರ ಗಮನ ಸೆಳೆದು ಇನ್ನೂ ಹೆಚ್ಚಿನ ಅನುದಾನ ತರಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಹೆಚ್.ಆರ್.ಅರುಣ್ ಕುಮಾರ್, ವೈಮುಲ್ ನಿರ್ದೇಶಕ ಈರೇಗೌಡ, ಕೊಡಸಿಗೆ ರಾಜೇಗೌಡ, ನಾಗನಹಳ್ಳಿ ಪ್ರದೀಪ, ಕುಲುಮೆ ರಾಜು, ಸುದರ್ಶನ್, ಪ್ರಾಧ್ಯಾಪಕರಾದ ಕಾತ್ಯಾಯಿನಿ, ಗಣೇಶ, ಕೆಂಪರಾಜು, ಪುಷ್ಪಲತಾ, ಪೂರ್ಣಿಮಾ, ರಾಜಶೇಖರ, ಪುಟ್ಟರಾಜು, ನಿಂಗರಾಜು, ಬೋರಮ್ಮ ಅಂಗಡಿ, ದಮ್ಮೂರಪ್ಪ, ಗುರುದತ್ತ ಕುಮಾರ್, ಬಾಲಾಜಿ, ಮಹದೇವಮ್ಮ ಸೇರಿದಂತೆ ಇನ್ನಿತರರಿದ್ದರು.

‘ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನಾನೇ ಅಧ್ಯಕ್ಷನಾಗಿದ್ದು, ಈಗಾಗಲೇ ಸಾಕಷ್ಟು ಅನುದಾನ ತಂದು ಕಾಲೇಜಿನ ಅಭಿವೃದ್ಧಿ ಮಾಡಿದ್ದೇನೆ. ಮುಂದಿನ ದಿನಗಳಲ್ಲೂ ಹೆಚ್ಚಿನ ಅನುದಾನ ತಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಮಾದರಿಯಾಗಿ ಮಾಡಲಾಗುವುದು. ಕ್ಷೇತ್ರದಲ್ಲಿ ಹೆಚ್ಚು ಬಡ ವಿದ್ಯಾರ್ಥಿಗಳಿದ್ದು, ಅವರು ಗುಣಮಟ್ಟದ ಶಿಕ್ಷಣ ಪಡೆದು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಗುವ ಮೂಲಕ ಉನ್ನತ ಹುದ್ದೆ ಅಲಂಕರಿಸುವ ಮೂಲಕ ತಾಲೂಕಿಗೆ ಕೀರ್ತಿ ತರಬೇಕು.

- ಅನಿಲ್ ಚಿಕ್ಕಮಾದು, *ಶಾಸಕ*.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಸೈರನ್ 108 (ತ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಯೋಧ (ಹಿಂ)	4 ಪ್ರದರ್ಶನಗಳು
ಸಂಗಂ	
ಕೆರೆಬೇಟೆ (ಕ)	4 ಪ್ರದರ್ಶನಗಳು
ಲಿಡೋ	
ಹೈಡ್ ಅಂಡ್ ಸೀಕ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸೈರನ್ (ತ)	4 ಪ್ರದರ್ಶನಗಳು
ಪ್ರಭಾ	
ಸೋಮು ಸೌಂಡ್ ಇಂಜಿನಿಯರ್ (ಕ)	4 ಪ್ರದರ್ಶನಗಳು

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿಜೃಂಭಣೆಯ ಮಸಣಿಕಮ್ಮನವರ ಜಾತ್ರಾ ಮಹೋತ್ಸವ



ಪಿ.ಪಟ್ಟಣದಲ್ಲಿ ಶ್ರೀಮಸಣಿಕಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಪಿರಿಯಾಪಟ್ಟಣ, ಮಾ.14– ಪಟ್ಟಣದ ಗ್ರಾಮದೇವತೆ ಶ್ರೀಮಸಣಿಕಮ್ಮನವರ ಜಾತ್ರಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮುಂಜಾನೆಯಿಂದಲೇ ದೇವಾಲಯದಲ್ಲಿ ಗಣಪತಿ ಹೋಮ, ಲಕ್ಷ್ಮಿ ಪೂಜೆ, ನವಗ್ರಹ ಹೋಮ ಸೇರಿದಂತೆ ಹಲವು ಧಾರ್ಮಿಕ ಪೂಜಾ ಕೈಂಕರ್ಯಗಳು ನೆರವೇರಿತು. ಬೆಳಗ್ಗೆ 11.30ಕ್ಕೆ ಬಗೆ ಬಗೆಯ ಪುಷ್ಪ ಹಾಗೂ ತಳಿರು ತೋರಣ ಮತ್ತು ಬಟ್ಟೆಗಳಿಂದ ಅಲಂಕೃತವಾದ ತೇರಿನಲ್ಲಿ ಮಸಣಿಕಮ್ಮನವರ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ರಥೋತ್ಸವ ತೇರಿನ ಬೀದಿಯಲ್ಲಿ ಸಾಗುತ್ತಿದ್ದ ವೇಳೆ ರಥಕ್ಕೆ ಭಕ್ತರು ಹಣ್ಣು, ಜವನ ಎಸೆದು ಭಕ್ತಿ ಸಮರ್ಪಿಸಿದರು. ಇನ್ನು ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಭಕ್ತರಿಗೆ ವಿವಿಧ ಸಂಘಟನೆಗಳ ಮುಖಂಡರು ಊಟದ ವ್ಯವಸ್ಥೆ ಮಾಡಿದ್ದರು.

ಜನರಿಗೆ ಮೋದಿ ಸರ್ಕಾರದ ಸಾಧನೆ ತಿಳಿಸಿ

ಎಲ್‌ಇಡಿ ವಿಡಿಯೋ ರಥ ವಾಹನದ ಸಂಚಾಲಕ ಮಹದೇವಸ್ವಾಮಿ



ಮತ್ತೊಮ್ಮೆ ಮೋದಿ ಸರ್ಕಾರ ಎಲ್‌ಇಡಿ ವಿಡಿಯೋ ಪ್ರಚಾರ ರಥ ವಾಹನಕ್ಕೆ ಚಾಲನೆ ನೀಡಲಾಯಿತು.

ನಂಜನಗೂಡು, ಮಾ.14– ಕಳೆದ 10 ವರ್ಷಗಳ ಪ್ರಧಾನಿ ಮೋದಿ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸುವ ಮೂಲಕ ಕಾರ್ಯಕರ್ತರು ತಳಮಟ್ಟದಿಂದ ಪಕ್ಷ ಸಂಘಟಿಸಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದು ಎಲ್‌ಇಡಿ ವಿಡಿಯೋ ರಥ ವಾಹನದ ಸಂಚಾಲಕ ಮಹದೇವಸ್ವಾಮಿ ತಿಳಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯದ ಮುಂಭಾಗ ಬಿಜೆಪಿ ವತಿಯಿಂದ ಏರ್ಪಡಿಸಿದ್ದ ಮತ್ತೊಮ್ಮೆ ಮೋದಿ ಸರ್ಕಾರ ಎಂಬ ಎಲ್‌ಇಡಿ ವಿಡಿಯೋ ಪ್ರಚಾರ ರಥ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಿ ಮೋದಿ ಸಾಮಾಜಿಕ, ಆರ್ಥಿಕ, ಮೂಲಸೌಕರ್ಯ, ರಕ್ಷಣೆ, ವಿದೇಶಾಂಗ ಕ್ಷೇತ್ರಗಳಲ್ಲಿ ಅನೇಕ ಬದಲಾವಣೆ ತಂದು ಭಾರತವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ದಿದ್ದಾರೆ. ಜೊತೆಗೆ ವಿಶ್ವಮಟ್ಟದಲ್ಲಿ ಭಾರತದ ಹಿರಿಮೆ ಹೆಚ್ಚಿಸಿದ ಕೀರ್ತಿ ಅವರದ್ದಾಗಿದೆ. ಅಲ್ಲದೇ ಉಜ್ವಲ, ಕಿಸಾನ್ ಸಮ್ಮಾನ್ ಯೋಜನೆ, ಜನೌಷಧಿ ಕೇಂದ್ರಗಳ ಸ್ಥಾಪನೆ, ಡಿಜಿಟಲ್ ಇಂಡಿಯಾ ಸ್ಥಾಪನೆ, ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದತಿ, ಜಲಜೀವನ್ ಮಿಷನ್ ಸೇರಿದಂತೆ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿ ಬಡವರಿಗೆ ನೆರವಾಗಿದ್ದಾರೆ. ಅವರ ಕಳೆದ 10 ವರ್ಷಗಳ ಸಂಕ್ಷಿಪ್ತ ಸಾಧನೆಗಳನ್ನು ಒಳಗೊಂಡ ವಿಡಿಯೋವನ್ನು ಎಲ್‌ಇಡಿ ಪ್ರಚಾರ ರಥದ ಮೂಲಕ ಜನರಿಗೆ ತಿಳಿಸಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸಿ ಮೋದಿ ಕೈ ಬಲಪಡಿಸಬೇಕು ಎಂದರು. ತಾಲೂಕು ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ ಮಾತನಾಡಿ, ಈ ಪ್ರಚಾರ ರಥ ಮುಂದಿನ 3 ದಿನ ನಂಜನಗೂಡು ಕ್ಷೇತ್ರದ ಪ್ರಮುಖ ಗ್ರಾಮಗಳಲ್ಲಿ ಸಂಚರಿಸಿ ಮೋದಿ ಸರ್ಕಾರ ಸಾಧನೆಗಳನ್ನು ಜನರಿಗೆ ತಿಳಿಸಲಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಬಿಜೆಪಿ ನಗರ ಮಂಡಲ ಅಧ್ಯಕ್ಷ ಸಿದ್ದರಾಜು, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಧುರಾಜ್, ನಗರಸಭಾ ಸದಸ್ಯ ಮಹದೇವ ಪ್ರಸಾದ್, ಮುಖಂಡರಾದ ಶಂಕರಪ್ಪ, ರಾಘವೇಂದ್ರ, ಮನೋಜ್ ಕುಮಾರ್, ಸಿದ್ದರಾಜು, ನಾಗೇಂದ್ರ ಚುದ್ರು ಜಯರಾಮು, ಉಮೇಶ್, ಅಜಿತ್‌ಕುಮಾರ್, ಹೇಮಂತ್ ಕುಮಾರ್ ಸೇರಿದಂತೆ ಇತರರಿದ್ದರು.

ಮೋದಿ ಸರ್ಕಾರದಿಂದ ಜನಪರ ಕಾರ್ಯಕ್ರಮ ಜಾರಿ

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್



ಎಲ್‌ಇಡಿ ವಿಡಿಯೋ ಪ್ರಚಾರ ರಥ ವಾಹನಕ್ಕೆ ಚಾಲನೆ ನೀಡಲಾಯಿತು.

ತಿ.ನರಸೀಪುರ, ಮಾ.14– ಕಳೆದ 10 ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಪ್ರಧಾನಿ ಮೋದಿ ಅವರು ದೇಶದ ಎಲ್ಲಾ ವರ್ಗದವರಿಗೂ ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದಾರೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್ ತಿಳಿಸಿದರು.

ಪಟ್ಟಣದಲ್ಲಿ ಮತ್ತೊಮ್ಮೆ ಮೋದಿ ಸರ್ಕಾರ ಎಂಬ ಎಲ್‌ಇಡಿ ವಿಡಿಯೋ ಪ್ರಚಾರ ರಥ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜನೌಷಧ ಕೇಂದ್ರ ತೆರೆಯುವ ಮೂಲಕ ಬಡವರಿಗೆ ಕಡಿಮೆ ದರದಲ್ಲಿ ಔಷಧ ಕಲ್ಪಿಸಿದ್ದಾರೆ. ಸಾವಿರಾರು ಕಿಮೀ ಉದ್ದದ ರಸ್ತೆ ಅಭಿವೃದ್ಧಿ, ವಂದೇ ಭಾರತ್ ರೈಲು ಸೇವೆ ಹಾಗೂ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡಿ ದೇಶದ ರಾಮಭಕ್ತರ ಆಶಯಕ್ಕೆ ಅನುಗುಣವಾಗಿ ಪ್ರಧಾನಿ ಮೋದಿ ಕೆಲಸ ಮಾಡಿದ್ದಾರೆ. ಗಡಿ ಭದ್ರತೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಅಂತರಾಷ್ಟ್ರೀಯ ನಾಯಕರಿಂದಲೂ ಸೈ ಎನಿಸಿಕೊಂಡಿರುವ ಮೋದಿ ವಿಶ್ವ ನಾಯಕರಾಗಿ ಹೊರ ಹೊಮ್ಮಿದ್ದಾರೆ ಎಂದರು.

ಮೋದಿ ಅವರ ದೂರದೃಷ್ಟಿಯ ಫಲವಾಗಿ ಬಾಹ್ಯಾಕಾಶ ಸಂಶೋಧನೆಯಲ್ಲಿ ದೇಶ ಮತ್ತಷ್ಟು ಪ್ರಗತಿಯತ್ತ ಸಾಗುತ್ತಿದೆ. ಇತ್ತೀಚೆಗೆ ದೇಶದಲ್ಲಿ ಆಹಾರ ಸಮಸ್ಯೆ ಜಟಿಲಗೊಳ್ಳುತ್ತಿರುವ ವೇಳೆ ಭಾರತ್ ರೈಸ್ ನೀಡುವ ಮೂಲಕ ಅತಿ ಕಡಿಮೆ ಬೆಲೆಗೆ ಅಕ್ಕಿ, ಬೇಳೆ, ಗೋಧಿ ಹಿಟ್ಟು, ಎಣ್ಣೆ ನೀಡುವ ಯೋಜನೆ ಜಾರಿಗೊಳಿಸಿದ್ದಾರೆ. ಅಲ್ಲದೇ ಹೊಸ ಆವಿಷ್ಕಾರದ ಮೂಲಕ ದೇಶದ ಪ್ರಗತಿಯಲ್ಲಿ ಮುನ್ನಡೆ ಕಾಯ್ದುಕೊಂಡಿರುವ ಮೋದಿ ಮೆರಿಕಾ, ಫ್ರಾನ್ಸ್, ಚೈನಾಗಳಿಗೆ ಆರ್ಥಿಕ ಪೈಪೋಟಿ ನೀಡಲು ದಿಟ್ಟ ಹೆಜ್ಜೆ ಇಟ್ಟಿದ್ದಾರೆ ಎಂದು ಮೋದಿ ಕಾರ್ಯ ವೈಖರಿ ಕೊಂಡಾಡಿದ ಅವರು ಎಲ್ಲರೂ ಒಟ್ಟಾಗಿ ಮೈಸೂರು ಮತ್ತು ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಯಾರೇ ಅಭ್ಯರ್ಥಿಯಾದರೂ ಗೆಲ್ಲಿಸೋಣ ಎಂದರು.

ಮಂಡಲ ಅಧ್ಯಕ್ಷರಾದ ಶಿವಕುಮಾರ್ ಮಾತನಾಡಿದರು. ಈ ವೇಳೆ ಮಾಜಿ ಎಂಎಲ್‌ಸಿ ಸಿ.ರಮೇಶ್, ಚುನಾವಣಾ ಸಂಚಾಲಕ ಕರೋಹಟ್ಟಿ ಬಸವರಾಜ್, ಮಹದೇವಯ್ಯ, ಜಿಲ್ಲಾ ಓಬಿಸಿ ಮೋರ್ಚಾ ಅಧ್ಯಕ್ಷ ಬಾಲಚಂದ್ರ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್ ಸುಂದರೇಶ್, ಎಲ್‌ಇಡಿ ವಾಹನ ಲೋಕಸಭಾ ಕ್ಷೇತ್ರ ಸಹ ಸಂಚಾಲಕ ಮಧುರಾಜ್, ಕಿಟ್ಟಿ, ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಲೋಕೇಶ್, ಓಬಿಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೂಳಿ ಮಹೇಶ್, ಪುರಸಭಾ ಸದಸ್ಯ, ಟೌನ್ ಅಧ್ಯಕ್ಷ ಕಿರಣ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್, ಓಬಿಸಿ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್, ಮಂಜುನಾಥ್, ರಾಜಶೇಖರ್, ಸಂಜಯ್, ಓಬಿಸಿ ಮೋರ್ಚಾ ಮಹದೇವಶೆಟ್ಟಿ ಇನ್ನಿತರರಿದ್ದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ

ಸುನೀಲ್ ಬೋಸ್‌ಗೆ ಚಾ.ನಗರ ‘ಕೈ’ ಟಿಕೆಟ್ ನೀಡಲು ಮನವಿ



ಸುದ್ದಿಗೋಷ್ಠಿಯಲ್ಲಿ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ ಮಾತನಾಡಿದರು.

ನಂಜನಗೂಡು, ಮಾ.14– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಯುವ ಮುಖಂಡ ಸುನೀಲ್ ಬೋಸ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡುವಂತೆ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ ಕಾಂಗ್ರೆಸ್ ವರಿಷ್ಠರನ್ನು ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಮುಖಂಡ ಸುನೀಲ್ ಬೋಸ್ ಅವರು ನಂಜನಗೂಡು ಉಪ ಚುನಾವಣೆ ಸಂದರ್ಭ ಪಕ್ಷ ಸಂಘಟನೆಗೊಳಿಸಿ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಸಿದ್ಧರಾಗಿದ್ದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಕೊನೆ ಘಳಿಗೆಯಲ್ಲಿ ಅವರು ಟಿಕೆಟ್ ವಂಚಿತರಾದರೂ ಬೇಸರ ಮಾಡಿಕೊಳ್ಳದೇ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಿದ್ದಾರೆ. ಜೊತೆಗೆ ರಾಜ್ಯಾದ್ಯಂತ ಸಂಚರಿಸಿ ಯುವ ಸಮೂಹವನ್ನು ಕಾಂಗ್ರೆಸ್‌ನತ್ತ ಸೆಳೆದು ಪಕ್ಷ ಬಲವರ್ಧನೆಗೆ ದುಡಿಯುತ್ತಿದ್ದಾರೆ. ಅಲ್ಲದೇ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡಿದ್ದು, ಎಲ್ಲೆಡೆ ಅವರ ಪರ ಮತದಾರರ ಅಲೆ ಇದೆ. ಅವರು ಲೋಕಸಭಾ ಅಭ್ಯರ್ಥಿಯಾದಲ್ಲಿ ಗೆಲುವು ಶತಸಿದ್ಧ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯರಾದ ಚೋಳರಾಜು, ಕೆ.ಬಿ.ಸ್ವಾಮಿ, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ ಮುಖಂಡರಾದ ಅಜ್ಗರ್, ಬಸವೇಗೌಡ ಇದ್ದರು.

ಜ್ಞಾನ ವಿಕಾಸ ಕೇಂದ್ರದ ವಾರ್ಷಿಕೋತ್ಸವ



ಕಂಪಲಾಪುರ, ಮಾ.14– ಇಲ್ಲಿಗೆ ಸಮೀಪದ ಕಿರನಲ್ಲಿ ‘ಎ’ ಕಾರ್ಯ ಕ್ಷೇತ್ರದ ಶ್ರೀಆರಾಧ್ಯ ಜ್ಞಾನ ವಿಕಾಸ ಕೇಂದ್ರದ ವಾರ್ಷಿಕೋತ್ಸವ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಿವೃತ್ತ ಆರೋಗ್ಯಾಧಿಕಾರಿ ಜಾಜಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಲವು ಜನಪರ ಕಾರ್ಯಗಳನ್ನು ಮಾಡುತ್ತಿದ್ದು, ಮಹಿಳೆಯರಿಗೆ ನವ ಚೈತನ್ಯ ತುಂಬಲು ಸಹಕಾರಿಯಾಗಿದೆ. ಇಂತಹ ಕಾರ್ಯಕ್ರಮ ಸದ್ಬಳಕೆ ಮಾಡಿಕೊಳ್ಳಲು ಸಲಹೆ ನೀಡಿದ ಅವರು ಮಹಿಳೆಯರ ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಮಾಹಿತಿ ನೀಡಿದರು.

ಇದೇ ವೇಳೆ ಮಹಿಳಾ ಸದಸ್ಯರಿಗೆ ಆಟೋಟ ಸ್ಪರ್ಧೆ ಏರ್ಪಡಿಸಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು. ಒಕ್ಕೂಟದ ಅಧ್ಯಕ್ಷೆ ಆಶಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಕಾಲೇಜಿನಲ್ಲಿ ಬಿಎಸ್ಸಿ ತರಗತಿ ಆರಂಭಿಸಲು ಕ್ರಮ: ಶಾಸಕ ಅನಿಲ್



3.5 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ಅನಿಲ್ ಗುದ್ದಲಿ ಪೂಜೆ ನೆರವೇರಿಸಿದರು.

ಸರಗೂರು, ಮಾ.14– ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎಸ್ಸಿ ತರಗತಿ ಆರಂಭಿಸಲು ಕ್ರಮ ವಹಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಗುರುವಾರ 3.5 ಕೋಟಿ ವೆಚ್ಚದಲ್ಲಿ 7 ಕೊಠಡಿ, ಗ್ರಂಥಾಲಯ, 2 ಶೌಚಾಲಯ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕೋಟೆ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿಎಸ್ಸಿ ತರಗತಿ ಆರಂಭಿಸಲು ಬೇಡಿಕೆ ಇತ್ತು ಹೀಗಾಗಿ ಅಲ್ಲಿ ತರಗತಿ ಆರಂಭಿಸಲು ಕ್ರಮ ವಹಿಸಲಾಗಿದೆ. ಅದೇ ಮಾದರಿ ಸರಗೂರಿನಲ್ಲೂ ತರಗತಿ ಆರಂಭಕ್ಕೆ ಕ್ರಮ ವಹಿಸಲಾಗುವುದು. ಈ ಸಂಬಂಧ ಸರ್ಕಾರದ ಗಮನ ಸೆಳೆಯಲಾಗುವುದು ಎಂದರು.

ಶಾಸಕನಾದ ಮೇಲೆ ಸರಗೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ನೂತನ ಕಟ್ಟಡಕ್ಕೆ ಬೇಡಿಕೆ ಇಟ್ಟು ವಿಧಾನಸೌಧದಲ್ಲಿ ಚರ್ಚಿಸಿದ್ದೆ. ಆಗಿನ ಸರ್ಕಾರ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿತ್ತು. ಇದರಿಂದಾಗಿ ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲಿದೆ. ಯಾರೂ ಶಿಕ್ಷಣದಿಂದ ವಂಚಿತರಾಗಬಾರದೆಂದು ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಅನುದಾನ ಬಿಡುಗಡೆ ಮಾಡಿಸಿಕೊಂಡು ಬಂದಿದ್ದೇನೆ. ಮುಂದಿನ ದಿನಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಭರವಸೆ ನೀಡಿದರು.

ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಉಪನ್ಯಾಸಕರ ಭರ್ತಿಗೆ ಈಗಾಗಲೇ ಕ್ರಮ ವಹಿಸಲಾಗಿದೆ. ಅದೇ ರೀತಿ ಉಪನ್ಯಾಸಕರೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ. ಅದನ್ನು ಹೀಗೆ ಮುಂದುವರಿಸಿಕೊಂಡು ಹೋಗಬೇಕು ಎಂದ ಅವರು ಮುಂದಿನ ದಿನಗಳಲ್ಲಿ ಕಾಲೇಜಿನ ಸುತ್ತ ಕಾಪೌಂಡ್ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು. ಅಲ್ಲದೇ ಕಾಲೇಜಿಗೆ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದರು.

ಇದೇ ವೇಳೆ ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಪ್ರಾಂಶುಪಾಲ ಎಂ.ಜೆ.ದಯಾನಂದ, ಕರ್ನಾಟಕ ಹೌಸಿಂಗ್ ಬೋರ್ಡ್ ಎಇ ಅಶ್ವಿನ್, ಕಾರ್ತಿಕ್, ರಮೇಶ್, ಜಿಪಂ ಉಪಾಧ್ಯಕ್ಷೆ ಭಾಗ್ಯಲಕ್ಷ್ಮಿ, ಮಂಜುನಾಥ್, ಸುದರ್ಶನ್, ರಾಜು, ಕಾಲೇಜು ಉಪಾನ್ಯಾಸಕ ರಾದ ವೆಂಕಟಮ್ಮ, ಮಂಜುಳಾದೇವಿ, ಡಾ. ದೀಪ, ಎಂ.ಬಿ. ಯತೀಶ್, ಎಸ್.ಆರ್.ಡಾ. ಶೃತಿ, ಜೆ.ಕವಿತಾ, ಎಂ.ಬಿ.ಅಲಮೇಲ ಕುಮಾರಿ, ಭಾಗ್ಯಮ್ಮ, ವಿನಯ್ ಗುರೂಜಿ ಇನ್ನಿತರರಿದ್ದರು.

ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅಪಾರ

ಬಾಲಕಿಯರ ಪ್ರೌಢಶಾಲೆಯಲ್ಲಿ ಬಿಇಓ ಶೋಭಾ ಶೌಚಾಲಯ ಉದ್ಘಾಟನೆ



ತಿ.ನರಸೀಪುರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಶೌಚಾಲಯವನ್ನು ಬಿಇಓ ಶೋಭಾ ಉದ್ಘಾಟಿಸಿದರು.

ತಿ.ನರಸೀಪುರ, ಮಾ.14– ಸಮಾಜದಲ್ಲಿ ಗಂಡು, ಹೆಣ್ಣು ಎಂಬ ಲಿಂಗ ತಾರತಮ್ಯ ಇರಬಾರದು. ಪುರುಷ ಪ್ರಧಾನ ಸಮಾಜದಿಂದ ಮಾತ್ರ ದೇಶದ ಅಭಿವೃದ್ಧಿ ಅಸಾಧ್ಯ. ದೇಶದ ಅಭಿವೃದ್ಧಿಗೆ ಮಹಿಳೆಯರ ಪಾತ್ರವೂ ಬಹಳಷ್ಟಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ ತಿಳಿಸಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಮೈಸೂರಿನ ನಾರಿ ಟ್ರಸ್ಟ್ ಸಂಸ್ಥೆ ಎಲ್ಯೂಷಿಯನ್ ಸಂಸ್ಥೆ ಸಂಯುಕ್ತಾಶ್ರಯದಲ್ಲಿ 5.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶೌಚಾಲಯ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಮನೆಗೆ ಮಾತ್ರ ಸೀಮಿತವಾಗಿದ್ದ ಹೆಣ್ಣು ಮಕ್ಕಳು ಇಂದು ಚಂದ್ರಯಾನ ಯೋಜನೆ ವಿಜ್ಞಾನಿಗಳಾಗಿ ಬೆಳೆದಿದ್ದಾರೆ. ಹೀಗಾಗಿ ಹೆಣ್ಣು ಮಕ್ಕಳು ಕೀಳರಿಮೆ ಬಿಟ್ಟು ಪ್ರತಿ ಕೆಲಸ ತಾವು ಮಾಡಬಲ್ಲೆವು ಎಂಬ ದೃಢ ನಿಶ್ಚಯ ಹಾಗೂ ಧೈರ್ಯ ಮಾಡಬೇಕು ಎಂದರು.

ನಾರಿ ಟ್ರಸ್ಟ್ ಬಾಲಕಿಯರ ಶಾಲೆಯಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಡುವ ಮೂಲಕ ಉತ್ತಮ ಕಾರ್ಯ ಮಾಡಿದೆ. ಶಾಲೆಯಲ್ಲಿ ಹಿಂದಿನಿಂದಲೂ ಶೌಚಾಲಯದ ಕೊರತೆ ಇತ್ತು. ಈಗ ನಾರಿ ಟ್ರಸ್ಟ್ ಸಾಮಾಜಿಕ ಕಳಕಳಿಯಿಂದ ಹೆಣ್ಣು ಮಕ್ಕಳಿಗೆ ಅನುಕೂಲವಾಗಿದೆ ಎಂದರು.

ನಾರಿ ಟ್ರಸ್ಟ್ ಮುಖ್ಯಸ್ಥ ಮುರುಳೀಧರ್ ಮಾತನಾಡಿ, ಹೆಣ್ಣು ಮಕ್ಕಳಿಗೆ ಸಾಕಷ್ಟು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸಿ ಸರ್ಕಾರಿ ಶಾಲೆಗಳನ್ನು ಆರೋಗ್ಯಕರವಾಗಿಸಲು ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಅಗತ್ಯವಿರುವ ಶೌಚಾಲಯ ನಿರ್ಮಿಸಲಾಗಿದ್ದು, ಇದರ ನಿರ್ವಹಣೆ ಸಮರ್ಪಕವಾಗಿ ಮಾಡುವುದು ಮುಖ್ಯ ಎಂದರು.

ಶಾಲಾವರಣದಲ್ಲಿ 12 ಶೌಚಾಲಯ ನಿರ್ಮಿಸಲಾಗಿದೆ. ಸಂಸ್ಥೆಯಿಂದ ತಲಕಾಡಿನ ಸರ್ಕಾರಿ ಶಾಲಾ ಮಕ್ಕಳಿಗೆ ಸೈನ್ಸ್ ಲ್ಯಾಬ್, ಶೌಚಾಲಯ, ಕಾಂಪೌಂಡ್, ನಲಿಕಲಿ ಯೋಜನೆಯಡಿ ಪೀಠೋಪಕರಣಗಳನ್ನು ನೀಡಲಾಗಿದೆ. ಪ್ರತಿ ವರ್ಷ ಜೂನ್ ಮಾಹೆಯಲ್ಲಿ 8 ಸಾವಿರ ಶಾಲಾ ಮಕ್ಕಳಿಗೆ 6 ಸಾವಿರ ನೋಟ್‌ಬುಕ್, ಪೆನ್, ಪೆನ್ಸಿಲ್ ನೀಡಲಾಗುತ್ತಿದೆ ಎಂದರು.

ಖಾಸಗಿ ಅನುದಾನಿತ ಶಾಲೆಗಳು ಶೌಚಾಲಯಗಳನ್ನು ನಿರ್ವಹಣೆ ಮಾಡುತ್ತಿಲ್ಲ ಎಂದ ಅವರು ನಾವು ಮೈಸೂರಿನ ಸುಬ್ಬಣ್ಣ ಸಂಸ್ಥೆಗೆ ಸಹಕಾರ ನೀಡುತ್ತಿದ್ದೇವೆ. ಕ್ಯಾತನಹಳ್ಳಿ, ಅಗರ–ಮಾಂಬಳ್ಳಿ ಶಾಲೆ ದುರಸ್ಥಿ ಕಾರ್ಯ ಸೇರಿದಂತೆ ಚಾಮುಂಡಿ ಬೆಟ್ಟದ ಶಾಲೆಗೆ ಅನೇಕ ಉಪಯುಕ್ತ ಸಹಕಾರ ನೀಡುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಭಾಸ್ಕರ್, ಬಿಆರ್‌ಪಿ ರಾಜಶೇಖರ್, ಬಿಆರ್‌ಸಿ ನಾಗೇಶ್, ಮುಖ್ಯ ಶಿಕ್ಷಕಿ ಜ್ಞಾನೇಶ್ವರಿ, ಶಿಕ್ಷಕ ಜಿ.ಮಹೇಶ್, ಅನಿತಾ, ಶಶಿಕಲಾ, ಕೆ.ಸಾವಿತ್ರಿ, ಸಿಂಚನ ಮತ್ತಿತರರಿದ್ದರು.


ತ್ಯಾಗು ಏಜೆನ್ಸೀಸ್ ಮಾಲೀಕರು ಹಾಗೂ
ಜನಪ್ರಿಯ ಕಾಂಗ್ರೆಸ್ ಯುವ ಮುಖಂಡರಾದ
ಶ್ರೀ ತ್ಯಾಗರಾಜು (ಬೋಗಾದಿ)
ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು : ಬೋಗಾಧಿ ಗ್ರಾಮಸ್ಥರು ಹಾಗೂ ತ್ಯಾಗರಾಜು ಗೆಳೆಯರ ಬಳಗ